ನಮ್ಮ ದೇಶದ ಇತಿಹಾಸದ ಪುಟಗಳನ್ನು ತಿರುವಿ ನೋಡಿದಾಗ ಇದಕ್ಕೊಂದು ಭವ್ಯವೂ ದಿವ್ಯವೂ ಆದ ಪ್ರಾಚೀನಕಾಲವೊಂದಿತ್ತು ಎಂಬುದು ನಮಗೆ ವೇದ್ಯವಾಗುವ ಅದ್ಭುತ ವಿಚಾರ. ಇದು ಯಾಕೆ ಅದ್ಭುತ ಎಂದರೆ ಪ್ರಪಂಚದ ಬೇರೆ ಯಾವ ದೇಶದವರೂ ಕೂಡಾ ಇಂತಹ ಒಂದು ಭವ್ಯ ಇತಿಹಾಸವನ್ನು ತಮ್ಮ ದೇಶಗಳಿಗೆ ಕಲ್ಪನೆ ಮಾಡಲೂ ಸಾಧ್ಯವಾಗದು. ಅಷ್ಟೊಂದು ವೈಭವಶಾಲಿಯಾಗಿತ್ತು ನಮ್ಮ ಹೆಮ್ಮೆಯ ಭಾರತ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಕೃಷಿ, ವಾಣಿಜ್ಯ, ಕಲೆ, ಸಾಹಿತ್ಯ, ಸಾಂಸ್ಕೃತಿಕ ಹೀಗೆ ದೇಶದ ಯವುದೇ ಕ್ಷೇತ್ರಗಳನ್ನು ಗಮನಿಸಿ ನೋಡಿದರೂ ಅಲ್ಲಿ ಒಂದು ಪರಿಪಕ್ವತೆ ಎದ್ದು ಕಾಣುತ್ತದೆ. ನಮ್ಮ ದೇಶಾಭಿಮಾನದಿಂದ ಎದ್ದು ಕುಣಿಯುವಂತಾಗುತ್ತದೆ. ಹೆಚ್ಚೇಕೆ ವಿದೇಶೀ ಯಾತ್ರಿಕರೂ, ವಿದ್ವಾಂಸರೂ ಹಾಡಿ ಹೊಗಳಿದ ದೇಶ ನಮ್ಮದು. ಹಾಗಾದರೆ ಇಲ್ಲೊಂದು ಸಹಜ ಪ್ರಶ್ನೆ ಮೂಡುತ್ತದೆ. ಅದೇನೆಂದರೆ ನಮ್ಮ ದೇಶದ ಈ ಪ್ರಾಚೀನ ಗತವೈಭವಕ್ಕೆ ಕಾರಣವಾದರೂ ಏನು? ಅದನ್ನು ಸಾಧಿಸಿದ ಬಗೆ ಎಂತು? ಇತರ ದೇಶದವರಿಗೆ ಇದು ಏತಕ್ಕೆ ಸಾಧ್ಯವಾಗಲಿಲ್ಲ? ಇತ್ಯಾದಿ... ಈ ನಿಟ್ಟಿನಲ್ಲಿ ಚಿಂತನೆ ಮಾಡಿದರೆ ಅದಕ್ಕೆ ಸಿಗುವ ಉತ್ತರ ಅದು **'ಭಾರತೀಯ ಆರ್ಷೇಯ ಶಿಕ್ಷಣ'**. ಯಾಕೆಂದರೆ ಸರಿಯಾದ ಶಿಕ್ಷಣದಿಂದ ಮಾತ್ರ ಯೋಗ್ಯ ವ್ಯಕ್ತಿಗಳನ್ನು ನಿರ್ಮಾಣ ಮಾಡಲು ಸಾಧ್ಯ. ಅಂತಹ ಯೋಗ್ಯ, ಸಮರ್ಥ ವ್ಯಕ್ತಿಗಳಿಂದ ಮಾತ್ರ ಉತ್ತಮ ಸಮಾಜವನ್ನು ಹೊಂದಿದ ಸದೃಢ ಶ್ರೀಮಂತ ರಾಷ್ಟ್ರ ಮೈತಾಳಲು ಸಾಧ್ಯ.

ಶಿಕ್ಷಣವೆಂದಾಗಲೆಲ್ಲಾ ಸಾಮಾನ್ಯವಾಗಿ ಕಣ್ಣ ಮುಂದೆ ಬರುವ ಚಿತ್ರಣವೆಂದರೆ ಓದು, ಬರಹ ಇತ್ಯಾದಿ ಮತ್ತು ಅವುಗಳನ್ನು ಕಲಿಸುವ ಶಾಲಾಕಾಲೇಜುಗಳು, ಅಲ್ಲಿನ ವಿದ್ಯಾರ್ಥಿಗಳು, ಶಿಕ್ಷಕರು ಇತ್ಯಾದಿ ಸಾಂಸ್ಥಿಕ ವ್ಯವಸ್ಥೆಗಳು. (Institution-alized system). ಆದರೆ ಪ್ರಾಚೀನ ಭಾರತದ ಶಿಕ್ಷಣ ವ್ಯವಸ್ಥೆಯ ಪರಿಕಲ್ಪನೆಯೇ ಬೇರೆ ತೆರನಾಗಿದೆ. ಇಲ್ಲೇ ನಮಗೂ ಇತರ ದೇಶದವರಿಗೂ ಇರುವ ವ್ಯತ್ಯಾಸ.

Education ಮತ್ತು ವಿದ್ಯಾಭ್ಯಾಸ ?

CC-0. Nepal Sanskrit Academy, Kathmandu Collection

ಇಂಗ್ಲೀಷಿನ Educationಗೂ ಭಾರತದ 'ವಿದ್ಯಾಭ್ಯಾಸ'ಕ್ಕೂ ಪರಿಕಲ್ಪನೆಗಳಲ್ಲಿ ಬಹಳಷ್ಟು ಅಂತರವಿದೆ. Education ಎಂಬ ಪದವು ಲ್ಯಾಟಿನ್ ಭಾಷೆಯ educare ಎಂಬ ಪದದಿಂದ ನಿಷ್ಪನ್ನವಾಗಿದ್ದು to learn ಅಥವಾ to know ಎಂಬ ಸರಳ ಅರ್ಥವನ್ನು ನೀಡುತ್ತದೆ. 'ವಿದ್ಯಾಭ್ಯಾಸ' ಎಂಬ ಪದವು 'ವಿದ್ಯಾ' ಎಂಬ ಸಂಸ್ಕೃತ ಪದದೊಂದಿಗಿದೆ. ಈ ಪದಕ್ಕೆ ಋಷಿವಾಕ್ಯವೊಂದು ಶ್ರೇಷ್ಠ ಅರ್ಥವನ್ನು ಹೀಗೆ ಕೊಟ್ಟಿದೆ. "ಸಾ ವಿದ್ಯಾ ಯಾ ವಿಮುಕ್ತಯೇ" ಯಾವುದು ಬಂಧನದಿಂದ ಬಿಡುಗಡೆ ಮಾಡುತ್ತದೆಯೋ ಅದೇ ವಿದ್ಯೆ. ವೇದಕಾಲೀನ ಋಷಿಗಳಾದ ಆಂಗೀರಸ ಋಷಿ ವಿದ್ಯೆಯನ್ನು ಎರಡಾಗಿ ವಿಭಾಗಿಸಿ ತಿಳಿಸಿದರು. ಒಂದು 'ಪರಾ ವಿದ್ಯಾ', ಇನ್ನೊಂದು 'ಅಪರಾ ವಿದ್ಯಾ' (ಮುಂಡಕೋಪನಿಷತ್ತು). ಇದರಲ್ಲಿ ಮೊದಲನೆಯದು ಪರಬ್ರಹ್ಮ ವಸ್ತುವಿನ ಕುರಿತಾದ ಶುದ್ಧಜ್ಞಾನವಾಗಿದೆ. ಎರಡನೆಯದು ಅಪರಾವಿದ್ಯಾ, ಲೌಕಿಕ ಜಗತ್ತಿಗೆ ಸಂಬಂಧಿಸಿದ ಜ್ಞಾನವಾಗಿದೆ. ವಿದ್ಯಾಭ್ಯಾಸವು ವ್ಯಕ್ತಿಯನ್ನು ಯಾವುದೋ ಉದ್ಯೋಗಕ್ಕಾಗಿ ಅಥವಾ ಜೀವಿಕೆಗಾಗಿ ಕೊಡುವ ತರಬೇತಿಯಲ್ಲ. ಅದರ ಬದಲು ಅದು ವ್ಯಕ್ತಿಯ ಸರ್ವಾಂಗೀಣ ವಿಕಾಸ. (360° development) ಅಥವಾ ಪರಿಪೂರ್ಣ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾಗುವ ನಿರಂತರ ಪ್ರಕ್ರಿಯೆ ಹಾಗಾಗಿ ಇದು educationನಂತೆ ಯಾವುದೋ ಹಂತಕ್ಕೆ ಮುಕ್ತಾಯ ಎಂಬುದಿಲ್ಲ. ವಿದ್ಯಾಭ್ಯಾಸದ ನಿರಂತರತೆಯ ಬಗ್ಗೆ ಸುಭಾಷಿತ ಶ್ಲೋಕವೊಂದು ಹೀಗೆ ತಿಳಿಸುತ್ತದೆ.

ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯಃ ಸ್ವಮೇಧಯಾ ।
ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ಕಾಲಕ್ರಮೇಣ ಚ ॥

(ಅರ್ಥ – ಶಿಷ್ಯನಾದವನು ಆಚಾರ್ಯನಿಂದ ಕಾಲುಭಾಗವನ್ನೂ, ತನ್ನ ಸ್ವಂತ ಬುದ್ಧಿಯಿಂದ ಇನ್ನು ಕಾಲು ಭಾಗವನ್ನೂ, ಸಹಾಧ್ಯಾಯಿಗಳಿಂದ ಮತ್ತು ಕಾಲುಭಾಗವನ್ನು ಹಾಗೂ ಉಳಿದ ಕಾಲುಭಾಗವನ್ನು ಕಾಲಕ್ರಮೇಣ ಕಲಿಯುತ್ತಾನೆ) ಇಂಗ್ಲೀಷಿನಲ್ಲಿ ಹೇಳುವಂತೆ **"learning is from womb to tomb"**. ಇಲ್ಲಿ ಗಮನಿಸಬೇಕಾದದ್ದು ಏನೆಂದರೆ ಪಾಶ್ಚಾತ್ಯರ education ಎಂಬುದು 'school-ing' ಎನ್ನುವ ಸೀಮಿತ ವ್ಯಾಪ್ತಿಗೆ ಒಳಪಟ್ಟಿದೆ. ಹಾಗಾಗಿ ಅಂದು ಒಂದು ಹಂತಕ್ಕೆ ಮುಗಿದು ಹೋಗುತ್ತದೆ. ಆದರೆ ಭಾರತೀಯ ದೃಷ್ಟಿಯಿಂದ ವಿದ್ಯಾಭ್ಯಾಸವು ಜೀವನದಲ್ಲಿ ಹಾಸುಹೊಕ್ಕಾಗಿದೆ ಮತ್ತು ಅದಕ್ಕೆ ಮುಕ್ತಾಯವೇ ಇಲ್ಲ. ಇದೊಂದು ಮನುಷ್ಯನ ವಿಕಾಸಗೊಳ್ಳುವ ಪ್ರಕ್ರಿಯೆಗೆ ಕಾರಣವಾಗುವ ಜೀವನದ ಒಂದು ಅಂಗ ಎನ್ನಬಹುದು. ಅದು ಮನುಷ್ಯನನ್ನು ಆತನ ವ್ಯಕ್ತಿತ್ವದ ಅತಿ ಎತ್ತರಕ್ಕೆ ಕೊಂಡೊಯ್ಯುತ್ತದೆ ಅಥವಾ ಅವನನ್ನು ಮನುಷ್ಯತ್ವದಿಂದ ದೈವತ್ವದ ಕಡೆಗೆ ಒಯ್ಯುತ್ತದೆ ಅಥವಾ ಮಾನವನನ್ನು ಮಾಧವನನ್ನಾಗಿಸುವುದೇ ವಿದ್ಯಾಭ್ಯಾಸ

CC-0, Nepal Sanskrit Academy, Kathmandu Collection

ಅಥವಾ ಭಾರತೀಯ ಆರ್ಷೇಯ ಶಿಕ್ಷಣ. ಹಾಗಾಗಿ 'ವಿದ್ಯಾಭ್ಯಾಸ'ವು education ನ ಪರ್ಯಾಯ ಪದವಾಗಿ ಕೊಡಬಹುದು. ಮತ್ತು ವಿದ್ಯಾಭ್ಯಾಸವನ್ನು ಭಾರತೀಯ ಶಿಕ್ಷಣ ಎಂದರೇ ಯೋಗ್ಯ ಎಂದು ನನ್ನ ಅನಿಸಿಕೆ.

ಭಾರತೀಯ ಶಿಕ್ಷಣ ಅಥವಾ ವಿದ್ಯಾಭ್ಯಾಸದ ವ್ಯಾಪ್ತಿಯನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ಇವತ್ತಿನ ಆಧುನಿಕ ಶಿಕ್ಷಣದ ಯಾವುದೇ ಪೂರ್ವಾಗ್ರಹ ಪೀಡಿತ (prejudiced) ಮನಸ್ಥಿತಿ ಇರಬಾರದು. ಯಾಕೆಂದರೆ ಇದನ್ನು ಅರ್ಥಮಾಡಿಕೊಳ್ಳಲು ಇನ್ನೊಂದರ ಅವಲಂಬನೆ ಬೇಡ. ಈ ಶಿಕ್ಷಣ ಮಗುವಿಗೆ ತಾಯಿಯ ಗರ್ಭದಿಂದಲೇ ಪ್ರಾರಂಭವಾಗುತ್ತದೆ. ಮತ್ತು ಮುಂದುವರೆಯುತ್ತದೆ. ಹಾಗಾಗಿ ಭಾರತೀಯ ಶಿಕ್ಷಣವೆಂದು ಸರಿಯಾದ ಅರ್ಥದಲ್ಲಿ ಸಂಸ್ಕಾರವಾಗಿರುತ್ತದೆ. ಹಾಗಾಗಿ ತಂದೆ ತಾಯಿಗಳೇ ಮಗುವಿಗೆ ಮೊದಲನೆಯ ಗುರುಗಳು. ಕನ್ನಡದ ಪ್ರಸಿದ್ಧ ಉಕ್ತಿಯೊಂದು ಹೀಗೆ ಹೇಳುತ್ತದೆ. **"ಮನೆಯೇ ಮೊದಲ ಪಾಠಶಾಲೆ, ಜನನಿ ತಾನೆ ಮೊದಲ ಗುರುವು."** ಎಂದು. ಹೀಗೆ ಬಾಲ್ಯದಲ್ಲಿ ತಂದೆ ತಾಯಿಗಳಿಂದ ಸಿಗುವ ವಿದ್ಯಾಭ್ಯಾಸವನ್ನು **'ಅಧಿಶೀಲ ಶಿಕ್ಷಣ'** ಎನ್ನಲಾಗುತ್ತದೆ. ಜೀವನಕ್ಕೆ ಅದೇ ನಿಜವಾದ **'ಬುನಾದಿ ಶಿಕ್ಷಣ'**ವಾಗಿದೆ. ನಮ್ಮ ದೇಶದಲ್ಲಿ ಪ್ರಾಚೀನ ಕಾಲದಲ್ಲಿ ಈ ಅಧಿಶೀಲ ಶಿಕ್ಷಣ ಪ್ರತಿಮನೆಯಲ್ಲಿಯೂ ಎಲ್ಲಾ ಮಕ್ಕಳಿಗೂ ಸಿಗುತ್ತಿತ್ತು. ಹಾಗಾಗಿ ಮಕ್ಕಳು ಸುಸಂಸ್ಕೃತರಾಗಿ, ಜವಾಬ್ದಾರಿಯುತ ಪ್ರಜೆಗಳಾಗಿ ಬೆಳೆಯುತ್ತಿದ್ದರು. ಪ್ರಸ್ತುತ ಕಾಲದಲ್ಲಿ ಇದು ಪ್ರಶ್ನೆಯಾಗಿಯೇ ಉಳಿದಿದೆ. ಮುಂದಿನ ಹಂತದಲ್ಲಿ 8 ವರ್ಷಗಳ ನಂತರ ವಿದ್ಯಾಭ್ಯಾಸಕ್ಕಾಗಿ ಮಕ್ಕಳನ್ನು ಗುರುಗಳ ಬಳಿಗೆ ಅಂದರೆ ಗುರುಕುಲಗಳಿಗೆ ಕಳುಹಿಸುತ್ತಿದ್ದರು.

ಗುರುಶಿಷ್ಯಪರಂಪರೆ

ಪ್ರಾಚೀನ ಭಾರತದ ಭವ್ಯ ಪರಂಪರೆಯನ್ನು ರೂಪಿಸುವಲ್ಲಿ ಇನ್ನೊಂದು ಶ್ರೇಷ್ಠ ಪರಂಪರೆಯ ಪ್ರಮುಖ ಪಾತ್ರವಿದೆ. ಅದೇನೆಂದರೆ ಗುರು-ಶಿಷ್ಯ ಪರಂಪರೆ. ಇದಕ್ಕೆ ಯುಗಗಳ ಇತಿಹಾಸವಿದೆ. ವಿಶ್ವಾಮಿತ್ರ ಹಾಗೂ ಶ್ರೀರಾಮ, ಮಹರ್ಷಿ ಸಾಂದೀಪನಿ ಹಾಗೂ ಶ್ರೀಕೃಷ್ಣ, ಸಮರ್ಥರಾಮದಾಸರು ಹಾಗೂ ಛತ್ರಪತಿ ಶಿವಾಜಿ, ಶ್ರೀ ರಾಮಕೃಷ್ಣ ಹಾಗೂ ವಿವೇಕಾನಂದ ಇತ್ಯಾದಿ. ಅನೇಕ ಶ್ರೇಷ್ಠ ಗುರು-ಶಿಷ್ಯರ ಹೆಸರುಗಳನ್ನು ಪಟ್ಟಿ ಮಾಡುತ್ತಾ ಹೋಗಬಹುದು. ಮನುಷ್ಯರ ಸಂಬಂಧಗಳಲ್ಲಿ ಅತ್ಯಂತ ಪವಿತ್ರವಾದ ಸಂಬಂಧ ಗುರುಶಿಷ್ಯರ ಸಂಬಂಧ. ಇದು ಕಾಣಸಿಗುವುದು ಗುರುಕುಲಗಳಲ್ಲಿ ಮಾತ್ರ, ಪ್ರಾಚೀನ ಭಾರತದಲ್ಲಿ ಅಸಂಖ್ಯಾತ ಗುರುಕುಲಗಳಿದ್ದವು ಎಂದು ತಿಳಿದುಬರುತ್ತದೆ. ಮತ್ತು ಇಂತಹ ಗುರುಕುಲಗಳಲ್ಲಿ ರಾಜಮಹಾರಾಜರ ಮಕ್ಕಳು ಹಾಗೂ ಜನಸಾಮಾನ್ಯರ ಮಕ್ಕಳು ಒಟ್ಟಿಗೆ ವಿದ್ಯಾಭ್ಯಾಸ ಮಾಡುತ್ತಿದ್ದರು ಮತ್ತು ಪ್ರತಿಯೊಬ್ಬರೂ ಒಟ್ಟಾಗಿ ಬೆರೆತು, ಕಲಿತು

CC-0. Nepal Sanskrit Academy, Kathmandu Collection

ಉತ್ತಮ ವ್ಯಕ್ತಿಗಳಾಗಿ ಸಮಾಜಕ್ಕೆ ಕಾಲಿಡುತ್ತಿದ್ದರು.

ಭಾರತದ ಪ್ರಾಚೀನ ವಿದ್ಯಾಸ್ಥಾನಗಳು (Ancient Indian Curriculum) –

ಆಧುನಿಕ ಶಿಕ್ಷಣದ ಕ್ಷೇತ್ರದಲ್ಲಿ curriculum, syllabus, pedagogy, ಇತ್ಯಾದಿ ಪಾರಿಭಾಷಿಕ ಶಬ್ದಗಳು ಬಹು ಪ್ರಚಲಿತವಾಗಿವೆ. ಹಾಗಾದರೆ ಇವೆಲ್ಲವೂ ಪ್ರಾಚೀನ ಭಾರತದ ಶಿಕ್ಷಣದಲ್ಲಿ ಇವೆಯೇ? ಎಂಬ ಪ್ರಶ್ನೆಗೆ ಉತ್ತರ ಇದೆ. ಇವತ್ತಿನ ಮಾನದಂಡಗಳನ್ನು ಭಾರತೀಯ ವಿದ್ಯೆಗಳಿಗೆ ಅನ್ವಯಿಸಬಾರದು. ಯಾಕೆಂದರೆ ಪ್ರಾಚೀನ ಭಾರತದಲ್ಲಿ ವಿದ್ಯಾಭ್ಯಾಸವು ಕಾಲ ದೇಶಗಳಿಗೆ ಸೀಮಿತವಾಗಿರುತ್ತಿರಲಿಲ್ಲ. ವ್ಯಕ್ತಿಕೇಂದ್ರಿತ ಆದರೆ ವ್ಯವಸ್ಥೆ ಸಾಮೂಹಿಕವಿರುತ್ತಿತ್ತು. ಅಂದರೆ ಪ್ರತಿಯೊಬ್ಬ-ರಿಗೂ ಅವರವರ ಸಾಮರ್ಥ್ಯ ಹಾಗೂ ಅಭಿರುಚಿಗೆ ತಕ್ಕಂತೆ ಯೋಗ್ಯ ಶಿಕ್ಷಣ ದೊರೆಯುತ್ತಿತ್ತು. ವಿದ್ಯಾರ್ಥಿಗಳು ಕಲಿಯಬೇಕಾದ ವಿಷಯಗಳನ್ನು "ವಿದ್ಯಾಸ್ಥಾನಗಳು" ಎಂಬುದಾಗಿ ಕರೆಯಲಾಗುತ್ತಿತ್ತು. ಇವುಗಳಲ್ಲಿ ಹದಿನೆಂಟು ಪ್ರಕಾರಗಳಿದ್ದವು. ಹಾಗೂ 64 ಕಲೆಗಳು (skills) ಇದ್ದವು. ಈ ಹದಿನೆಂಟು ವಿದ್ಯಾಸ್ಥಾನಗಳಲ್ಲಿ 4 ವೇದಗಳು (ಋಗ್, ಯಜುರ್, ಸಾಮ, ಅಥರ್ವ), 6 ವೇದಾಂಗಗಳು (ಶಿಕ್ಷಾ, ವ್ಯಾಕರಣ, ನಿರುಕ್ತ, ಛಂದ, ಜ್ಯೌತಿಷ ಹಾಗೂ ಕಲ್ಪ), 4 ಉಪವೇದಗಳು (ಆಯುರ್ವೇದ ಧನುರ್ವೇದ, ಗಂಧರ್ವವೇದ, ಅರ್ಥಶಾಸ್ತ್ರ ಅಥವಾ ಸ್ಥಾಪತ್ಯವೇದ), ಇವಲ್ಲದೇ ಮೀಮಾಂಸಾ, ನ್ಯಾಯ, ದರ್ಶನಗಳು, ಧರ್ಮಶಾಸ್ತ್ರಗ್ರಂಥಗಳು. ಇವುಗಳೊಂದಿಗೆ 64 ಕಲೆಗಳು ಜೀವನಕ್ಕೆ ಬೇಕಾದ ಕೌಶಲಗಳಾಗಿದ್ದು ವ್ಯಕ್ತಿಯ ಜೀವನೋಪಾಯಕ್ಕೂ ಸಹಾಯ ಮಾಡುತ್ತವೆ. ಪ್ರಾಚೀನ ಭಾರತದ ಇಷ್ಟೊಂದು ವಿಕಸಿತ ಮತ್ತು ಪ್ರಬುದ್ಧವಾಗಿರುವ ವಿದ್ಯಾಭ್ಯಾಸದ ಕ್ಷೇತ್ರದಿಂದಾಗಿ ಇಲ್ಲಿನ ವಿದ್ಯಾರ್ಥಿಗಳು ವಿದ್ಯಾರ್ಜನೆಗೈದು ನಿಜವಾಗಿಯೂ 'ಭಾ' 'ರತ'ರಾದರು ಹಾಗೂ ದೇಶವನ್ನು ಎಲ್ಲಾ ರಂಗಗಳಲ್ಲಿಯೂ ಶ್ರೀಮಂತಗೊಳಿಸಿದ್ದು ಅಚ್ಚರಿ ಏನಲ್ಲ. ಅವರ ಮೂಲಕ ಭಾರತೀಯ ಜ್ಞಾನ ಪರಂಪರೆಯಾಗಿ ಹರಿದು ಬಂದಿದೆ. ಇನ್ನೂ ಮುಂದುವರಿದು ಬರುತ್ತಿದೆ.

ಪಾಶ್ಚಾತ್ಯ ಜ್ಞಾನ ವಿಜ್ಞಾನ ಶಾಖೆಗಳ ವಿಕಾಸ ಮತ್ತು ಪರಿಣಾಮ ಜಗತ್ತು ಪರಿವರ್ತನಶೀಲ ಗುಣವುಳ್ಳದ್ದು. ಅದರಂತೆಯೇ ಕಾಲದ ಅವಶ್ಯಕತೆಗೆ ತಕ್ಕಂತೆ ಹೊಸ ಆವಿಷ್ಕಾರಗಳು ನಡೆಯುತ್ತವೆ, ನಡೆಯಬೇಕು. ಆಗ ಜಗತ್ತು ಮುಂದೆ ಸಾಗುತ್ತದೆ. ಈ ಹಿನ್ನೆಲೆಯಿಂದ ನೋಡಿದಾಗ ಪಾಶ್ಚಾತ್ಯ ಜಗತ್ತಿನಲ್ಲಿ ಅನೇಕ ಜ್ಞಾನವಿಜ್ಞಾನ ಶಾಖೆಗಳು ವಿಕಸಿತವಾಗುತ್ತಾ ಹೋಯಿತು. ಇನ್ನೂ ನಡೆಯುತ್ತಲೇ ಇದೆ. ಅದರಲ್ಲೂ ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಂತೂ ಅದ್ಭುತವಾದ ಆವಿಷ್ಕಾರಗಳು ನಡೆದಿವೆ. ಅದೆಲ್ಲವನ್ನೂ ಆಧುನಿಕ ಜಗತ್ತು ಅನುಭವಿಸುತ್ತಿದೆ. ಈ ಬೆಳವಣಿಗೆಗಳು ಮನುಷ್ಯನ ಜೀವನದ ಎಲ್ಲಾ ಕ್ಷೇತ್ರಗಳನ್ನು ಆವರಿಸಿದೆ ಮತ್ತು ಬೆಳೆಸಿದೆ. ಆದರೆ ವಿಜ್ಞಾನ ತಂತ್ರಜ್ಞಾನಗಳ

CC-0. Nepal Sanskrit Academy, Kathmandu Collection

ಬೆಳವಣಿಗೆ ಮನುಷ್ಯನ ಅರ್ಥಕಾಮಗಳನ್ನು ತುಷ್ಟಿ-ಪುಷ್ಟಿಗೊಳಿಸುವುದೇ ಹೊರತು ಅವನ ಧರ್ಮವನ್ನಲ್ಲ ಎಂಬುದು ನಿಚ್ಚಳವಾಗಿ ತೋರುತ್ತಿದೆ. ತಂತ್ರಜ್ಞಾನ ಬೆಳೆದಷ್ಟೂ ಭೌತಿಕ ಅನುಕೂಲತೆಗಳೇನೋ ದೈತ್ಯಾಕಾರವಾಗಿ ಬೆಳೆದಿವೆ. ಆದರೆ ಮಾನಸಿಕ ನೆಮ್ಮದಿ, ಆತ್ಮಶಾಂತಿ ಮರೀಚಿಕೆಯಾಗುತ್ತಿದೆ. ಸಾಮಾಜಿಕ ಜಾಲತಾಣಗಳ ಮೂಲಕ ಕ್ಷಣಾರ್ಧದಲ್ಲಿ ಜಗತ್ತಿನ ಮೂಲೆ ಮೂಲೆಗೂ ತಲುಪಬಹುದಾದರೂ ನಮ್ಮೊಳಗೆ ಪ್ರವೇಶಿಸಲು ಕಷ್ಟವಾಗುವ ಸ್ಥಿತಿ ಇದೆ. ಇಂತಹ ಆಂತರಿಕ ಸ್ಥಿತಿಗಳಲ್ಲಿ ಮನಸ್ಸಿಗೆ ದೃಢತೆಯನ್ನು ಅಥವಾ ವಿಶ್ವಾಸ ಮೂಡಿಸಲು ಉಪನಿಷತ್ತಿನ ಅಥವಾ ಗೀತೆಯ ಉಪದೇಶಗಳ ಮೊರೆ ಹೋಗಬೇಕಾಗುತ್ತದೆ ಎಂಬುದು ಅಷ್ಟೇ ಸತ್ಯವಾಗಿದೆ ಎಂದು ತೋರುತ್ತಿದೆ. ಹಾಗಾದರೆ ಈ ಜ್ಞಾನಶಾಖೆಗಳ ಸಮನ್ವಯ ಹೇಗೆ? ಅಥವಾ ಪಾಶ್ಚಾತ್ಯ ವಿಜ್ಞಾನ-ತಂತ್ರಜ್ಞಾನ ಹಾಗೂ ಭಾರತೀಯ ಜ್ಞಾನ ಪರಂಪರೆ, ಇವರಡನ್ನೂ ಹದವಾಗಿ ಸಮನ್ವಯಗೊಳಿಸಿ ಮನುಕುಲಕ್ಕೆ ಕಲ್ಯಾಣಕಾರಿಯಾಗಿಸುವ ಬಗೆ ಎಂತು ಎಂಬುದನ್ನು ಕುರಿತು ಚಿಂತನೆ ಮಾಡಿ ಆಚರಣೆಗೆ ತರಬೇಕಾಗಿದೆ.

ಋಷಿವಾಕ್ಯದೊಡನೆ ವಿಜ್ಞಾನ ಕಲೆಮೇಳವಿಸೆ.....

ಭಾರತೀಯ ಸಂಸ್ಕೃತಿಯನ್ನು ಪ್ರಪಂಚದೆಲ್ಲೆಡೆ ಎತ್ತಿ ಹಿಡಿದ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು ನಮ್ಮ ದೇಶಕ್ಕೆ ಯಾವ ರೀತಿಯ ಮಾದರಿ ಬೇಕು ಎಂದು ನಿರೂಪಿಸುವಾಗ ಹೇಳಿದ ಮಾತು ಏನೆಂದರೆ "best of west & best of east" ಪಾಶ್ಚಾತ್ಯ ವಿಜ್ಞಾನ ತಂತ್ರಜ್ಞಾನಗಳೊಂದಿಗೆ ಭಾರತದ ಆಧ್ಯಾತ್ಮ ಜ್ಞಾನಗಳು ಮೇಳೈಸಬೇಕು. ಇದನ್ನೇ ಕನ್ನಡನಾಡಿನ ದಾರ್ಶನಿಕ ಕವಿ ಡಾ. ಡಿ.ವಿ. ಗುಂಡಪ್ಪನವರು ತಮ್ಮ ಕಗ್ಗವೊಂದರಲ್ಲಿ **"ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕೆ ಮಂಕುತಿಮ್ಮ"** ಎಂದು ಸುಂದರವಾಗಿ ತಿಳಿಸಿದ್ದಾರೆ. ಅದರಂತೆ ಪ್ರಸ್ತುತ ಕಾಲದಲ್ಲಿ ಭಾರತೀಯ ಜ್ಞಾನಪರಂಪರೆಯೊಂದಿಗೆ ಪಾಶ್ಚಾತ್ಯ ವಿಜ್ಞಾನ ತಂತ್ರಜ್ಞಾನಗಳ ಉಪಯುಕ್ತ ಅಂಶಗಳನ್ನು ವಿದ್ಯಾಭ್ಯಾಸದ ಬೇರೆ ಬೇರೆ ಹಂತಗಳಲ್ಲಿ ಯೋಗ್ಯವಾಗಿ ಸೇರಿಸುವುದರಿಂದ ಮುಂದಿನ ಪೀಳಿಗೆಗೆ ಅದು ಬಾಳಿನ ಬೆಳಕಾಗುವುದರಲ್ಲಿ ಸಂಶಯವಿಲ್ಲ.

❀ ❀ ❀

CC-0. Nepal Sanskrit Academy, Kathmandu Collection

अन्तःशास्त्रीयशोधः - गुरुकुलेभ्यः अपेक्षा

✍ डा म जयरामः

निदेशकः, ग्रान्थिक-शोध-विभागः, इण्डिका योग

उपोद्घातः

देवीं वाचमुपासते हि बहवः सारं तु सारस्वतं
जानीते नितरामसौ गुरुकुलक्लिष्टो मुरारिः कविः ।
अब्धिर्लङ्घित एव वानरभटैः किं त्वस्य गम्भीरताम्
आपातालविलग्नपीवरवपुर्जानाति मन्थाचलः ॥

-(अनर्घराघवस्य टीकायाम्)

अयं श्लोकः अनर्घराघव-नाटकस्य रचयितुः मुरारेः विषयज्ञानगाम्भीर्यम् गुरुकुलक्लिष्टपदेन बोधयति। स चासौ कविः ८-१० शतमाने आसीत्। सारस्वतः सारः ग्रहणीयः चेत् गुरुकुलेष्वेव अध्ययनं विधेयमित्यपि अनेन स्पष्टम्। अनेन च ज्ञायते गुरुकुलाध्ययनस्य महत्त्वम्। इत्थं च विद्यायाः गाम्भीर्यपरिरक्षणे गुरुकुलानां महत्त्वं न केनापि निराकर्तुं शक्यम्। वेदवेदाङ्गानां परिरक्षणं गुरुकुलपरम्परायाः संरक्षणेन सिद्धं भवति। किञ्च, भारतीयेषु वैदिकेषु सर्वेष्वपि अनुष्ठानेषु **"देशकालौ सङ्कीर्त्य"** एव प्रवर्त्यते। एवञ्च देशस्य चिन्ता, वार्तमानिकस्य कालस्य चिन्ता च गुरुकुलदृष्ट्यापि विधेया। आधुनिके काले गुरुकुलेभ्यः काः अपेक्षाः सन्ति इत्यपि चिन्तनीयम्। तद्विषये प्रवृत्तोऽयं लेखः। सर्वासां तादृशीनाम् अपेक्षाणां सङ्ग्रहः नास्य लेखस्य उद्देश्यम्। मुख्यतया भासमानस्य एकस्य बिन्दोः विषये आलोकप्रसारणं तु चिकीर्षितम् अनेन लेखेन।

संस्थास्तरे अपेक्षा - गोपालस्वामी-समितिः

२०१६ तमे वर्षे भारतसर्वकारेण श्रीमतः गोपालस्वामिवर्यस्य आध्यक्ष्ये काचित् समितिः घटिता संस्कृताध्ययनप्रवर्धनाय दृष्टिं दिक्सूचीं च निर्मातुम् (VISION and ROAD MAP for the development of Sanskrit: Ten year perspective Plan) । तत्र कश्चन विचारः प्रस्तुतः (पृ. सं. १६)

"There is a great disconnect and wide gap between Sanskrit

CC-0. Nepal Sanskrit Academy, Kathmandu Collection

education and main stream education. Hence there is a great difficulty in promoting interdisciplinary studies in Sanskrit Institutions."

अनुवादः - अधुनिकस्य प्रधानधारायाः शिक्षणस्य संस्कृतशिक्षणस्य च विशालम् अन्तरम् उपलक्ष्यते। अतः अन्तःशास्त्रीयाध्ययनस्य प्रवर्धने क्लेशः अनुभूयते» इति।

किञ्च, तत्रैव शोधक्षेत्रे कर्तव्यानां कार्याणाम् आवल्याम् अधोदत्तः विचारः उल्लिखितः-

"Promotion for Interdisciplinary research involving modern streams and Shastras." (पृ सं १४)

अनुवादः - आधुनिकधारायाः शास्त्रविद्यायाः च मध्ये अन्तःशास्त्रीयाध्ययनस्य प्रवर्धनम्

अनेन च मुख्यतः गुरुकुलमुखेषु संस्कृत-शास्त्राध्ययनकेन्द्रेषु आधुनिकशिक्षणधारया सह संवादः, अन्तःशास्त्रीयाध्ययनस्य प्रवर्धनं समित्या अनया अनुशंस्यते इति ज्ञायते।

वैयक्तिक-स्तरे अपेक्षा - महर्षिबादरायणपुरस्कारः

वैयक्तिकस्तरेऽपि गुरुकुलक्लिष्टेभ्यः शास्त्रविद्भ्यः का निरीक्षास्ति आधुनिकस्य कालस्य इति किञ्चित् परिशीलयामः। महर्षिबादरायणस्य नाम्नि राष्ट्रपतिपुरस्कारः भारतसर्वकारेण प्रदीयते प्रतिवर्षं संस्कृत-शास्त्र-विद्भ्यः। तत्र के विद्वांसः तं पुरस्कारमर्हन्ति इति योग्यतानाम् आवलिः विद्यते। तत्र अधःप्रदत्तं वचनमपि दृश्यते-

"Recommendations for Maharshi Badarayana Vyasa Samman may be made only for those young scholars who have made a breakthrough in interdisciplinary studies involving contribution of Sanskrit or ancient Indian wisdom to the processes of synergy between modernity and tradition ..."

(Pg. 3, http://sanskrit.nic.in/uploads/2020_04_11_Presidential_Award.pdf)

अनुवादः - ये तावद् युवानः विद्वांसः संस्कृतस्थायाः भारतीयविद्यायाः परम्परायाः च आधुनिकत्वस्य च विषये अन्तःशास्त्रीयाध्ययनेन पथप्रदर्शकं कार्यं कृतवन्तः तेभ्यः एव महर्षिबादरायणपुरस्कारप्रदानस्य अनुशंसनं करणीयम्।

पूर्वोक्तैः सप्रमाणैः वचनैः संस्थास्तरे वैयक्तिके स्तरे च का अपेक्षा गुरुकुलेभ्यः गुरुकुलेषु क्लिश्यमानेभ्यः च इति स्पष्टम्।

अन्तःशास्त्रीयाध्ययनस्य स्थितिः संस्कृत-शास्त्र-क्षेत्रे

CC-0. Nepal Sanskrit Academy, Kathmandu Collection

किमेतत् कार्यम् इतः परमेव प्रारम्भणीयम्? नैव। सामान्यतः अधः उल्लिखितेषु क्षेत्रेषु संस्कृतक्षेत्रे अन्तःशास्त्रीयमध्ययनम् अधुनैव अवलोकितुं शक्यते -

Computational Linguistics - व्याकरणम्

Psychology, Mathematics - छन्दः, ज्यौतिषम्, शुल्बसूत्राणि

Botany – वृक्षायुर्वेदः

Management studies - भगवद्गीता

Mind-body-intervention, Health – योगः, आयुर्वेदः

Consciousness studies – वेदान्तः

एतेषु क्षेत्रेषु अधिकं कार्यं प्रवर्धयितुं शक्यते। किञ्च संस्कृते अष्टादशविद्यास्थानानि विद्यन्ते येषां सम्बन्धः आधुनिकैः प्रस्थानैः सह चिन्तयितुं शक्यते।

केन्द्रिय-संस्कृत-विश्वविद्यालयोऽपि आधुनिकस्य शिक्षणस्य दृष्ट्या कतिविधाः विद्याः सन्ति संस्कृते शास्त्रपरम्परायाम् इति विशिष्टशैल्या प्रस्तौति। तदित्थम् -

Sanskrit and the Sciences – Astronomy, Mathematics, Chemistry, Architecture And Engineering, Medicine

Sanskrit and Metaphysical Subjects – Astika, Nastika Darshanas

Sanskrit and Humanities – History, Political Economy, Law (Dharamashastra)

Sanskrit and Religion – Hinduism, Buddhism, Jainism

Sanskrit and the Arts - Theatre, Dance, Music Sculpture

(Ref: http://www.sanskrit.nic.in/about_sanskrit.php)

अनेन च ज्ञायते यत् नानाविधानां विद्यानां भाषा संस्कृतं, संस्कृतमाध्यमेन गुरुकुलेषु पाठ्यमानानि शास्त्राणि च। अतः अन्तःशास्त्रीयाध्ययनस्य नैकाः साध्यताः विद्यन्ते। गुरुकुलेषु उद्ग्रन्थान्तबोधनद्वारा तत्तच्छास्त्रस्य परिरक्षणं यथा कर्तव्यं, क्रियमाणं च, तथैव अन्तःशास्त्रीय-शोधद्वारा बोधनद्वारा च आधुनिकस्य कालस्य विद्याभिः सह सेतुनिर्माणस्य दिशि प्रयत्नः अपि विधेयः।

नैकशास्त्रेषु प्रवृत्तिः नास्वाभाविकी शास्त्रपरम्परायाम् - १

शास्त्रस्य अन्यया आधुनिक्या विद्यया तोलनं मेलनं कथं कर्तुं शक्यम्? इदं न सम्भवि

CC-0. Nepal Sanskrit Academy, Kathmandu Collection

- इति केषाञ्चित् मतं स्यात्। किन्तु संस्कृतक्षेत्रे, शास्त्राध्येतृणां च मध्ये बहुशास्त्राध्ययनं यद्द्वारा अन्तःशास्त्रीयः शोधः सिद्ध्यति - स च न अस्वाभाविकः।

ऋग्वेदं भगवोऽध्येमि यजुर्वेदँ सामवेदमाथर्वणं चतुर्थमितिहासपुराणं पञ्चमं वेदानां वेदं पित्र्यँ राशिं दैवं निधिं वाकोवाक्यमेकायनं देवविद्यां ब्रह्मविद्यां भूतविद्यां क्षत्रविद्यां नक्षत्रविद्याँ सर्पदेवजनविद्यामेतद्भगवोऽध्येमि ॥ २ ॥ (छा.उप 7.1) - इत्यनेन छान्दोग्यवचनेन महर्षेः नारदस्य बहुशास्त्रज्ञत्वं ज्ञायते।

वेदवेदाङ्गतत्त्वज्ञो धनुर्वेदे च निष्ठितः, सर्वशास्त्रार्थतत्त्वज्ञो स्मृतिमान् प्रतिभानवान्॥ (वा.रा.1.1.14-15) - भगवान् श्रीरामः अपि बहुशास्त्रविदासीदिति प्रमाणयति महर्षिः वाल्मीकिः।

प्रोवाचवेदानखिलान्साङ्गोपनिषदोगुरुः ॥ ३३॥सरहस्यं धनुर्वेदं धर्मान्न्यायपथांस्तथा। तथा चान्वीक्षिकीं विद्यां राजनीतिं च षड्विधाम्।३४॥ (भा.पु 10.45.33-34) - श्रीकृष्णः अपि एवमेव नानाविद्या-नदीष्णः इत्येव आह भागवतकारः भगवान् व्यासः।

किञ्च अन्येऽपि शास्त्रविदः शास्त्रपरम्परायां प्रसिद्धाः नैकशास्त्रेषु पाण्डित्यवन्तः आसन्, तत्र विशिष्टं योगदानं च चक्रुः। यथा - व्यासः, पतञ्जलिः, श्रीमच्छङ्कराचार्यः, वाचस्पतिमिश्रः, भोजः,नागोजीभट्टः, अप्पय्यदीक्षितः, वेदान्तदेशिकः -इत्येते नैकेषु शास्त्रेषु नैकान् ग्रन्थान् प्रणिन्युः। तस्मात् गुरुकुलशिक्षणरताः एतेषां जीवनात् कार्यात् च प्रेरिताः सन्तः अन्तःशास्त्रीयं कार्यं सगाम्भीर्यं स्वीकर्तुमर्हन्ति।

नैकशास्त्रेषु प्रवृत्तिः नास्वाभाविकी शास्त्रपरम्परायाम् - २

अन्येऽपि त्रयः बिन्दवः शास्त्रपरम्परायाम् अन्तःशास्त्रीयाध्ययनस्य स्वाभाविकतायाः विषये चिन्तयितुं शक्याः-

१) उपायोपेयशास्त्र-व्यवस्था - भारतीयपरम्परायां न किञ्चित् शास्त्रं पद-वाक्य-प्रमाण-शास्त्रमन्तरा अध्येतुं शक्यते। अतः एतेषां त्रयाणां शास्त्राणाम् उपायता - विशिष्य वेदान्तस्य च उपेयता शास्त्रविदां विदितचरमेव। अयमेव उपायोपेयभावः प्राचीनशास्त्राणाम् आधुनिकजीवनस्य समस्यानां परिहाररतानाम् अर्वाचीनानां प्रस्थानानां विषये चिन्तयितुं शक्यः।

२) एकस्मिन् विषये नानामतपरीक्षणम् - ख्यातिवादः, शाब्दबोधः, जाति-व्यक्ति-विचारः, जीवात्म-परमात्म-मोक्ष-स्वरूपादिकम् - इत्येवम् एतेषु अन्येषु च विषयेषु यदा कश्चित् शास्त्रकारः विचारं प्रस्तौति इतरशास्त्रकाराणां मतं परिशील्यैव स्वमतं प्रकटयति। एकः विचारः , तस्य नानाविधानि समाधानानि। तत्रापि युक्ततरं समाधानं किम्? - इत्येवमादिचिन्तनम् अस्माकं शास्त्रेषु विद्यत एव। आधुनिक्यः समस्याः एवमेव बहुमुखाः।

CC-0. Nepal Sanskrit Academy, Kathmandu Collection

उदाहरणार्थम् - वातावरणस्य औष्ण्ये परिवर्तनम्, कोविड्-प्रभृतयः वैश्विकाः प्रसारिणो रोगाः - इत्येतैः आरोग्यम्, वाणिज्यम्, यातायातव्यवस्था इत्येतानि क्षेत्राणि प्रभावितानि भवन्ति। बहुमुखसमस्यानां परिहाराः अपि नानाविधमतयुक्ताः भवन्ति - तेषु सामञ्जस्यं कथं कल्पनीयम् - इत्येवमादिषु विचारेषु स्वाध्यायपुरःसरणं नानामतपरिशीलनविचक्षणैः शास्त्रविद्भिः चिन्तनं विधाय समाधानं वक्तुं शक्यते।

३) इतरशास्त्रपद्धतीनां स्वशास्त्रे निवेशः - शास्त्रपरम्परायामस्माकम् इतरशास्त्रपद्धतीनां युक्तीनां च स्वशास्त्राविरुद्धानां स्वशास्त्रेऽपि अतिदेशः क्रियते। यथा - येन त्वंशेन न विरुध्येते, , तेनेष्टमेव सांख्ययोगस्मृत्योः सावकाशत्वम्" (ब्र सू भा २.१.३) इति वेदान्ते साङ्ख्ययोगयोः सावकाशत्वं प्रदर्शितं श्रीमच्छङ्करभगवत्पादैः। एनमेव मार्गमनुसृत्य आधुनिकेषु विद्याप्रस्थानेषु आर्षाणां प्राचीनानां शास्त्राणां सावकाशत्वं, समाधानप्रदत्वं च चिन्तनीयम्। इदमेव अन्तःशास्त्राध्ययनं नाम। इदं च अस्माकं शास्त्रपरम्परायां विद्यमानमेव।

इदमेव अन्तःशास्त्रीयाध्ययनस्य हृदयम् ।

उपसंहारः

सेनापत्यं च राज्यं च दण्डनेतृत्वमेव च।
सर्वलोकाधिपत्यं च वेदशास्त्रविदर्हति॥ - (मनुस्मृतिः १२.१००)

- इत्युक्तक्रमेण जगतः शासनक्षमता, तदर्थमपेक्षितं ज्ञानं युक्तयश्च गुरुकुलेषु बोध्यमानेषु शास्त्रेषु निहितानि। एतदर्थं स्वशास्त्रसंरक्षणेन सह अन्तःशास्त्राध्यननमपि अहं कुर्वे इति प्रत्येकं शास्राध्ययनरतेन चिन्तनीयम्, गुरुकुलैः अपि तथा सङ्कल्पनीयम्। किञ्च, एतदुद्दिश्य एकस्य शास्त्रस्य अध्ययनवेलायां न केवलं तच्छास्त्रगतप्रमेयस्य ग्रहणं कर्तव्यं किन्तु तच्छास्त्रे विद्यमानायाः युक्तिस्रोतसः बोधः प्राप्तव्यः। एतदन्तेन शास्त्रव्यवसायेनैव कश्चित् बहुशास्त्रपरिशीलनक्षमः भवति। तेन च अन्तःशास्त्रीयशोधस्य च क्षमता सिद्ध्यति।

एतद्विषये आचार्यः चरकः अभिप्रैति यत् -

एकस्मिन्नपि यस्येह शास्त्रे लब्धास्पदा मतिः।
सशास्त्रमन्यदप्याशु युक्तिज्ञत्वात् प्रबुध्यते॥

(चरकसंहिता ७.१२.४७)

आकरग्रन्थाः स्रोतांसि च

१) अनर्घराघवम् - https://archive.org/details/anargha-raghava-murari-tika-ruchipati-ed.-durga-prasada-nirnaya-sagar-

CC-0. Nepal Sanskrit Academy, Kathmandu Collection

press-km-5-1887/page/n1/mode/2up?view=theater

२) VISION And ROAD MAP For the Development of Sanskrit Ten year perspective Plan - http://www.sanskrit.nic.in/data/Vision_and_Road_Map.pdf

३) अद्वैतशारदा - https://advaitasharada.sringeri.net/

४) चरकसंहिता - https://niimh.nic.in/ebooks/ecaraka/

५) Central Sanskrit University - About Sanskrit - http://www.sanskrit.nic.in/about_sanskrit.php

❀ ❀ ❀

CC-0. Nepal Sanskrit Academy, Kathmandu Collection

ಗುರುಕುಲ ಶಿಕ್ಷಣ ಪದ್ಧತಿ

✍ ಡಾ ॥ ಮಹಾಬಲೇಶ್ವರ ಭಟ್ಟ
ಪ್ರಾಚಾರ್ಯರು, ವೇದವಿಜ್ಞಾನಗುರುಕುಲಮ್
ನಿರ್ದೇಶಕರು, ವೇದವಿಜ್ಞಾನಶೋಧಸಂಸ್ಥಾನಮ್

ಸ್ವಾತಂತ್ರ್ಯ ಬಂದ ಕಾಲದಲ್ಲಿ ಮತ್ತು ತದನಂತರದ ಅನೇಕ ದಶಕಗಳ ವರೆಗೂ ಪಾಶ್ಚಾತ್ಯರ ದುಷ್ಪ್ರಭಾವದ ಕಾರಣ ವಿದೇಶದಿಂದ ಬಂದಿದ್ದೆಲ್ಲವೂ ಉತ್ತಮ ಎಂಬ ಭ್ರಮೆ ನಮ್ಮಲ್ಲಿ ಮನೆಮಾಡಿತ್ತು. ಪಾಶ್ಚಾತ್ಯರು ನೀಡಿದ ಚಿಂತನೆ, ವೇಷ, ಭಾಷೆ, ಆಹಾರ, ವಸ್ತು ಇವೆಲ್ಲವೂ ಶ್ರೇಷ್ಠ, ಭಾರತಮೂಲದ ಎಲ್ಲವೂ ಕಳಪೆ ಎಂಬ ಭಾವ ಆಳವಾಗಿ ಬೇರೂರಿತ್ತು. ಈ ಸರಣಿಯಲ್ಲಿ ಶಿಕ್ಷಣವೂ ಒಂದು. ಭಾರತದ ಶಿಕ್ಷಣಪದ್ಧತಿ ಆಧುನಿಕ ಕಾಲಕ್ಕೆ ಉಚಿತವಾದದ್ದಲ್ಲ. ಆದ್ದರಿಂದ ಮೆಕಾಲೆ ಪ್ರಣೀತವಾದ ಪಾಶ್ಚಾತ್ಯ ಶಿಕ್ಷಣಪದ್ಧತಿಯೇ ಸರ್ವಶ್ರೇಷ್ಠವಾದದ್ದು ಎಂಬ ಭಾವ ಇತ್ತು. ಇದರ ಪರಿಣಾಮವಾಗಿಯೇ ಸ್ವಾತಂತ್ರ್ಯ ಬಂದಮೇಲೆಯೂ ನಮ್ಮಲ್ಲಿನ ಅನೇಕ ಶಿಕ್ಷಣ ಪದ್ಧತಿ ಕುಲವಿದ್ಯೆ ಇವೆಲ್ಲವೂ ನಶಿಸುತ್ತಾಹೋಯಿತು. ಆದರೆ ಇಂದು ಕಾಲ ಬದಲಾಗಿದೆ. ಪಾಶ್ಚಾತ್ಯ ಚಿಂತನೆಯಿಂದ ಬಂದಿದ್ದರಲ್ಲಿ ವ್ಯಷ್ಟಿ ಸುಖ ಸಮಷ್ಟಿ ಹಿತ ಎರಡೂ ಇಲ್ಲ ಎಂಬುದು ಇಂದು ಅರಿವಾಗುತ್ತಿದೆ. ಆದ್ದರಿಂದ ಋಷಿಪ್ರಣೀತವಾದ ಎಲ್ಲ ವಿಷಯಗಳಲ್ಲೂ ಆದರ ಕಾಣುತ್ತಿದೆ. ಏಕೆಂದರೆ ಋಷಿಪ್ರಣೀತವಾದದ್ದರಲ್ಲಿ ವ್ಯಷ್ಟಿಸುಖವೂ ಇದೆ ಸಮಷ್ಟಿ ಹಿತವೂ ಇದೆ. ತತ್ಪರಿಣಾಮವಾಗಿ ಯೋಗ ಆಯುರ್ವೇದ, ತತ್ವಶಾಸ್ತ್ರ ಇತ್ಯಾದಿಗಳಿಗೆ ಮಹತ್ವ ಹೆಚ್ಚುತ್ತಿದೆ. ಮೆಕಾಲೆ ವ್ಯವಸ್ಥೆಯಲ್ಲಿ ಬೆಳೆದ ಅನೇಕರು ಅದರ ದುಷ್ಪರಿಣಾಮವನ್ನು ಅನುಭವಿಸಿ ಈಗ ಭಾರತೀಯವಾದುದರಕಡೆ ಮುಖಮಾಡಿದ್ದಾರೆ. ಆದ್ದರಿಂದಲೇ ಭಾರತೀಯ ಶಿಕ್ಷಣಪದ್ಧತಿ ಅರ್ಥಾತ್ ಗುರುಕುಲಶಿಕ್ಷಣಪದ್ಧತಿಗೆ ಮಹತ್ವ ಬಂದಿದೆ.

ಸ್ವಾತಂತ್ರ್ಯಪೂರ್ವದಲ್ಲಿ ನಮ್ಮಲ್ಲಿನ ಶಿಕ್ಷಣವ್ಯವಸ್ಥೆ ಹೇಗಿತ್ತು ಎಂಬುದನ್ನು ಅಧಿಕೃತವಾಗಿ ಅಧ್ಯಯನಮಾಡಿ ಬರೆದ The beautiful tree ಎಂಬ ಗ್ರಂಥದಲ್ಲಿ ಧರ್ಮಪಾಲ್‌ರವರು ವಿಶದವಾಗಿ ವಿವರಣೆ ನೀಡಿದ್ದಾರೆ. ಗುರುಕುಲ ಪದ್ಧತಿ ಹೇಗೆ ಎಲ್ಲ ವಿದ್ಯಾಶಾಖೆಗಳಿಗೂ ಅನ್ವಯವಾಗಿತ್ತು ಮತ್ತು ಸಮಾಜದ ಎಲ್ಲ ವರ್ಗದವರಿಗೂ ನಮ್ಮಲ್ಲಿ ಹೇಗೆ ಶಿಕ್ಷಣ ಸಿಗುತ್ತಿತ್ತು ಎಂಬುದನ್ನು ದಾಖಲಿಸಿದ್ದಾರೆ. ನಮ್ಮ ಬಗೆಗೆ ನಮಗೆ ಅವಜ್ಞೆ ಬರಬೇಕೆಂಬ ಕಾರಣದಿಂದ ಪಾಶ್ಚಾತ್ಯಚಿಂತನಪ್ರೇರಿತ ಬುದ್ಧಿಜೀವಿಗಳು ಅಪಪ್ರಚಾರ ಮಾಡಿರುವುದು

CC-0. Nepal Sanskrit Academy, Kathmandu Collection

ಭಾರತದಲ್ಲಿ ಸ್ತ್ರೀಯರಿಗೆ, ಬ್ರಾಹ್ಮಣೇತರರಿಗೆ ಸರಿಯಾದ ಶಿಕ್ಷಣ ಸಿಗುತ್ತಿರಲಿಲ್ಲ ಎಂದು. ಆದರೆ ವಸ್ತುಸ್ಥಿತಿ ಬೇರೆಯೇ ಆಗಿದೆ. ಎಲ್ಲರೂ ಎಲ್ಲ ವಿಷಯಗಳನ್ನು ಓದುತ್ತಿರಲಿಲ್ಲ ಎಂಬುದು ಸತ್ಯ. ಅದಕ್ಕೆ ಅಧಿಕಾರ ಭೇದ ಎಂದು ಕರೆಯುತ್ತಾರೆ. ಆದರೆ ಶಿಕ್ಷಣರಹಿತರಾದವರಾರೂ ಇರಲಿಲ್ಲ.

ಶಿಕ್ಷಣ ಎಂದರೇನು? ಶಿಕ್ಷಣದ ಪ್ರಯೋಜನವೇನು? ಶಿಕ್ಷಣ ಹೇಗೆ? ಎಂಬಿತ್ಯಾದಿಯಾದ ಪ್ರಶ್ನೆಗಳನ್ನು ನಾವೇ ಹಾಕಿಕೊಂಡರೆ ಎಲ್ಲವನ್ನೂ ಒಳಗೊಂಡ ಅನಿತರಸಾಧಾರಣವಾದ ಶಿಕ್ಷಣ ಪದ್ಧತಿಯೆಂದರೆ ಅದು ಗುರುಕುಲಪದ್ಧತಿ ಎಂಬುದು ನಮ್ಮ ಅರಿವಿಗೆ ಬರುತ್ತದೆ.

ಶಿಕ್ಷಣವೆಂದರೇನು?

ಕೇವಲ ಅಕ್ಷರಜ್ಞಾನವೇ ಶಿಕ್ಷಣ ಅಲ್ಲ. ಶಿಕ್ಷಣವೆಂದರೆ ಜ್ಞಾನ, ವಿದ್ಯೆ. ಈ ಅರ್ಥದಲ್ಲಿ ಪ್ರಾಚೀನ ಭಾರತದಲ್ಲಿ ಯಾರೊಬ್ಬನೂ ಅಶಿಕ್ಷಿತನಾಗಿರುತ್ತಿರಲಿಲ್ಲ. ಅವರವರ ಯೋಗ್ಯತೆ ಹಿನ್ನೆಲೆಗೆ ತಕ್ಕಂತೆ ಜ್ಞಾನವನ್ನು ನೀಡುವ ಪರಿಪಾಠ ನಮ್ಮಲ್ಲಿತ್ತು.

ಆಧುನಿಕ ದಾರ್ಶನಿಕರಾದ ವೀರಸನ್ಯಾಸಿ ವಿವೇಕಾನಂದರು ಹೇಳುವಂತೆ Education is the manifestation of perfection already in men. ಅರ್ಥಾತ್ ಮನುಷ್ಯನಲ್ಲಿ ಸ್ವತಃ ಈಗಾಗಲೇ ಇರುವ ಪರಿಪೂರ್ಣತೆಯ ಅಭಿವ್ಯಕ್ತೀಕರಣವೇ ಶಿಕ್ಷಣ. ಸ್ವತಃ ಪ್ರತಿಯೊಂದು ಚರಾಚರಜೀವಿಯೂ ಪರಮಾತ್ಮನ ಸ್ವರೂಪವೇ ಆಗಿದೆ ಎಂಬುದು ಉಪನಿಷತ್ತುಗಳು ನಮಗೆ ನೀಡಿದ ಸಿದ್ಧಾಂತ. ನಮ್ಮ ನಮ್ಮ ಅನಾದಿಸಿದ್ಧವಾದ ಅವಿದ್ಯೆಯ ಕಾರಣದಿಂದ ನಾವು ಬೇರೆ ಬೇರೆ ಜೀವಿಗಳಾಗಿ, ಸುಖ-ದುಃಖ ಹೊಂದಿದವರಾಗಿ ಜನ್ಮ-ಮೃತ್ಯು-ಜರಾ-ಮರಣಾದಿಗಳಿಂದ ಕೂಡಿದವರಾಗಿ ಕಾಣಿಸಿಕೊಳ್ಳುತ್ತೇವೆ. ಈ ಸಿದ್ಧಾಂತದ ಆಧಾರದಲ್ಲಿ ಚಿಂತನೆಮಾಡಿದರೆ ನಮ್ಮನ್ನು ನಾವು ಅರಿಯುವವರೆಗೂ (ನಾನು ಪರಮಾತ್ಮಾಭಿನ್ನ ಎಂದು ಅರಿಯುವುದೇ ನನ್ನನ್ನು ನಾನು ಅರಿಯುವುದು ಎಂಬ ವಾಕ್ಯದ ಅರ್ಥ) ಶಿಕ್ಷಣದ ಪ್ರಕ್ರಿಯೆ ಮುಂದುವರೆಯುತ್ತದೆ. ಇದನ್ನೇ ಪಾರಂಪರಿಕ ಹಿನ್ನೆಲೆಯಲ್ಲಿ ಹೇಳುವುದಾದರೆ **"ಸಂಸ್ಕಾರ"** ಎಂದು ಕರೆಯುತ್ತೇವೆ. ಸಂಸ್ಕಾರ ಎಂಬ ಶಬ್ದಕ್ಕೆ **"ಗುಣಾಧಾನ"** ಅಥವಾ **"ದೋಷಾಪನಯನ"** ಎಂದು ಕರೆಯುತ್ತೇವೆ. ಇದು ಪರಂಪರಾಗತವಾಗಿ ಬಂದ ಗರ್ಭಾಧಾನಾದಿ ಷೋಡಶ ಸಂಸ್ಕಾರಗಳಲ್ಲೂ ಓತಪ್ರೋತವಾಗಿದೆ. ಇವೇ ಮನುಷ್ಯನನ್ನು ಪರಿಪೂರ್ಣತೆಯೆಡೆಗೆ ಕರೆದೊಯ್ಯುತ್ತವೆ. ನಾವು ಶಿಕ್ಷಣದಿಂದಲೂ ಮಾಡಬೇಕಾದದ್ದು ಇದೇ ಅಲ್ಲವೇ? ಪ್ರತಿಯೊಬ್ಬ ಪಾಲಕರೂ ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು

CC-0. Nepal Sanskrit Academy, Kathmandu Collection

ದೋಷಗಳನ್ನು ತೊಡೆದು ಹಾಕಿ ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಲು ತಾನೆ? ಹಾಗಾದರೆ ಶಿಕ್ಷಣವೇ ಸಂಸ್ಕಾರ, ಸಂಸ್ಕಾರವೇ ಶಿಕ್ಷಣ. ಇವೆರಡೂ ಪರ್ಯಾಯಪದಗಳೆನ್ನಬಹುದು. ಇದನ್ನು ಬಿಟ್ಟು ಶಿಕ್ಷಣಕ್ಕೆ ಇನ್ನೊಂದು ವ್ಯಾಖ್ಯಾನಮಾಡಲಾಗದು. ಮಾಡಿದರೂ ಅದು ಇದರದ್ದೇ ಇನ್ನೊಂದು ವ್ಯಾಖ್ಯಾನವಾಗಬಹುದು. ವಿಪರೀತವಾಗಿ ಹೇಳಿದರೆ ಅದು ಶಿಕ್ಷಣದ ಪರಿಪೂರ್ಣ ವ್ಯಾಖ್ಯೆ ಆಗಲಾರದು. ಇದನ್ನೇ ವಿಷ್ಣುಪುರಾಣದಲ್ಲಿ ಹೇಳಿದೆ **"ಸಾ ವಿದ್ಯಾ ಯಾ ವಿಮುಕ್ತಯೇ"** ಎಂಬುದಾಗಿ.

ಶಿಕ್ಷಣ ಯಾರಿಗೆ?

ಬುದ್ಧಿಪೂರ್ವಕಾರಿಯಾದ ಮಾನವನಿಗೇ ಶಿಕ್ಷಣದ ಆವಶ್ಯಕತೆಯಿದೆ. ಇತರ ಪ್ರಾಣಿಪಕ್ಷಿಗಳು ತಮ್ಮ ತಮ್ಮ ಪ್ರಕೃತಿಗೆ ವಿರುದ್ಧವಾಗಿ ಎಂದೂ ನಡೆದುಕೊಳ್ಳುವುದಿಲ್ಲ. ಹಸುವೆಂದೂ ಮಾಂಸವನ್ನು ತಿನ್ನುವುದಿಲ್ಲ. ಹುಲಿಯೆಂದೂ ಸಹಜಸ್ಥಿತಿಯಲ್ಲಿ ಹುಲ್ಲನ್ನು ತಿನ್ನುವುದಿಲ್ಲ. ಆದರೆ ಮಾನವನ ನಿಜವಾದ ಪ್ರಕೃತಿ ಏನೆಂದು ಗುರುತಿಸಲೇ ಅಸಾಧ್ಯವಾಗುವಂತೆ ಮಾನವನು ತನ್ನನ್ನು ತಾನು ಬದಲಾಯಿಸಿಕೊಳ್ಳಬಲ್ಲ. ನಾಯಿ, ಹಸು, ಕುದುರೆ, ಆನೆ ಇತ್ಯಾದಿಗಳನ್ನು ಪಳಗಿಸುವ ವ್ಯವಸ್ಥೆ ಇದೆ. ಅರ್ಥಾತ್ ನಮ್ಮ ಅನುಕೂಲತೆಗೆ ತಕ್ಕಂತೆ ಅವುಗಳಿಗೆ ಪ್ರಶಿಕ್ಷಣವನ್ನು ನೀಡುತ್ತೇವೆ. ಆದರೆ ಇದು ದೀರ್ಘಕಾಲದ ಪ್ರಕ್ರಿಯೆ ಅಲ್ಲ, ಅಥವಾ ಒಮ್ಮೆ ಪ್ರಶಿಕ್ಷಿತವಾದರೆ ಪುನಃ ಪರಿವರ್ತನೆಗೊಳ್ಳುವುದಿಲ್ಲ. ಆದರೆ ಮಾನವ ಇಂತಲ್ಲ ಪ್ರಶಿಕ್ಷಣದ ಕಾಲವೂ ದೀರ್ಘ, ನೀಡಿದ ಶಿಕ್ಷಣದ ಪ್ರಭಾವ ಅದಕ್ಕಿಂತ ಇನ್ನೊಂದು ಪ್ರಬಲವಾದದ್ದರ ಪ್ರಭಾವ ಬಂದರೆ ಬದಲಾಗಲೂ ಬಹುದು. ಹಾಗಾಗಿ ಮಾನವನಿಗೆ ಶಿಕ್ಷಣ ನೀಡುವುದು ಮುಖ್ಯ.

ಶಿಕ್ಷಣದ ಪ್ರಯೋಜನ

ಶಿಕ್ಷಣವೆಂದರೇನು ಎಂಬುದನ್ನು ಚಿಂತನೆ ಮಾಡುವಾಗಲೇ ಅದರ ಪ್ರಯೋಜನವೂ ತಿಳಿಸಲ್ಪಟ್ಟಿದೆ. ಹೇಗೆ ಹಾಲೊಂದು ಸಂಸ್ಕಾರಗೊಂಡು ಮೊಸರಾಗಿ, ಬೆಣ್ಣೆಯಾಗಿ, ತುಪ್ಪವಾಗಿ ಸತ್ವಯುತವೂ ದೀರ್ಘಕಾಲ ಬಾಳುವಂತಹದ್ದೂ ಆಗುವುದೋ ಅಂತೆಯೇ ಮಾನವನೂ ಸಂಸ್ಕಾರವನ್ನು ಅರ್ಥಾತ್ ಶಿಕ್ಷಣವನ್ನು ಪಡೆದವನು ಸತ್ವವುಳ್ಳವನಾಗಿಯೂ ದೀರ್ಘಕಾಲ ಇತರರಿಗೆ ಹಿತವನ್ನುಂಟುಮಾಡುತ್ತಾ ತಾನೂ ಸುಖಿಯಾಗಿರುವ ವ್ಯಕ್ತಿಯಾಗಬಲ್ಲ.

ಕೇವಲ ಮಾಹಿತಿಯನ್ನು ನೀಡುವುದೇ ಶಿಕ್ಷಣವೆಂಬುದು ಇಂದಿನ ಕಲ್ಪನೆ. ಪಾಂಡಿತ್ಯವನ್ನು ಗಳಿಸುವುದೇ ಶಿಕ್ಷಣವಾದರೆ ರಾವಣನ ಪಾಂಡಿತ್ಯ ಕಡಿಮೆ ಇರಲಿಲ್ಲ. ಬಿನ್ ಲಾಡೆನ್‌ನ ಜ್ಞಾನವೇನೂ ಕಡಿಮೆ ಇರಲಿಲ್ಲ. ಆದರೆ ಇಂಥವರಿಂದ

CC-0. Nepal Sanskrit Academy, Kathmandu Collection

ಅರ್ಥಾತ್ ಕೇವಲ ಪಾಂಡಿತ್ಯಗಳಿಸಿ ಗುಣಾಧಾನ ದೋಷಾಪನಯನರೂಪದ ಸಂಸ್ಕಾರವಿಲ್ಲವಾದ ಕಾರಣ ಅವರಿಂದ ಸಮಾಜಕ್ಕೂ ಆಘಾತವಾಯಿತು ಅವರ ಜೀವನದಲ್ಲಿಯೂ ಪತಿತರಾದರು. ಇಂದಿನ ಹೇಳಿಕೆಯಂತೆ ಸಾಕ್ಷರತೆಯೆ ಶಿಕ್ಷಣವಾದರೆ ಸಂಸ್ಕಾರರಹಿತರಾದ ಸಾಕ್ಷರರೇ ರಾಕ್ಷಸರಾಗುವುದನ್ನು ಕಾಣುತ್ತೇವೆ. ಆದ್ದರಿಂದ ಕೇವಲ ಮಾಹಿತಿಗಳನ್ನು ನೀಡುವುದಷ್ಟೇ ಶಿಕ್ಷಣವಲ್ಲ.

ಶಿಕ್ಷಣ ಯಾವುದಕ್ಕೆ ?

ಮಾನವನೆಂದರೆ ದೇಹ, ಪ್ರಾಣ ಇಂದ್ರಿಯ ಮನಸ್ಸು ಬುದ್ಧಿ ಇತ್ಯಾದಿಗಳ ಮೇಳೈಸುವಿಕೆಯಾಗಿದ್ದಾನೆ. ಸಂಸ್ಕಾರವನ್ನು ನೀಡಬೇಕಾಗಿದ್ದು ಇವೆಲ್ಲಕ್ಕೂ. ಒಂದೊಮ್ಮೆ ಈ ಎಲ್ಲ ಅವಯವಗಳಲ್ಲಿ ಯಾವುದಾದರೊಂದು ಅವಯವಕ್ಕೆ ಸಂಸ್ಕಾರ ನೀಡಿ ಇತರಾವಯವಗಳನ್ನು ಹಾಗೆಯೇ ಬಿಟ್ಟರೆ ಅವನು ವಿಕೃತನೆನಿಸಿಕೊಳ್ಳುತ್ತಾನೆ. ಆದ್ದರಿಂದ ಮಾನವನ ಎಲ್ಲ ಅವಯವಗಳಿಗೂ ಸಂಸ್ಕಾರ ನೀಡುವುದು ಅತ್ಯವಶ್ಯ. ಈ ಅಂಶ ಅರ್ಥಮಾಡಿಕೊಳ್ಳದೇ ಕೇವಲ ಮಾಹಿತಿಗಳನ್ನು ನೀಡುವುದು, ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸುವುದು ಅದರ ಫಲವಾಗಿ ಉತ್ತಮ ನೌಕರಿ ಮಾಡಿ ಹೆಚ್ಚಿನ ಸಂಬಳ ಗಳಿಸಿ ಸುಖದಿಂದಿರುವುದು ಎಂಬ ಸಮೀಕರಣ ಮಾಡಿದರೆ ಅಂತಿಮ ಫಲವಾದ ಸುಖ ವ್ಯಷ್ಟಿಯಲ್ಲಿ ಸುಖವೂ ಸಮಷ್ಟಿಯಲ್ಲಿ ಹಿತವೂ ಎರಡೂ ಸಿಗಲಾರದು. ಆದ್ದರಿಂದ ಬುದ್ಧಿಗೆ ಹೇಗೆ ನಾವು ಮಾಹಿತಿರೂಪವಾದ ಆಹಾರವನ್ನು ನೀಡುತ್ತೇವೋ ಅಂತೆಯೇ ಭಾವನೆಗೆ, ಇಂದ್ರಿಯಗಳಿಗೆ ಪ್ರಾಣಗಳಿಗೆ ಮನಸ್ಸಿಗೆ ಶರೀರಕ್ಕೆ ಎಲ್ಲಕ್ಕೂ ಆಹಾರವನ್ನು ನೀಡುವುದು ಅನಿವಾರ್ಯ.

ಗುರುಕುಲ ಪದ್ಧತಿಯಲ್ಲಿಯೇ ಪರಿಪೂರ್ಣಶಿಕ್ಷಣ

ಈ ಮೇಲ್ಕಂಡ ವಿಷಯಗಳನ್ನು ನಾವು ಅರಿತರೆ ಗುರುಕುಲ ಶಿಕ್ಷಣದ ಮಹತ್ವವನ್ನು ಅರಿಯಬಹುದು. ಈ ಅಂಶಗಳು ಕೇವಲ ಪ್ರಾಚೀನ ಕಾಲಕ್ಕೆ ಮಾತ್ರ ಸೀಮಿತ, ಆಧುನಿಕಕಾಲಕ್ಕಲ್ಲ ಎನ್ನುವಂತಿಲ್ಲ. ಏಕೆಂದರೆ ನಮ್ಮ ಯುವ ಜನಾಂಗ ನೆಮ್ಮದಿಯಿಂದರಬೇಕು, ಸುಖದಿಂದಿರಬೇಕೆಂದು ಯಾರು ತಾನೆ ಬಯಸುವುದಿಲ್ಲ. ಇಂದಿನ ಶಿಕ್ಷಣಕ್ರಮದಿಂದ ಇದು ಸಾಧ್ಯವಿಲ್ಲ ಎಂಬ ಅರಿವು ಜನರಲ್ಲಿ ಮೂಡಿರುವುದರಿಂದಲೇ ಪುನಃ ಗುರುಕುಲ ಶಿಕ್ಷಣಪದ್ಧತಿಯೆಡೆಗೆ ಮುಖಮಾಡಿದ್ದಾರೆ. ಭಾರತೀಯ ಶಿಕ್ಷಣಕ್ರಮವೆಂದರೆ ಅದು ಗುರುಕುಲ ಶಿಕ್ಷಣಕ್ರಮ. ಗುರುಕುಲಶಿಕ್ಷಣದ ವಿಶೇಷತೆ ಏನು? ಹಿಂದಿನಂತೆ ಇಂದೂ ಜನರು ಇದರ ಕಡೆಗೆ ಆಕರ್ಷಿತರಾಗಲು ಕಾರಣವೇನು? ಇಂದಿನ ಸಮಾಜದ ವಿಕೃತಿಗೆ ಗುರುಕುಲ ಶಿಕ್ಷಣಪದ್ಧತಿಯು ಪರಿಹಾರೋಪಾಯವಾದೀತೇ? ಇದನ್ನು ಸಾರ್ವಜನಿಕ ಮಾಡಬಹುದೇ? ಎಲ್ಲ ವಿದ್ಯಾಶಾಖೆಗಳಿಗೂ ಅನ್ವಯವಾಗುವಂತೆ ಮಾಡಬಹುದೇ

CC-0. Nepal Sanskrit Academy, Kathmandu Collection

ಅಥವಾ ಕೇವಲ ವೇದಶಾಸ್ತ್ರಾದಿಗಳ ಅಧ್ಯಯನಕ್ಕೆ ಮಾತ್ರ ಸೀಮಿತವಾಗಿದೆಯೇ? ಇತ್ಯಾದಿ ಅನೇಕ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಬೇಕಾಗಿದೆ.

"ಗುರೋಃ ಕುಲಮ್ ಗುರುಕುಲಮ್". ಅರ್ಥಾತ್ ಯಾವ ಶಿಕ್ಷಣದ ವ್ಯವಸ್ಥೆಯಲ್ಲಿ ಸ್ವತಃ ಗುರುವೇ ಮಾದರಿಯಾಗಿ ನಿಂತು ಛಾತ್ರರಿಗೆ ಮಾರ್ಗದರ್ಶನಮಾಡುತ್ತಾರೋ ಆ ವ್ಯವಸ್ಥೆಗೆ ಹೆಸರು 'ಗುರುಕುಲಮ್'. ಇಂದು ಅನೇಕ ವ್ಯವಸ್ಥೆಗಳಿಗೆ ಗುರುಕುಲ ಎಂಬ ಬೋರ್ಡ್ ಕಾಣಸಿಗುತ್ತದೆ. ಆದರೆ ಅದ್ಯಾವುದೂ ಅನ್ವರ್ಥವಾದ ಪದವಾಗಲಾರದು. ಬೆಳಗ್ಗೆ 9ರಿಂದ ಆರಂಭಿಸಿ ಸಂಜೆ 4ರ ವರೆಗೆ ನಡೆಯುವ ಅಧ್ಯಯನದ ಕ್ರಮಕ್ಕೆ ಗುರುಕುಲವೆಂಬ ಹೆಸರು ಉಚಿತವಾಗಲಾರದು. ಕೇವಲ ಮಾಹಿತಿಯನ್ನು ನೀಡುವುದೇ ಶಿಕ್ಷಣವೆಂದಾದರೆ ಈ ವ್ಯವಸ್ಥೆಯೂ ಗುರುಕುಲವಾದೀತು. ಆದರೆ ಶಿಕ್ಷಣವೆಂದರೆ ಮಾಹಿತಿಪ್ರದಾನ ಮಾತ್ರವಲ್ಲ ಎಂದು ಮೊದಲೇ ನಿರೂಪಿಸಲಾಗಿದೆ. ಜೀವನಶಿಕ್ಷಣವೇ ಶಿಕ್ಷಣದ ಪ್ರಧಾನಪ್ರಯೋಜನವೆಂದು ನಿರ್ಣಯವಾದಮೇಲೆ ಬೆಳೆಯುತ್ತಿರುವ ವಿದ್ಯಾರ್ಥಿ-ವಿದ್ಯಾರ್ಥಿನಿಯರ ಎದುರಿನಲ್ಲಿ ನಮ್ಮ ಜೀವನ ಹೇಗಿರಬೇಕೆಂಬುದಕ್ಕೆ ಮಾದರಿ **"ಸೂರ್ಯೋದಯದಿಂದ ಸೂರ್ಯೋದಯದವರೆಗೆ"** ಇರುವುದು ಅನಿವಾರ್ಯ. ಅದಿಲ್ಲವಾದರೆ ಯಾವ ಸಮಯದಲ್ಲಿ ಎಲ್ಲ ವ್ಯಕ್ತಿಗಳು ಸಾಮಾನ್ಯವಾಗಿ ಉತ್ತಮರಾಗಿಯೇ ಇರುತ್ತಾರೋ ಆ ಸಮಯದಲ್ಲಿ ನೀಡುವ ಶಿಕ್ಷಣ ಜೀವನಶಿಕ್ಷಣವಾಗಲಾರದು. ಯಾವ ಸಮಯದಲ್ಲಿ ತಂದೆತಾಯಿಯರದ್ದೋ ಹಿರಿಯರದ್ದೋ ಗುರುಗಳದ್ದೋ ಮಾರ್ಗದರ್ಶನವಿರಬೇಕು ಆ ಸಂದರ್ಭದಲ್ಲಿ ಮನೆಯಲ್ಲಿರುವ ಟಿ.ವಿ.ಯೋ ಮೊಬೈಲೋ ಮಾದರಿಯಾಗಿದ್ದರೆ ಅದರಿಂದ ಪ್ರೇರಿತವಾದ ಯುವಜನಾಂಗ ಯಾವ ದಾರಿಯನ್ನು ಹಿಡಿದೀತು? ಇವರಿಂದಲೇ ನಿರ್ಮಿತವಾದ ಸಮಾಜ ಹೇಗೆ ಸ್ವಸ್ಥವಾದೀತು. ಬೆಳೆಯುವ ಮಕ್ಕಳಿಗೆ ಮಾದರಿ ಇರಲೇಬೇಕು. ಇದು ಸಿಗುವುದು ಗುರುಕುಲ ಶಿಕ್ಷಣದಿಂದ ಮಾತ್ರ. ಏಕೆಂದರೆ ಗುರುಕುಲದಲ್ಲಿ ಗುರುವೇ ಸ್ವತಃ ಮಾದರಿಯಾಗಿ ಜೀವನ ನಡೆಸುತ್ತಿರುವಾಗ ಅದರಂತೆ ಮಕ್ಕಳು ತಮ್ಮ ಜೀವನವಿರಬೇಕೆಂದು ಸಂಕಲ್ಪಮಾಡುತ್ತಾರೆ. ಅದಿಲ್ಲವಾದರೆ ಸಮಾಜದಲ್ಲಿರುವ ವಿಕೃತಿಗಳು ಮಕ್ಕಳಿಗೆ ಮಾದರಿಯಾಗಬಹುದು.

ಗುರುಕುಲ ಶಿಕ್ಷಣ ಇಂದಿನಕಾಲಕ್ಕೆ ಇನ್ನೂ ಪ್ರಸ್ತುತವೆನ್ನಬಹುದು. ಏಕೆಂದರೆ ಹಿಂದೆ ಮನೆಯಲ್ಲಿ ತಂದೆ ತಾಯಿ ಅಜ್ಜ ಅಜ್ಜಿ ಅಣ್ಣ ತಮ್ಮ ಮೊದಲಾದ ಅನೇಕರು ಒಡನಾಡಿಗಳು ಮಾರ್ಗದರ್ಶಕರು ಇರುತ್ತಿದ್ದರು. ಆದರೆ ಇಂದಿನ ಕೌಟುಂಬಿಕ ವ್ಯವಸ್ಥೆಯಲ್ಲಿ ಪರಿವಾರ ಚಿಕ್ಕದಾಗುತ್ತಾ ಬಂದಿರುವುದರಿಂದ ಸಹಬಾಳ್ವೆ ಎಂಬ ಪದಕ್ಕೆ ಅರ್ಥವೇ ಇಲ್ಲದಾಗುತ್ತಿದೆ. ಎರಡು ಅಥವಾ ಮೂರು ತಲೆಮಾರಿಗಿಂತ ಹೆಚ್ಚು ಜನರಿರುವ ಕುಟುಂಬಗಳನ್ನು ನೋಡುವುದೇ ಕಷ್ಟವಾಗಿದೆ. ಇದರ

CC-0. Nepal Sanskrit Academy, Kathmandu Collection

ಪರಿಣಾಮವಾಗಿ ಯುವ ಜನಾಂಗದವರು ಅಹಂಕಾರಿಗಳು, ಸ್ವಾರ್ಥಿಗಳಾಗುತ್ತಿದ್ದಾರೆ. ಅದಕ್ಕೆ ಪೂರಕವಾಗಿ ಬೆಂಕಿಗೆ ಗಾಳಿಯಂತೆ ಇಂದಿನ ಮಾಧ್ಯಮಗಳ ಪರಿಣಾಮ. ಹಾಗಾದರೆ ಮುಂದಿನ ಜನಾಂಗದ ಬಗೆಗೆ ನಾವು ಕನಸು ಕಾಣುವುದು ಹೇಗೆ?

ಗುರುಕುಲಪದ್ಧತಿ ಎಲ್ಲ ವಿದ್ಯಾಶಾಖೆಗೂ ಅನ್ವಯಿಸಬಹುದು

ಇನ್ನು ಎಲ್ಲಾ ವಿದ್ಯಾಶಾಖೆಗಳಿಗೂ ಗುರುಕುಲ ಮಾದರಿ ಸಾಧ್ಯವೇ ಎಂಬ ಪ್ರಶ್ನೆ ಇದೆ. ಹಿಂದೆ ಗುರುಕುಲ ಶಿಕ್ಷಣಕ್ಕಾಗಿ ಎಲ್ಲಿ ಗುರುಗಳಿದ್ದಾರೋ ಅಲ್ಲಿಗೇ ವಿದ್ಯಾರ್ಥಿಗಳು ತೆರಳುತ್ತಿದ್ದರು. ಅಥವಾ ಮನೆಯೇ ಮಕ್ಕಳಿಗೆ ಗುರುಕುಲವಾಗಿರುತ್ತಿತ್ತು. ಇದನ್ನೇ ಕುಲವಿದ್ಯೆ ಎಂದು ಕರೆಯಲ್ಪಡುತ್ತಿತ್ತು. ಅರ್ಥಾತ್ ಮನೆಯ ಹಿರಿಯರೇ ತಮ್ಮ ಕುಲಕಸುಬನ್ನು ತಮ್ಮ ಮಕ್ಕಳಿಗೆ ಕಲಿಸಿಕೊಡುತ್ತಿದ್ದರು. ಇದೂ ಗುರುಕುಲಪದ್ಧತಿಯೇ ಏಕೆಂದರೆ ವಿದ್ಯೆ ನೀಡುವ ಗುರುವಿನ ಕುಲವೇ ಗುರುಕುಲ ತಾನೇ? ಅಕ್ಷರಜ್ಞಾನವೇ ಶಿಕ್ಷಣವೆಂದಾದರೂ ಗುರುಕುಲಪದ್ಧತಿ ಸಾಧ್ಯ. ಕೌಶಲಗಳು ಶಿಕ್ಷಣವೆಂದಾದರೂ ಗುರುಕುಲಪದ್ಧತಿ ಸಾಧ್ಯ. ಇವೆಲ್ಲದರಲ್ಲಿಯೂ ವ್ಯಕ್ತಿತ್ವವಿಕಾಸ ಎಂಬುದು ಸಮಾನವಾದ ಅಂಶ. ವ್ಯಕ್ತಿತ್ವರೂಪಿತಗೊಳ್ಳುವ ವಯಸ್ಸಿನಲ್ಲಿ ಗುರುಕುಲಪದ್ಧತಿ ಇರಲೇ ಬೇಕು. ಉನ್ನತಾಧ್ಯಯನ ನಡೆಯುವ ಸಂದರ್ಭದಲ್ಲಿ ವ್ಯಕ್ತಿತ್ವವಿಕಸನಕ್ಕೆ ಮಹತ್ವಕಡಿಮೆಯಾಗುವ ಹಿನ್ನೆಲೆಯಲ್ಲಿ ಕದಾಚಿತ್ ಗುರುಕುಲ ಸಂಸ್ಕೃತಿ ಕಡಿಮೆಯಾಗಬಹುದು. ಆದರೆ ಅಧಿಶೀಲ ಅಧಿಚಿತ್ತ ಮತ್ತು ಅಧಿಪ್ರಜ್ಞಸ್ತರದಲ್ಲಿ ಅರ್ಥಾತ್ ಸುಮಾರು 8ನೇ ವಯಸ್ಸಿನಿಂದ ಸುಮಾರು 20 ವರ್ಷ ಆಗುವವರೆಗೂ ಇನ್ನೊಂದು ಮಾದರಿಯನ್ನು ನೋಡಿ ಜೀವನ ರೂಪಿಸಿಕೊಳ್ಳುವುದೇ ಅತ್ಯಂತ ವೈಜ್ಞಾನಿಕವಾದ ಕ್ರಮ. ಮನೆಯಲ್ಲಿಯೇ ಅಂತಹ ಸಂಸ್ಕಾರನೀಡುವ ವಾತಾವರಣವಿದ್ದರೆ ಮನೆಯೇ ಗುರುಕುಲವಾದೀತು. ಆದ್ದರಿಂದಲೇ ಗುರುಕುಲಪದ್ಧತಿಯನ್ನು ಎರಡಾಗಿ ವಿಭಾಗಿಸಲಾಗಿದೆ ಗೃಹಗುರುಕುಲ ಮತ್ತು ಸಾಂಸ್ಥಿಕ ಗುರುಕುಲ.

ಅಧಿಪ್ರತಿಭಸ್ತರಕ್ಕೆ ಬಂದರೆ ಜೀವನವನ್ನು ರೂಪಿತಗೊಳಿಸುವ ಪ್ರಕ್ರಿಯೆ ಮುಗಿಯುತ್ತಾ ಬಂದಿರುತ್ತದೆ ಮತ್ತು ಅದರ ನಂತರ ವ್ಯಕ್ತಿತ್ವದಲ್ಲಿ ಬಹಳವಾದ ಬದಲಾವಣೆ ತರುವುದೂ ಕಷ್ಟವಾದ್ದರಿಂದ 20 ರ ನಂತರ ಸಂಶೋಧನೆ, ಹೊಸ ಆವಿಷ್ಕಾರ, ಬೋಧ, ಆಚರಣ, ಪ್ರಚಾರ ಇವು ವಿದ್ಯಾಕ್ಷೇತ್ರದಲ್ಲಿ ಮಹತ್ವವನ್ನು ಪಡೆಯುತ್ತವೆ. ಗೃಹಸ್ಥರಾದಂಥವರೂ ವಿದ್ಯಾಗ್ರಹಣೆಗಾಗಿ ಗುರುಕುಲಗಳಿಗೇ ಹೋಗುತ್ತಿದ್ದರು ಎಂಬುದು ಶೌನಕಾದಿಗಳು ಪಿಪ್ಪಲಾದರ ಆಶ್ರಮಕ್ಕೆ ತೆರಳಿದ್ದರು ಎಂಬುದರಿಂದ ಅರಿವಾಗುತ್ತದೆ. ದೇವತೆಗಳೂ ವಿದ್ಯೆಯ ಗ್ರಹಣೆಗಾಗಿ ಗುರುಗಳ ಸಮೀಪಕ್ಕೇ ಹೋಗಬೇಕಿತ್ತು. ಇಂದ್ರ ವಿರೋಚನಾದಿಗಳು ಪ್ರಜಾಪತಿಯ ಬಳಿ ತೆರಳಿ ಬ್ರಹ್ಮಚರ್ಯವನ್ನು ಅರ್ಥಾತ್ ಗುರುಕುಲಪದ್ಧತಿಯನ್ನು ಅನುಸರಿಸಿ

CC-0. Nepal Sanskrit Academy, Kathmandu Collection

ಆತ್ಮವಿದ್ಯೆಯನ್ನು ಪಡೆದರು ಎಂದು ಉಪನಿಷತ್ತುಗಳು ಹೇಳುತ್ತವೆ. **"ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ"** ಎಂದು ಹೇಳುವ ಉಪನಿಷದ್ವಾಕ್ಯದ ತಾತ್ಪರ್ಯವೆಂದರೆ ವಿದ್ಯೆಯನ್ನು ಪಡೆಯಲು ಗುರುವಿನ ಸಮೀಪಕ್ಕೇ ತೆರಳಬೇಕು. ಇದನ್ನೇ **"ಉಪನಯನ"** ಎಂದೂ ಕರೆಯುತ್ತಾರೆ. ಉಪ ಸಮೀಪೇ ನಯನಂ ಉಪನಯನಮ್. ಯಾರ ಹತ್ತಿರ? ಗುರುವಿನ ಹತ್ತಿರ. ತಾಯಿಯಿಂದ ಪಡೆಯುವ ಶಿಕ್ಷಣ ಸಂಸ್ಕಾರ ಸುಮಾರು ಎಂಟು ವರ್ಷದವರೆಗೆ. ಅದಾದ ನಂತರ ಮಗುವು ಗುರುಕುಲಗಳಿಗೇ ಹೋಗಬೇಕು. ತದನಂತರವೂ ತಂದೆ-ತಾಯಿಯರ ಬಳಿಯಲ್ಲಿಯೇ ಮಗುವಿದ್ದರೆ ವಾತ್ಸಲ್ಯದ ಕುರುಡುತನವು ವ್ಯಕ್ತಿತ್ವದ ಬೆಳವಣಿಗೆಗೆ ಬಾಧಕವಾದೀತು.

ವಿದ್ಯೆಯನ್ನು ಪರ ಮತ್ತು ಅಪರ ಎಂಬುದಾಗಿ ವಿಭಾಗಮಾಡುತ್ತದೆ ಮುಂಡಕೋಪನಿಷತ್. ಸಾರವೆಂದರೆ ಯಾವುವು ಧರ್ಮಾರ್ಥಕಾಮಗಳ ಸಾಧನವಾದ ವಿದ್ಯೆಯೋ ಅದು ಅಪರವಿದ್ಯೆ. ಯಾವುದು ಮೋಕ್ಷಕ್ಕೆ ಕಾರಣವೋ ಅದು ಪರವಿದ್ಯೆ. **"ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವ ಅಪರಾ ಚ"**

ಗುರುಕುಲಗಳಲ್ಲಿ ಯಾವ ಯಾವ ವಿಷಯಗಳನ್ನು ಬೋಧಿಸಬೇಕು ಎಂಬುದಕ್ಕೆ ತಕ್ಕಂತೆ ಪ್ರಯೋಗ ಪರಿಶೀಲನೆ ಪರಿಷ್ಕಾರವೆಂಬ ತ್ರಿಸೂತ್ರಿಯನ್ನು ಅವಲಂಬಿಸಿ ವಿಷಯಗಳ ನಿಶ್ಚಯವನ್ನೂ ಮಾಡಿದ್ದಾರೆ. ಇದು ಕಾಲಕಾಲಕ್ಕೆ ಕೆಲ ಪರಿಷ್ಕಾರಗಳನ್ನು ಪಡೆಯಬಹುದು. ಅವೆಂದರೆ ಜ್ಞಾನನಿಧಿಃ, ವಿಜ್ಞಾನ ಯೋಗಃ ಕೃಷಿಃ ಕಲಾ ಎಂಬುದಾಗಿ. ಈ ವಿಷಯಗಳು ಮೊದಲೇ ಉಲ್ಲೇಖಿಸಲ್ಪಟ್ಟ ಅನ್ನಮಯಾದಿ ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಕೋಶಗಳಿಗೂ ಸಂಸ್ಕಾರವನ್ನು ನೀಡುತ್ತವೆ. ಅಂತೆಯೇ ಬ್ರಾಹ್ಮಮುಹೂರ್ತದಿಂದ ಆರಂಭವಾದ ಕ್ರಿಯಾ ಯೋಜನೆ ರಾತ್ರಿ ಸುಮಾರು 10ಕ್ಕೆ ಮಲಗುವವರೆಗೂ ವೈವಿಧ್ಯವನ್ನು ಹೊಂದಿರುತ್ತದೆ. ನಿತ್ಯದ ಕ್ರಿಯಾಕಲಾಪಗಳ ಜೊತೆಗೆ ನೈಮಿತ್ತಿಕ-ವಾದ ಚಟುವಟಿಕೆಗಳೂ ಸಂಸ್ಕಾರಪ್ರದವಾಗಿಯೇ ಇರುತ್ತವೆ. ವಿದ್ವತ್ತೆಯ ಜೊತೆ ಸಾಮಾಜಿಕ ಕಾಳಜಿಯನ್ನು ಸಮಾಜಕ್ಕಾಗಿ ತನ್ನ ಕರ್ತವ್ಯವನ್ನು ಸ್ಮರಣೆ ಮಾಡುವುದಕ್ಕಾಗಿ ಕೆಲ ಚಟುವಟಿಕೆಗಳನ್ನೂ ಹಮ್ಮಿಕೊಂಡಿರುತ್ತಾರೆ.

ಅಧ್ಯಯನ, ಅನುಷ್ಠಾನ, ಅನುಸಂಧಾನವೆಂಬುದು ಗುರುಕುಲಶಿಕ್ಷಣದ ಆತ್ಮ, ಇವೇ ಜ್ಞಾನವನ್ನು ನಿಡುವುದಕ್ಕೆ ಮತ್ತು ವ್ಯಕ್ತಿತ್ವರೂಪಿತಗೊಳ್ಳುವುದಕ್ಕೆ ಇರುವ ಸಾಧನ. ನಿತ್ಯವೂ ವಿಶಿಷ್ಟವಾದ ವಿಷಯಗಳ ಪಠನ ಮತ್ತು ಪಾಠನ, ಅನುಷ್ಠಾನದಲ್ಲಿ ಇಷ್ಟದೇವತಾ ಪ್ರಾರ್ಥನೆ, ಧ್ಯಾನ ಇತ್ಯಾದಿಗಳಿಂದ ಅಂತಃಸತ್ವದ ವರ್ಧನೆ, ಅನುಸಂಧಾನದಿಂದ ಹೊಸವಿಷಯಗಳ ಆವಿಷ್ಕಾರ ಇವೇ ನಮ್ಮ ಕ್ರಿಯಾಕಲಾಪದ ಸಂಕ್ಷೇಪ.

CC-0. Nepal Sanskrit Academy, Kathmandu Collection

स्वस्थसमाजनिर्माणे औपनिषदः पन्थाः

✍ डा. गणेश ईश्वर भट्टः
सहाचार्यः वेदान्तविभागाध्यक्षः च
केन्द्रीयसंस्कृतविश्वविद्यालयः राजीवगन्धिपरिसरः. शृङ्गेरि

वेदाः भारतीयसंस्कृतेः सनातनधर्मस्य च मूलभूताः भवन्ति । वेदानां सारभूतं तत्त्वम् उपदिशन्त्य उपनिषदः जीवनस्य सार्थक्याय मार्गं दर्शयन्ति । किन्तु उपनिषदां लक्ष्यं न केवलम् आत्मोद्धारः, अपि तु जगद्धितमपि । उपनिषदः मानवं तेन सर्वजनीनेन मार्गेण गमयन्ति, येन व्यष्टिसमष्ट्योः उभयोरपि हितं सिद्ध्येत् । औपनिषदं पन्थानम् आश्रित्य अस्माकं प्राचीनाः भारतीयाः स्वयं सर्वात्मना स्वस्था बभूवुः, स्वस्थं समाजं च निर्ममिरे । अतः उपनिषत्सु प्रतिपादितान् स्वस्थसमाजनिर्माणोपयोगिनः कांश्चिद् विषयान् अवलोकयामः ।

1. आत्मैकत्वविद्या रागद्वेषविनाशिनी

ज्ञानं कर्म इत्येतद् द्वयं भारतीयसमाजस्य आधारभूतं तत्त्वम् । अनयोः महिमा ईशावास्योपनिषदि आदिमे मन्त्रद्वये स्फुटं निरूपितः । तत्र प्रथमो यथा-

ईशावास्यमिदं सर्वं यत्किञ्च जगत्यां जगत् ।
तेन त्यक्तेन भुञ्जीथा मा गृधः कस्य स्विद्धनम् ॥ इति ।

अयमर्थः- एक एव आत्मा सर्वेषु भूतेषु अवस्थितः । किन्तु सर्वत्र लोके अहं, सः, अहमिदं ममेदम् इति जनेषु निसर्गतः आविद्यकः व्यवहारः दृश्यते । सः मदपेक्षया भिन्नः, सः मम शत्रुः, सः हन्तव्यः, अहं रक्षणीयः, इदं मदीयम्, अयं मदीयः सः परकीयः इत्येवं भावः जनेषु बाहुल्येन दृश्यते । यद्यपि अस्याः भेदबुद्धेः निःशेषतः अपनयनम् असम्भवि, तथापि परोक्षप्रमाणैः एवंविधस्य भेदस्य मिथ्यात्वं ज्ञात्वा अभेदस्य अपरोक्षज्ञानाय प्रयत्नस्तु कर्तुं शक्यः । तस्यां दिशि उपनिषद्वाक्यानि अस्मान् प्रवर्तयन्ति । अद्वैतात्मबुद्धिरेव समताबुद्धिः । **"सम आत्मेति विद्यात्"** इति श्रुतिः । आधुनिककाले बहुधा कथ्यमाना इयं समता उपनिषत्प्रतिपाद्या एव । भेदबुद्धिः हेया इति उपनिषदां महानुपदेशः । तद्यथा- एक एव परमात्मा चेतनाचेतनरूपेण अवस्थितः । तस्य एकत्वात्, परमार्थतः तद्भिन्नस्य कस्यचित् अभावाच्च सर्वोऽपि भेदः अविद्याकृत एव । यदा आत्मनः याथात्म्यज्ञानेन अविद्यात्मकम् आवरणं विनश्यति, तदा स्वयं स्वस्थः अन्यानपि आत्मौपम्येन पश्यति । यथोक्तम्-

CC-0. Nepal Sanskrit Academy, Kathmandu Collection

"आत्मवत् सर्वभूतेषु यः पश्यति स पश्यति" इति ।

अपि च एवम् अद्वैतबुद्धिः येषां जायते, तेषाम् आत्मभिन्नं वस्तु पुरुषं वा अपश्यतां तीव्रः रागः द्वेषो वा न उत्पद्यते । रागद्वेषावेव समाजे अशान्तेः मुख्यं कारणम् । अज्ञानी पुरुषः प्रियं द्वेष्यं चेति द्विविधं वस्तु कल्पयति । यस्य विदुषः सर्वम् आत्मैवाभूत्, तस्य धनं सुवर्णं वा प्रियं किम् अवशिष्यते? आत्मभिन्नम् आत्मनः प्रतिकूलं द्वेष्यं किं तस्य भविष्यति? न किमपि । अतः अद्वितीयम् आत्मानं यः सम्यग् जानाति, तस्य धनादिविषयेषु तृष्णा विनश्यति । कठोपनिषदि अपि श्रुतम्- न वित्तेन तर्पणीयो मनुष्यः इति । एवम् उपनिषत्प्रतिपाद्यात्मैकत्वबुद्धिः समाजे रागद्वेषयोः न्यूनीकरणे कारणं भवति ।

2. कर्तव्यं कर्म न त्यजेत्

ज्ञानप्राधान्यप्रतिपादनपरा अपि उपनिषदः कर्मणाम् उपादेयत्वं नैव निराकुर्वन्ति । ईशावास्योपनिषद एव अयं मन्त्रः समाजे जनानां क्रियाशक्तिं जागरयति -

> **कुर्वन्नेवेह कर्माणि जिजीविषेच्छतं समाः ।**
> **एवं त्वयि नान्यथेतोऽस्ति न कर्म लिप्यते नरे ॥**

उत्तमाधिकार्यपेक्षया लोके मन्दमध्यमाधिकारिणामेव बाहुल्यात् सर्वे कर्तव्यं कर्म अवश्यं कुर्युः । कर्तव्यस्य कर्मणः त्यागे, समाजे महान् अनर्थो भविष्यति । मनुष्यः स्वभावेनैव कर्मणि प्रवर्तते । किन्तु यत्कर्म नश्वरं सुखं प्रापय्य अन्ते दुःखमेव जनयिष्यति, तदकृत्वा यत् स्वस्य समाजस्य च अन्ततः हितं जनयति तत् कर्तव्यम् इति उपनिषदाम् आदेशः । लौकिकानां भोगानाम् अनित्यत्वात् तत्र महती आस्था न करणीया इति कठोपनिषदि विस्तरेण स्वयं बालः नचिकेताः प्रत्यपीपदत् । अतः यथा मानवाः सोत्साहं कर्मसु प्रवर्तेरन्, तथा उपनिषदः सत्कर्मसु मानवान् प्रवर्तयन्ति, यानि परम्परया श्रेयस्साधनानि भवन्ति । विषयेऽस्मिन् "उत्तिष्ठत! जाग्रत! प्राप्य वरान्निबोधत" इति कठोपनिषत् साधकान् उद्बोधयति ।

अध्ययनादिकर्मणाम् अनिवार्यता

समाजस्वास्थ्याय कानिचित् कर्माणि निरन्तरं भवेयुः । अध्ययन-अध्यापन-यज्ञ-दान-तप-आख्यानि कर्माणि स्वस्थसमाजस्य आधारभूतानि । तमेतं वेदानुवचनेन ब्राह्मणा विविदिषन्ति यज्ञेन दानेन तपसाऽनाशकेन इति श्रुतिः अध्ययनयज्ञदानतपसां महत्त्वं बोधयति । भारतीयसंस्कृतौ इतरसर्वकर्मापेक्षया अध्ययनाध्यापनयोः प्राधान्यं दत्तम् । अत एव भारतीयसमाजः बलवान् संवृत्तः । अध्ययनेन यः विद्यां सम्पादयति, स एव स्वस्य राष्ट्रस्य च समुद्धरणे समर्थो भवति । **"स्वाध्यायप्रवचनाभ्यां न प्रमदितव्यम्" "स्वाध्यायान्मा प्रमदः"** इति तैत्तिरीयोपनिषत् पौनःपुन्येन अध्ययनाध्यापनयोः अवश्यकर्तव्यतां ज्ञापयति ।

CC-0. Nepal Sanskrit Academy, Kathmandu Collection

अध्ययनं हि धर्माचरणेन समाजस्य स्वास्थ्यसंरक्षणाय कल्पत इति छान्दोग्योपनिषत् सुस्पष्टं कथयति- **"आचार्यकुलाद् वेदमधीत्य यथाविधानं गुरोः कर्मातिशेषेण अभिसमावृत्य कुटुम्बे शुचौ देशे स्वाध्यायमधीयानः धार्मिकान् विदधत्"** इति । अधीतविद्यः समाजे स्वस्य अध्ययनेन अन्यान् जनान् धार्मिकान् कुर्यात् इत्यर्थः अत्र प्रतिपादितः । अध्ययनमिव तपः अपि मनश्शान्तेः स्वस्थतायाश्च कारणम् । एवं कर्मकाण्डे निरूपितं यज्ञादिकं कर्म उपनिषत्सु आद्रियत एव । किन्तु कर्माणि संसारबन्धनस्य कारणानि न भवेयुः इत्यत्र उपनिषदां नैर्भर्यम् ।

दानमपि सामाजिकानाम् अनिवार्यं कर्म । **"दत्त दयध्वं दाम्यत"** इति बृहदारण्यकोपनिषत् दानदयादमानां कर्तव्यताम् आदिशति । एवमेव सामजिकानां संरक्षणे दानम् अपि एकं मुख्यं साधनम् । यज्ञे अन्यत्र वा समाजे धनिना अवश्यं दानं कर्तव्यम् । दानेन शत्रवः अपि मित्राणि भवन्ति । अतः याज्ञिक्युपनिषत् दानस्य प्रशंसां करोति- **"लोके दातारं सर्वभूतान्युपजीवन्ति दानेनारातीरपानुदन्त दानेन द्विषन्तो मित्रा भवन्ति दाने सर्वं प्रतिष्ठितं तस्माद्दानं परमं वदन्ति"** इति । तैत्तिरीयोपषत् कथयति- **"श्रिया देयम् । ह्रिया देयम् । भिया देयम् । संविदा देयम्"** इति । सर्वोऽपि स्वसामर्थ्यानुसारं विधिपूर्वकं दानं कुर्यात्, मया दीयमानम् अल्पमेवास्ति, दानाकरणे अपराधो भविष्यति इति भावना अपि भवेत् इति तदर्थः । आधुनिके काले दया हि धर्म इति असकृत् कथ्यते । उपनिषदः दयायाः महिमानं बोधयन्ति इति दयध्वम् इति वचनेन ज्ञायते, यदेव गीतायाम् अद्वेष्टा सर्वभूतानां मैत्रः करुण एव च इत्यादिना प्रपञ्चितम् । भगवानपि यज्ञादीनां कर्मणाम् अवश्यकर्तव्यतां ज्ञापयति- **"यज्ञदानतपःकर्म न त्याज्यं कार्यमेव तत्"** इति ।

यद्यपि भारतीयाः सगौरवं देवताः नमस्कुर्वन्ति स्वाभीष्टमपि प्रार्थयन्ते । कृतकृत्यः ज्ञानी कर्माणि त्यजतु नाम, अन्ये तु अवश्यं कर्तव्यं कर्म कुर्युः । तथापि स्वकर्तव्यम् अकृत्वा दैन्यभावेन ते न याचन्ते । कर्म कृत्वा ते सविनयं फलं प्रार्थयन्ते । आलस्येन उपेक्षया वा कर्मत्यागः न उपनिषन्मतानुसारिणां स्वभावः । **"योऽसावसौ पुरुषः सोऽहमस्मि क्रतो स्मर कृतं स्मर"** इति ईशावास्योपनिषदि अयमर्थः दर्शितः ।

3. सन्ततिसंवर्धनम्

गुरुकुले प्रथमतः अध्ययनं कर्तव्यम् । ततः गुरुदक्षिणां दत्वा गुरुकुलात् स्वगृहं प्रति युवा निवर्तेत । ततः धर्मानुष्ठानाय सः गृहस्थाश्रमं प्रविशेत् । **"प्रजातन्तुं मा व्यवच्छेत्सीः"** इति उपनिषत् आज्ञापयति । मनुष्यः सन्ततेः वर्धनाय पत्न्या सह रमेत, न तु भोगाय, गृहस्थो भूत्वा भोगमात्रम् इच्छन् कोऽपि सन्ततिवर्धनम् अकृत्वा न तिष्ठेत्, सः अपराध इति अस्मिन् वाक्ये अभिहितम् । कश्चित् जीवः यदा जन्म प्राप्नोति ततः प्रागेव तेन महती जीवनयात्रा कृता भवति । पित्रा भुज्यमानेन अन्नेन जीवः पितृशरीरं प्रविशति । ततः यदा स पिता स्त्रिया संयुक्तो भवति, तदा जीवः वीर्यद्वारा स्त्रियाः शरीरं प्रविशति । पश्चात् मातुः उदरात् यदा

CC-0. Nepal Sanskrit Academy, Kathmandu Collection.

भूमौ आयाति तत् तृतीयं जन्म । इदं सर्वं परिलक्ष्य अपत्यकामौ दम्पती जीवनं कुर्याताम् इति ऐतरेयोपनिषदि **"पुरुषे ह वा अयमादितो गर्भो भवति"** इत्यादिना ग्रन्थेन निगदितम् ।

एवं **"सत्यं वद । धर्मं चर । मातृदेवो भव । पितृदेवो भव । आचार्यदेवो भव । अतिथिदेवो भव"** इत्यादीनि तैत्तिरीयोपनिषद्वाक्यानि सुसंस्कृतसमाजनिर्माणाय सर्वान् प्रेरयन्ति । **"समूलो वा एष परिशुष्यति योऽनृतं वदति"** इति प्रश्नोपनिषत् अनृतवदनस्य घोरपापजनकत्वं दर्शयति । **"सत्यमेव जयते नानृतम्"** इति वदन्त्याः मुण्डकोपनिषदः अपि अयमेव आशयः ।

4. ज्ञानिभिः सह व्यवहारः

अद्य समाजे बहवः ज्येष्ठैः सह कथं व्यवहर्तव्यम् इति न जानन्ति । ज्येष्ठानां गुरुणां वा सन्निधौ सविनयं व्यवहर्तव्यम् इति उपनिषदः बोधयन्ति । तैत्तिरीयोपनिषत् कथयति **"तेषां त्वयाऽसने न प्रश्वसितव्यम्"** इति । गुरुभ्यः आसनं दत्त्वा तेषां सेवा कर्तव्या । तेषाम् आसने शिष्यः स्वयं न उपविशेत् । तेषाम् आसने शिष्येण प्रश्वासः अपि न कर्तव्यः । प्रश्वासकाले शरीरान्तस्थाः विषाणवः अपि बहिः निस्सरन्ति ।अस्मिन् काले महतः रोगस्य प्रसाराय प्रश्वास एव कारणं भवतीति वैज्ञानिकाः वदन्ति । अस्माकम् उपनिषदां वाक्यानां महिमानम् एतादृशवाक्येन ज्ञातुं शक्यम् ।

ज्येष्ठाः पूजनीयाः । तैः सह बोधप्राप्तये वादः कर्तुं शक्यः । किन्तु दुर्वादः नैव कर्तव्यः । प्रश्नानां या सीमा, तामतिक्रम्य विजिगीषया कथा न कार्या इति बृहदारण्यकोपनिषदि तृतीयाध्याये वर्णितम् । ये विषयाः तर्केणापि ज्ञातुम् अशक्याः, तान् अधिकृत्य सीमाम् अतिक्रम्य प्रश्नाः न कर्तव्याः । न हि सर्वोऽपि विषयः तर्कगोचरो भवति । अत एव तत्र आख्यायिकायाम्, धाष्टर्येन प्रश्नं कुर्वतीं गार्गीं याज्ञवल्क्यः प्रबोधयामास- "गार्गि! माऽतिप्राक्षीर्मा ते मूर्धा व्यपप्तदनतिप्रश्न्यां वै देवतामतिपृच्छसि गार्गि माऽतिप्राक्षीः" इति । प्रबोध्यमानोऽपि शाकल्यः ब्रह्मिष्ठं धिक्कुर्वन् अन्ते विनाशं गत इति कथाऽपि तस्यामेव उपनिषदि वर्णिता ।

5. अहङ्कारः अनर्थहेतुः

समाजे नैकेषु दृश्यमानः कश्चन दोषः अहङ्कारः । अयम् अकार्येषु जनान् प्रेरयति, बहून् शत्रूंश्च सृजति । अहङ्कारः आसुरस्वभाव इति बोधयितुं केनोपनिषदि काचिदाख्यायिका वर्णिता- कदाचित् केनापि कारणेन देवासुरयोः सङ्ग्रामः अभूत् । तत्र देवाः विजयं प्रापुः । वस्तुतः देवेष्वपि अवस्थितं ब्रह्मचैतन्यमेव विजयस्य कारणमासीत् । किन्तु अस्माकमेव सामर्थ्यम् अत्र विजये हेतुः, नान्यत् किमपि इति देवा अमन्यन्त । ब्रह्म देवानाम् इमम् आसुरस्वभावम् अपनेतुं किञ्चिद् विस्मापनीयं रूपं धृत्वा तत्र प्रादुर्बभूव । किं तदिति ज्ञातुं प्रथमम् अग्निः तस्य समीपं जगाम । गत्वा च साहङ्कारं स्थितः अग्निः ब्रह्मणः पुरतः एकं तृणमपि

CC-0. Nepal Sanskrit Academy, Kathmandu Collection

दग्धुं न शशाक । एवमेव वायुरपि साहङ्कारः ब्रह्मणः समीपं गतः एकं तृणमपि आदातुम् असमर्थो बभूव । इन्द्रस्तु भूयसा अहङ्कारेण युक्तः ब्रह्मणः रूपमपि द्रष्टुं नाशक्नोत् । एवम् असामर्थ्येन लज्जिताः ते उमाया उपदेशेन विजयस्य हेतुः ब्रह्मैव इति व्यजानन् । देवानामपि विजये ब्रह्मैव कारणम् इति निरूपितं चेत् किमु वक्तव्यं केवलानां मनुष्याणाम् असामर्थ्यविषये । अतः मनुष्या अहङ्कारं परित्यज्य साधुमार्गे गच्छेयुः इति आख्यायिकापुरस्सरम् उपनिषद् बोधयति ।

6. विद्यायां स्त्रीणां सहभागित्वम्

विद्यायाम्, तत्रापि विशिष्य अध्यात्मविद्यायां पुरुषाणामेव अधिकारः वेदे प्रतिपादित इति केचन मन्यन्ते । किन्तु पुरा स्त्रियः अपि अध्यात्मविद्यासम्पन्ना आसन् इति उपनिषद्भिः सुस्पष्टं ज्ञायते । अध्यात्मतत्त्वज्ञा गार्गी ब्रह्मिष्ठं याज्ञवल्क्यं बहून् प्रश्नान् पप्रच्छ इति बृहदारण्यकोपनिषदि श्रुतम् । तत्रैव अन्यस्याम् आख्यायिकायां मैत्रेय्या आत्मतत्त्वजिज्ञासा प्रदर्शिता । सः भागः मैत्रेयीब्राह्मणम् इत्येव प्रसिद्धः । वित्तविभागं कुर्वन्तं याज्ञवल्क्यं तस्य पत्नी मैत्रेयी अपृच्छत् **"येनाहं नामृता स्याम् किमहं तेन कुर्याम् यदेव भगवान् वेद तदेव मे ब्रूहि"** इति । मोक्षसाधनत्वाभावात् वित्तम् अनिच्छन्ती मैत्रेयी याज्ञवल्क्येन विज्ञातं तत्त्वमेव ज्ञातुम् ऐच्छत् । ततः याज्ञवल्क्यः तां सविस्तरम् आत्मतत्त्वं बोधयामास ।

7. परिपूर्णज्ञानाय प्रेरणा

अवश्यम् अयं विषयः ज्ञातव्य इति मत्वा वयं कश्चिद् विषयं ज्ञातुं प्रवर्तामहे । किन्तु विषयः गभीरश्चेत् सहसा सः विषयः न ज्ञायते । यावत् निस्सन्दिग्धतया विषयः न ज्ञायते, तावत् अस्माभिः प्रतीक्षणीयं प्रयतनीयं च । यदा विषयः किञ्चिद् ज्ञायते, तदैव सर्वात्मना ज्ञातमिदमिति मत्वा आतुरैः ज्ञानार्जनप्रक्रिया न हातव्या । उपनिषदः परिपूर्णज्ञानाय अस्मान् प्रेरयन्ति । इन्द्रविरोचनाख्यायिकायाम् एवं वर्णितम्- देवराजः इन्द्रः असुरराजः विरोचनश्च आत्मविद्याप्राप्तये प्रजापतेः समीपं जग्मतुः । यदा सोपानक्रमेण प्रजापतिः उपदेशं प्रारेभे, तदैव विरोचनः प्राप्तं ज्ञानमिति मन्वानः गुरुं विसृज्य स्वजनान् आगत्य शरीरमेव आत्मा इति विपरीतं बोधयामास । इन्द्रस्तु पुनः पुनः विचार्य, प्रश्नांश्च कृत्वा समाधानं च प्राप्य अन्ते यथार्थतया आत्मतत्त्वं विजज्ञौ इति ।

एवम् उपनिषदः मनुष्यजीवनस्य पूर्णतां सम्पादयन्ति । प्रत्येकं मनुष्यः यदा ज्ञानेन कर्मणा च पूर्णो भवति, तदा समाजः परिपूर्णः समृद्धः स्वस्थश्च भविष्यति । असंसारितत्त्वबोधनपरा अपि उपनिषदः संसारकालीनं जीवनं न उपेक्षन्ते । **"आत्मनो मोक्षाय जगद्धिताय च"** इति उपनिषदां लक्ष्यम् । आधुनिके काले बहवो हि प्रसिद्धाः पुरुषाः भाषान्तरेण औपनिषदमेव तत्त्वम् अबोधयन् । विद्यारण्यविवेकानन्दप्रभृतयः महात्मानः औपनिषदेन मार्गेण भारतीयसमाजं उद्बोधयामासुः । वयं भारतीया औपनिषदं पन्थानम् आश्रित्य गच्छामः, विश्वं च विबोधयामः ।

CC-0. Nepal Sanskrit Academy, Kathmandu Collection

सुसमाजसन्दर्शनम्

(महाभाष्यकारोल्लिखितांशाधारेण तात्कालिकसमाजैकदेशनिरूपणम्)

✍ डा. शम्भुनाथभट्टः
Assistant Professor, SSSUHE Kalaburgi, Muddenahalli Campus
Chikkaballapur, Karnataka

महर्षिपतञ्जलेः भारतीयपरम्परायां महद्योगदानं वर्तते । दार्शनिकपथेषु व्याकरणमार्गोऽपि अन्यतमः, श्रेष्ठश्च इति प्रतिपादितम् । भर्तृहरिणा इतोऽपि विस्तृतरूपेण वाक्यपदीये स प्रदर्शितो वर्तते। महर्षिणा पाणिनिना संरचितस्य ऋषिमतिवैभवविभूषितस्य अष्टाध्यायीग्रन्थस्य भाष्यं पतञ्जलिना आरचितम् । तच्च महाभाष्यमिति नाम्ना प्रख्यातिं प्रापत् । पाणिनिव्याकरणस्य व्याख्यारूपोऽयं ग्रन्थः अनुपमः । जगतीतले प्रायः एतादृशः नान्यो ग्रन्थः चकास्ति । विशिष्टया शैल्या, महत्त्वेन, गभीरविचारणसरण्या च महाभाष्यम् अन्वर्थतां प्राप्नोति । "महाभाष्यं वा पाठयेत् महाराज्यं वा पालयेत्" इति अभियुक्तोक्तिः अस्य महत्त्वं प्रतिपादयति । महाभाष्यस्य भाषासौष्ठवं भाषाप्रयोगश्च अस्य अतितरां प्रशस्तिं बोधयति । कठिनतरस्यापि विषयस्य विवेचनपद्धतिः हृद्या । न्यायमीमांसाटिकाग्रन्थानां केवलभाष्यशब्देनैव व्यवहारः । अस्य तु श्रीमद्भगवत्पतञ्जलिप्रणीतस्य महाभाष्यशब्देन व्यवहारो लोके क्रियते आदरेण महत्त्वबोधनाय च ।

"तच्च भाष्यं न केवलं व्याकरणस्य निबन्धनं यावत्सर्वेषां न्यायबीजानां बोद्धव्यमित्यतः एव सर्वन्यायबीजहेतुत्वादेव महच्छब्देन विशेष्य महाभाष्यमित्युच्यते लोके" इति पुण्यराजेन[1] भणितम् । महाभाष्यस्य अवलोकनेन महाभाष्यकारसमये ततः प्राग्वा का वा भारतस्य दशा आसीत् ? कथं वा एतद्देशीयाः कालं विनियुञ्जते स्म ? कृष्यादिकार्यं कथमासीत् ? मनुष्याणां स्वभावः कथमासीत् ? प्रमाणादिव्यवहारः आसीन्न वा ? लोकव्यवहाराश्च कथमासन् ? इति सम्यगवगम्यते । यद्यपि एतान् अंशान् प्रतिपादयितुम् भाष्यं न प्रवृत्तं तथापि उदाहरणप्रदर्शनकाले, विषयनिरूपणकाले, लोकन्यायप्रतिपादनावसरे च एते अंशाः उल्लिखिताः । तदेव आश्रित्य खलु विचारः कर्तव्यः । महाभाष्यकाराः पाणिनेः सूत्राणि, कात्यायनस्य वार्तिकानि च अधिकृत्य महाभाष्यम् अरचयन् । सूत्रवार्तिकानां व्याख्यानं कुर्वता भाष्यकारेण प्रायः लौकिकाः न्यायाः, दृष्टान्ताः च विषयनिरूपणार्थं उपायोजिषत ।

---

1 वाक्यपदीयम् १.८८

CC-0. Nepal Sanskrit Academy, Kathmandu Collection

ततः प्राक्, तत्काले च समाजस्य पूर्वोक्तविषयिणी जिज्ञासा स्यात् कदाचित् । तां शमयितुमयं प्रयासः । इदमत्र अवधेयं यत् यावान् वा ऊहः, तर्को वा क्रियतां पूर्णरूपेण यथावत्स्वरूपं न शक्यते वक्तुम् । एकदेशतो वा ज्ञातुं शक्नुमः इत्येव आशयः अस्य लेखस्य । अद्यत्वे सामाजिकानां आचाराः, व्यवहाराः च कथं सन्तीति जानीमः । तत्र शिष्टव्यवहारमनुसरन्तः वर्तन्ते केचन । अन्ये केचन स्वकपोलकल्पितान् तर्कबुद्धिसंयोजितान् विषयान् अवलम्ब्य तैः कृतमेव सम्यक् अन्यैः क्रियमाणमसाधु इति व्यवहरन्ति । अपरे केचन उदरभरणार्थमेव लोके सन्तीव कालं यापयन्ति । परं महाभाष्यकाराणां कानिचनोदाहरणान्यवलोक्य तात्कालिकीम् अवस्थाम् अनुमातुं प्रयत्यते ।

छात्रजीवनम् –

शिक्षाप्रपञ्चे विद्यमानानाम् अस्माकं छात्रजीवनं खलु प्राधान्येन अवलोकनीयम् । अतः तस्य प्राधान्यात् तदेव आदौ उपन्यस्यते । प्रायः सर्वेषां कालेऽपि भारतदेशे विद्यार्जनं प्रधानं स्थानमावहति। विद्या कथमुपयुक्ता स्यादिति महाभाष्ये इत्थं वर्णितम् –

"चतुर्भिश्च प्रकारैः विद्या उपयुक्ता भवति –

१. आगमकालेन,

२. स्वाध्यायकालेन,

३. प्रवचनकालेन,

४. व्यवहारकालेन इति"[2] ।

आगमकालो नाम विद्याग्रहणकालः । स्वाध्यायकाल इत्यनेन अभ्यासकालो ग्राह्यः। प्रवचनकालत्वेन अध्यापनकालस्य ग्रहणम्। व्यवहारकालः इति यज्ञादिकर्मणामनुष्ठानं बोध्यते इति कैयटाशयः[3] । व्याकरणाध्ययनस्य प्रयोजनकथनावसरे **"आगमः खल्वपि । ब्राह्मणेन निष्कारणो धर्मःषडङ्गो वेदोऽध्येयः ज्ञेयश्च"** इति एवम् अध्ययनस्य धर्मत्वं प्रदर्श्य महत्त्वं बोधितम् । छात्रान् धर्ममार्गे तत आरभ्य एव प्रेरयति ।

समाजस्य प्राणभूताः राष्ट्रनिर्मातारः विद्यार्थिनः । **"कमण्डलुपाणिं छात्रमद्राक्षीत्"** [4] इत्याद्याः उक्तयः छात्राणां गुणचारित्र्यं बोधयन्ति । स्वाध्यायशालिनः, ब्रह्मचर्यरताः, समाजेन समादृताः, देशविभूषणाः भवन्ति स्म इति ज्ञायते । ये च दुश्चरिताः अध्ययनाद् विमुखाः कठोररूपेण निर्भर्त्सिताः भवन्तिस्म । यथा **ध्वाङ्क्षेण क्षेपे**[5] इति सूत्रे **"यथा तीर्थकाकाः न**

---

2 पस्पशाह्निकम् पृ. सम् -५४

3 पस्पशाह्निकम् पृ. सम् -५४

4 अनुर्लक्षणे सूत्रभाष्ये

5 अष्टाध्यायी – २-१-४२

CC-0. Nepal Sanskrit Academy, Kathmandu Collection

चिरं स्थातारो भवन्ति एवं यो गुरुकुलानि गत्वा न चिरं तिष्ठति स उच्यते तीर्थकाक" इति। छात्राणां स्तुतिनिन्दे यथा प्रवर्तेते न तथा अध्यापकानाम् । अत्र इदमपि कारणं स्यात्– ये प्रयोजनमनपेक्ष्य कर्तव्यमिति बुद्ध्या शिष्यान् पाठयन्ति ते कथं निन्दनीया भवेयुः इति । तदा ग्रामे ग्रामे विद्याव्यसनिनः कर्तव्यबुद्ध्या अध्यापनवृत्तिं सम्पादयन्तः सर्वानपि शिष्यान् अध्यापयन्ति स्म । यथा इदानीं पाठशालाकरणमपि धनसम्पादनाय केषाञ्चित्, प्रतिष्ठाप्रदर्शनाय अन्येषाम् । तत्र छात्रोत्कर्षाय चिन्तनं न्यूनं भवति । स्वप्रतिष्ठा, धनार्जनम्, स्वहिताय गुरुकुलानि उपयुज्यन्ते इति कलिप्रभावः दरीदृश्यते । न तदानीमेवमासीत् इति गम्यते । बहुशास्त्राभिज्ञाः गुरवः स्वशिष्यानपि तद्रूपेण प्रावर्धयन् । शिष्यप्रशिष्यक्रमेण तां परम्परां परिपालयन्तः संवर्धयन्तश्च आसन्निति गम्यते ।

गुरुशिष्यसम्बन्धः

अयमेकः उत्कृष्टः सम्बन्धः भारतीयविद्यानाम् अध्ययनपरम्परायां वरीवर्ति । यथा मातापितरौ देवत्वं भजेते तथा गुरुः देवदर्शनोपायबोधकः सन् देवत्वं प्राप्नोति । तदन्तिके विद्यार्जनाय शिष्यत्वसम्पादनं न पुण्यरहितस्य सिदधयति । छात्रशब्दव्युत्पादनावसरे भाष्यकारैः स सम्बन्धः प्रदर्शितः । तथा च **छत्रादिभ्यो णः**[6] इति सूत्रे **"किं यस्य छत्रधारणं शीलं स छात्रः ? किञ्चातः ? राजपुरुषे प्राप्नोति । एवं तर्हि उत्तरपदलोपोऽत्र द्रष्टव्यः । छत्रमिव छत्रम् । गुरुः छत्रम् । गुरुणा शिष्यः छत्रवद् छाद्यः । शिष्येण गुरुः छत्रमिव परिपाल्यः ।"** इति भाष्यम् । अत्र छत्रशब्दः छत्रसदृशपरः । गुरुः छत्रवद् भवति अतः गुरुः छत्रमिति कथ्यते । गुरुणा शिष्यः छत्रवद्रक्षणीयः । छत्रं यथा परिपाल्यते तथा शिष्येण गुरुः परिपालनीयः । अतः अपि गुरुः छत्रम् । तादृशगुरोः धारणं पालनं शीलं भवति शिष्यस्य इति शिष्यः छात्रो भवति । अध्ययनविषये एवं चिन्तापि दृश्यते। यथा **अनद्यतने लुट्**[7] इत्यत्र **"अयं कदा अध्येता यः एवं अभियुक्तः इति । अध्येता इव अयम् अध्येता नायम् अध्येष्यते"** इति । यः एवम् अभ्यासहीनः तस्य अध्ययनं कथं स्यादिति तदर्थः। तत्काले अध्ययनं भिक्षाटनादिकर्मणा सहैव आसीदिति गम्यते । **हेतुमति च**[8] सूत्रे **"भिक्षा वासयति, कारीषोग्निः अध्यापयति । भिक्षाश्चापि प्रचुरा व्यञ्जनवत्यः लभ्यमाना वा सम्प्रयोजयन्ति, तथा कारीषोग्निः निर्वाते एकान्ते सुप्रज्वलितः अध्ययनं प्रयोजयति"** इत्यनेन ज्ञायते । **"छात्राय रुचितं, छात्राय स्वदितम्"** इति **चतुर्थी तदर्थार्थबलिहितसुखरक्षितैः**[9] इति सूत्रे उदाहृतम् । तेन छात्रोपकारकाः विपुलरूपेण आसन्निति स्पष्टमवगम्यते । गुर्वनुज्ञातः गृहस्थो

---

6 अष्टाध्यायी – ४-१-६१

7 अष्टाध्यायी – ३-२-१५

8 अष्टाध्यायी – ३-२-२६

9 अष्टाध्यायी – २-२-३६

CC-0. Nepal Sanskrit Academy, Kathmandu Collection

भवेदिति **खट्वा क्षेपे**[10] इत्यत्र अवगम्यते । यतो हि तत्र **"क्षेप इत्युच्यते । कः क्षेपो नाम ? अधीत्य स्नात्वा गुरुभिरनुज्ञातेन खट्वा आरोढव्या । य इदानीमितो अन्यथा करोति स उच्यते खट्वारूढोऽयं जाल्मः नातिव्रतवान्"** इत्यनेन । गुर्वनुज्ञां विनैव यः अग्नीन् उपसङ्गृह्णाति स एव निन्द्यते खट्वारूढोऽयं जाल्मः इति । गुर्वनुज्ञां विना धर्म्योऽपि विवाहः निन्द्यते किमुत कन्यासंसर्गः छात्रस्य क्षमेत । अतः छात्रस्य सच्चारित्र्यं परिपाल्यते स्म समाजेन इति बुध्यते। छात्रेषु मन्दमध्यमोत्तमादिभेदाः आसन् । **"समानमीहमानानां चाधीयानानां च केचिदर्थैः युज्यन्ते अपरे न । तत्र किमस्माभिः कर्तुं शक्यम् । स्वाभाविकमेतत्"** इति **तद्धितश्चासर्वविभक्तिः**[11] इति सूत्रे भाष्ये उक्तम् । छात्राणां दण्डनम् आसीत्तस्मिन् काले इति गम्यते । **"एवं हि दृश्यते लोके । य उदात्ते कर्त्तव्ये अनुदात्तं करोति । खण्डिकोपाध्यायः तस्मै चपेटां ददाति ।"** इति वृद्धिरादैच्[12] इति सूत्रे दृश्यते भाष्यम् । कश्चित् खण्डिकोपाध्यायः, कश्चित् वर्गाध्यापकः, कश्चित् अध्यापकः इति तत्तद्विषयाध्यापकाः खण्डिकोपाध्यायपदोपादानेन बोध्यन्ते । शिष्योपकाराय क्वचित् तादृशं ताडनमपि गुणायैव भवतीति ।

सामृतैः पाणिभिर्घ्नन्ति गुरवो न विषोक्षितैः ।
लालनाश्रयिणो दोषास्ताडनाश्रयिणो गुणाः ॥

एवं च अल्पबुद्धीनां बालानाम् उत्पथप्रतिपन्नानां चपेटादिप्रकारेण स्वल्पेन दण्डेन दण्डयन्तः परमार्थतः उपकारमेव कुर्वन्तीति सुसंस्कृतैः आधुनिकैः अवधेयम् ।

स्त्रीणां सम्माननम्

स्त्रीसमुदाचारः कथमासीत्तदानीं सोऽप्यालोचनीयः । **एको गोत्रे**[13] इत्यत्र **"काशकृत्स्निना प्रोक्ता मीमांसा काशकृत्स्नी, तामधीते काशकृत्स्ना ब्राह्मणी"** इति, **अनुपसर्जनात्**[14] सूत्रे **"काशकृत्स्नमधीते काश्कृत्स्ना ब्राह्मणी अत्र प्राप्नोति । नैष दोषः । अध्येत्र्यामभिधेयायामण इकारेण भवितव्यम्"** इत्याद्युदाहरणैः स्त्रीणां शिक्षैव नासीत् ताश्च केवलं भोगसाधनीभूताः, अस्वतन्त्राः इत्याद्याक्षेपा निर्मूलाः इति अवगम्यते । तदा गृहिण्यो मीमांसादिशास्त्रेष्वपि ग्रन्थकर्त्र्य आसन्, न तु गृहं गृहमटमाना भृत्यकर्मण्येव नियुक्ताः आसन्निति स्पष्टमवगम्यते। तथाकथितबुद्धिजीविनः अन्यथैव भारतीयप्राचीनसंस्कृतिम् अवहेलयन्तः इदं सर्वं

---

10 अष्टाध्यायी – २-२-२९

11 अष्टाध्यायी – १-१-३८

12 अष्टाध्यायी – १-१-१

13 अष्टाध्यायी – ४-१-६३

14 अष्टाध्यायी – ४-१-१४

CC-0. Nepal Sanskrit Academy, Kathmandu Collection

प्रक्षालितनेत्राः पश्येयुः । अत एव **अणिञोरनार्षयोः**[15] इति सुत्रे **"औदमेध्यायाश्छात्राः"** इत्युदाहरणं संगच्छते । **विप्रतिषेधसूत्रे**[16] **"अस्ति प्राधान्ये वर्तते, तद्यथा परमियं ब्राह्मण्यस्मिन् कुटुम्बे प्रधानमिति गम्यते"** इत्युदाहरणेन कुटुम्बप्राधान्यमपि तासामासीदिति निर्विवादं वक्तुं शक्यते । **करणसंज्ञासूत्रे**[17] **"अभिरूपायोदकमानेयमनभिरूपाय कन्या देया इति । न चानभिरूपे प्रवृत्तिरस्ति तत्र अभिरूपतमाय इति गम्यते"** इति, **नमः स्वस्तीत्यादिसूत्रे**[18] **"अलमिति पर्याप्त्यर्थग्रहणं कर्त्तव्यम् । इह माभूत् अलं कुरुते कन्याम्"** इति चोदाहरणाभ्यां स्त्रीदाक्षिण्यं सुरूपमिव प्रतीयते ।

मापनादिव्यवहारः

मानविषये

ऊर्ध्वमानं किलोन्मानं परिमाणं तु सर्वतः ।
आयामस्तु प्रमाणं स्यात् संख्या बाह्या तु सर्वतः ॥
भेदमात्र ब्रवीत्येषा नैषा मानं कुतश्चन ॥

इति **आर्हादगोपुच्छेत्यादि**[19] सूत्रे अन्यत्र च विस्तरशः उक्तमिति प्रमाणप्रमेयादिकल्पना सूक्ष्मतरदर्शिनां भूषणभूतैवासीदिति गम्यते । तेन प्रामाणिक एव व्यवहारः सम्प्रवृत्त इति सिद्धम् ।

व्यवहारेऽपि कथं दक्षा आसन्निति लोकतो व्यवहारं दृष्ट्वा गुणस्य निर्ज्ञानम् । **"तद्यथा पटुरयं ब्राह्मण इत्युच्यते यो लघुनोपायेनार्थान् साधयति । पटुकल्पोऽयमित्युच्यते यो न तथा साधयति"** इति **ईषदसमाप्तौ कल्पप्देश्यदेशीयरः**[20] इति सूत्रे, **"असुररूपोऽयं, अप्ययं पलाण्डुना सुरां पिबेत् । चोररूपोऽयं, अप्ययमक्ष्णोरञ्जनं हरेत् । दस्युरूपोऽयम्, अप्ययं धावतो लोहितं पिबेत्"** इति **प्रशंसायां रूपप्**[21] इति सूत्रे च सम्प्रदर्शितव्यवहारेण ज्ञातुं शक्यम् । गुणिनां दुष्टानां च स्वभावपरिज्ञाने सुकुशलास्तदानींतना इति अनेन प्रघट्टकेन ज्ञायन्ते । व्यवहारपरिज्ञानेऽन्यान्यप्युदाहरणानि यथा **"तत्सामीप्यात्तु व्यञ्जनमपि तद्गुणमुपलभ्यते । यथा द्वयो रक्तयोर्वस्त्रयोर्मध्ये शुक्लं वस्त्रं तद्गुणमुपलभ्यते । बदरपिटके रिक्तको**

15 अष्टाध्यायी – ४-१-७८
16 अष्टाध्यायी – १-४-२ विप्रतिषेधे परं कार्यम्
17 अष्टाध्यायी – १-४-४२ साधकतमं करणम् ।
18 अष्टाध्यायी – २-३-१६ नमःस्वस्तिस्वाहास्वधालंवषड्योगाच्च ।
19 अष्टाध्यायी – ५-१- १९
20 अष्टाध्यायी – ५-३- ६७
21 अष्टाध्यायी – ५-३- ६६

CC-0. Nepal Sanskrit Academy, Kathmandu Collection

लोहकंसस्तद्गुण उपलभ्यते" इति नीचैरनुदात्तः[22] इति सूत्रे, **"कटं करोति भीष्ममुदारं शोभनं दर्शनीयम्"** इति अनभिहिते[23] इति सूत्रे प्रतिपादितानि समाजस्य याथार्थ्यं गमयन्ति। बदरपिटके – बदरपेटिकायां – प्रेषणार्थं कृतायां रिक्तकः घर्षणोज्ज्वलीकृतः लोहकंसः – आदर्शस्तद्गुण उपलभ्यते इति तदर्थः। पेटिकाश्चारुरूपाः कृत्वा आदर्शसंयुताश्च विधाय तासु विक्रियार्थं प्रेषणीयानि बदरादीनि फलानि निधाय ताः पेटिकाः बहिः प्रस्थाप्यन्ते इत्यनेन व्यवहारकरणे कौशल्यमेषामुपजनयन्ति ।

इह उदाहरणरूपेण केचन विषयाः प्रस्तुताः । प्रायः विषयेस्मिन् ग्रन्थ एव आरचनीयः । तदा साकल्येन भाष्योक्तोदाहरणानि संगृह्य विवेचनं कर्तुं शक्यते । तत्कार्यं कर्तव्यमस्माकम् इति शम् ।

❀ ❀ ❀

22 अष्टाध्यायी – १-२-३०

CC-0. Nepal Sanskrit Academy, Kathmandu Collection

23 अष्टाध्यायी – २-३-१

ಭಾರತೀಯ ಸಾಂಸ್ಕೃತಿಕ ಲೋಕ ಮತ್ತು ಪಾರಂಪರಿಕ ವಿದ್ಯೆ

✍ ಡಾ. ನಟೇಶ ಎಲ್.
ಅಸಿಸ್ಟೆಂಟ್ ಪ್ರೊಫೆಸರ್, ಸಂಸ್ಕೃತ ವಿಭಾಗ
ಜೈನ್ (ಡೀಮ್ಡ್-ಟು-ಬಿ ವಿಶ್ವವಿದ್ಯಾಲಯ) ಬೆಂಗಳೂರು

ಭಾರತೀಯರಾದ ನಾವೆಲ್ಲರೂ ಈ ನಾಡಿನ ಸಂಸ್ಕೃತಿಯ ಭಾಗವಷ್ಟೇ ಆಗಿರದೆ ಈ ಭಾರತೀಯ ಸಂಸ್ಕೃತಿಯ ವಾಹಕರೂ ಆಗಿದ್ದೇವೆ. ಹಾಗಾಗಿ ನಮ್ಮ ಸಂಸ್ಕೃತಿಯ ಕುರಿತು ತಿಳುವಳಿಕೆಯನ್ನು ಮೂಡಿಸಿಕೊಳ್ಳುವುದು ನಮ್ಮೆಲ್ಲರ ಗುರುತರ ಕರ್ತವ್ಯ. ಈ ದೃಷ್ಟಿಯಿಂದ ಮೊದಲಿಗೆ ಸಂಸ್ಕೃತಿ ಶಬ್ದದ ಅರ್ಥವನ್ನು ಅವಲೋಕಿಸೋಣ. ಕೃತಿ ಎಂದರೆ ಗ್ರಂಥ ಅಥವಾ ಸಾಹಿತ್ಯಿಕ ರಚನೆ. ಇದು ಪ್ರಸಿದ್ಧವಾದ ಅರ್ಥ. ಆದರೆ ಸಂಸ್ಕೃತದ ಹಿನ್ನೆಲೆಯಲ್ಲಿ ಅರ್ಥವನ್ನು ವಿಶ್ಲೇಷಿಸಿದರೆ 'ಮಾಡಲ್ಪಟ್ಟಿದ್ದು' ಎಂಬರ್ಥ ದೊರೆಯುತ್ತದೆ. ಮನುಷ್ಯರಾದ ನಾವು ಏನೆಲ್ಲ ಮಾಡುತ್ತೇವೆಯೋ ಅದೆಲ್ಲವನ್ನು 'ಕೃತಿ' ಎಂಬ ಶಬ್ದದಿಂದ ಗುರುತಿಸಬಹುದಾಗಿದೆ. ಕೆಲವೊಂದಷ್ಟು ಸಂಗತಿಗಳನ್ನು ನಾವು ಮಾಡುವಾಗ ನಮ್ಮದೇ ಆಗಿರುವ (ನಾವು ಕಲಿತಿರುವ) ಒಂದು ರೀತಿಯನ್ನು ಅನುಸರಿಸುತ್ತೇವೆ. ಅದೇ ಸರಿಯಾದ ರೀತಿ ಎಂದೂ ಕೂಡ ಭಾವಿಸುತ್ತೇವೆ. ನಾವು ಯಾವುದನ್ನು 'ಇದನ್ನು ಈ ರೀತಿಯಲ್ಲಿ ಮಾಡುವುದು ಉತ್ತಮ' ಎಂದು ಭಾವಿಸುತ್ತೇವೆಯೋ ಅದನ್ನೇ ನಾವು ಸಂಸ್ಕೃತಿ ಎಂದು ಕರೆಯುತ್ತೇವೆ. ಭಾರತೀಯರು ಅನೇಕ ಸಂಗತಿಗಳನ್ನು ಕಾರ್ಯರೂಪಕ್ಕೆ ಇಳಿಸುವಾಗ ಒಂದು ವಿಶಿಷ್ಟವಾದ ಶೈಲಿಯನ್ನು ಅನುಸರಿಸುತ್ತಾರೆ. ಅದನ್ನೇ ಭಾರತೀಯ ಸಂಸ್ಕೃತಿಯೆಂದು ಕರೆಯುತ್ತೇವೆ. ಮೇಲ್ನೋಟಕ್ಕೆ ಈ ರೀತಿಯಾಗಿ ಸಂಸ್ಕೃತಿಯ ಕುರಿತು ಅರ್ಥಮಾಡಿಕೊಳ್ಳಬಹುದು.

ಭಾರತ ದೇಶದಲ್ಲಿರುವ ಸಂಸ್ಕೃತಿಯು ಯಾವಾಗ ಆರಂಭವಾಯಿತು? ನಮಗದು ತಿಳಿದಿಲ್ಲ. ಆದರೆ ಇತಿಹಾಸಕಾರರು ಪ್ರಪಂಚದ ಇತಿಹಾಸವನ್ನು ಆರಂಭ ಮಾಡುವುದೇ ನಮ್ಮ ಭಾರತೀಯ ಸಂಸ್ಕೃತಿಯಿಂದ. ಆದ್ದರಿಂದ ನಮ್ಮದು ಅತಿ ಪ್ರಾಚೀನ ಸಂಸ್ಕೃತಿಯಾಗಿದೆ. ಆಚಾರ-ವಿಚಾರಗಳು, ನಡವಳಿಕೆಗಳು, ಪದ್ಧತಿಗಳು ಇತ್ಯಾದಿ ನಮ್ಮ ನಿತ್ಯಜೀವನದಲ್ಲಿ ಕಾಣುವ, ಕೇಳುವ ಮತ್ತು ಅನುಭವಿಸುವ ಅನೇಕ ಸಂಗತಿಗಳು ನಮ್ಮ ಸಂಸ್ಕೃತಿಯನ್ನು ಸೂಚಿಸುತ್ತವೆ. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ರೂಪುಗೊಂಡಿರುವ ಸಂಗೀತ, ನೃತ್ಯ, ವಾದ್ಯ ಮತ್ತು ಕಲೆಯ ನಾನಾ ಪ್ರಕಾರಗಳು ನಮ್ಮ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತವೆ. ನಮ್ಮ ಪೂರ್ವಜರಿಂದ

CC-0. Nepal Sanskrit Academy, Kathmandu Collection

ರಚಿತವಾದ ಸಾಹಿತ್ಯ ಅಥವಾ ಗ್ರಂಥಗಳು ನಮ್ಮ ಸಂಸ್ಕೃತಿಯನ್ನು ತಿಳಿಸುತ್ತವೆ. ಹೀಗೆ ಸಂಸ್ಕೃತಿಯನ್ನು ತಿಳಿಯಲು ಯಾವುದೋ ಒಂದನ್ನು ಗಮನಿಸಿದರೆ ಸಾಕಾಗುವುದಿಲ್ಲ. ಹಿಂದೆ ಹೇಳಿದ ಎಲ್ಲದರಲ್ಲಿ ಸಂಸ್ಕೃತಿಯು ಹಾಸುಹೊಕ್ಕಾಗಿದೆ. ಆದ್ದರಿಂದ ಎಲ್ಲವನ್ನು ಅವಲೋಕಿಸಿದಾಗಲೇ ನಮ್ಮ ಸಂಸ್ಕೃತಿಯು ಯಾವ ಸ್ವರೂಪದ್ದು ಎಂದು ಅಂದಾಜು ಮಾಡಬಹುದು. ಸಂಸ್ಕೃತಿಯ ವಾಸ್ತವದ ಅರಿವಾಗಬೇಕಾದರೆ ಇತರ ಸಂಸ್ಕೃತಿಗಳಿಗಿಂತ ನಮ್ಮ ಸಂಸ್ಕೃತಿಯು ಹೇಗೆ ಭಿನ್ನವಾಗಿದೆ ಎಂದು ತಿಳಿಯುವುದೂ ಅನಿವಾರ್ಯ. ಇಲ್ಲದೇ ಹೋದರೆ ನಮ್ಮದು ಏನು ಎಂಬುದು ಗೊತ್ತಾಗುವುದಿಲ್ಲ. ಹಾಗಾಗಿ ಇತರ ಸಂಸ್ಕೃತಿಗಳ ಅಧ್ಯಯನವೂ ಪ್ರಧಾನವೇ ಹೌದು. ಒಟ್ಟಿನಲ್ಲಿ ಗಂಭೀರ ಅಧ್ಯಯನವನ್ನು ಈ ತಿಳುವಳಿಕೆ ಬೇಡುತ್ತದೆ. ಒಟ್ಟಿನಲ್ಲಿ ಭಾರತೀಯ ಸಂಸ್ಕೃತಿಯನ್ನು ತಿಳಿಯುವುದು ಎಂದರೆ ಭಾರತೀಯ ಪದ್ಧತಿಯಂತೆ ಭಾರತೀಯಗ್ರಂಥಗಳನ್ನು ಅಭ್ಯಸಿಸುವುದೇ ಆಗಿದೆ.

ಭಾರತೀಯರು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಮಹತ್ತ್ವವನ್ನು ಕೊಟ್ಟಿದ್ದರು. ಏಕೆಂದರೆ ಮನುಷ್ಯನು ಜಗತ್ತಿನಲ್ಲಿ ಯಾವ ರೀತಿಯಲ್ಲಿ ಬದುಕಬೇಕು ಎಂದು ತಿಳಿಸಿಕೊಡುವುದೇ ವಿದ್ಯೆ. ಮನುಷ್ಯನಿಗೆ ಜ್ಞಾನ ಯಾಕೆ ಮುಖ್ಯ ಎಂಬುದನ್ನು ಈ ಶ್ಲೋಕದಲ್ಲಿ ಕಾಣಬಹುದು –

ಆಹಾರನಿದ್ರಾಭಯಮೈಥುನಾನಿ
ಸಾಮಾನ್ಯಮೇತದ್ ಪಶುಭಿರ್ನರಾಣಾಮ್ ।
ಜ್ಞಾನಂ ಹಿ ತೇಷಾಂ ಹ್ಯಧಿಕೋ ವಿಶೇಷಂ
ಜ್ಞಾನೇನ ಹೀನಾಃ ಪಶುಭಿಃ ಸಮಾನಾಃ ॥

ಆಹಾರ, ನಿದ್ರೆ, ಭಯ, ಮೈಥುನಗಳು ಮನುಷ್ಯರಿಗೂ ಇತರ ಪ್ರಾಣಿಗಳಿಗೂ ಸಮಾನವಾದರೂ ಮನುಷ್ಯನು ಮಾತ್ರ 'ಜ್ಞಾನ' ವನ್ನು ಪಡೆಯುವ ಸಾಮರ್ಥ್ಯವನ್ನು ಹೊಂದಿದ್ದಾನೆ. ಹಾಗಾಗಿ ಮನುಷ್ಯ ಇತರ ಪ್ರಾಣಿಗಳಿಗಿಂತ ಭಿನ್ನನಾಗಿದ್ದಾನೆ. ಜ್ಞಾನವನ್ನು ಹೊಂದದ ಮನುಷ್ಯ ಪ್ರಾಣಿಗಳ ಸಮಾನನಾಗಿರುತ್ತಾನೆ.

ಜಗತ್ತಿನಲ್ಲಿರುವ ಮನುಷ್ಯರ ಬಗ್ಗೆ ಭಾರತೀಯರು ಈ ರೀತಿ ಮಾತನಾಡಿದ್ದಾರೆ. ಮನುಷ್ಯ ಸಮಾಜದಲ್ಲಿರುವ ಇತರ ಮನುಷ್ಯರನ್ನು ನೋಡಿ ಬದುಕುವ ರೀತಿಯನ್ನು ಕಲಿಯುತ್ತಾನೆ. ಅನೇಕ ಸಂಗತಿಗಳನ್ನು ಕಲಿಯುತ್ತಿರುವಾಗ ಮನುಷ್ಯನಿಗೆ ಹಲವಾರು ಪ್ರಶ್ನೆಗಳು ಮೂಡುತ್ತವೆ. ಆ ಪ್ರಶ್ನೆಗಳಿಗೆ ಉತ್ತರವನ್ನು ಹುಡುಕುವ ಸಲುವಾಗಿ ಮಾಡುವ ಪ್ರಯತ್ನವೇ ಜಿಜ್ಞಾಸೆಯಾಗಿದೆ. ಈ ಜಿಜ್ಞಾಸೆಯಲ್ಲಿ ತೊಡಗಿರುವಾಗ ಮನುಷ್ಯ, ಕಣ್ಣಿಗೆ ಕಾಣುವ ಜಗತ್ತು ಮತ್ತು ಇವೆರಡರ ನಡುವಿನ ಸಂಬಂಧಗಳ ಕುರಿತು ಆಲೋಚಿಸಿದಾಗ

CC-0. Nepal Sanskrit Academy, Kathmandu Collection

ಜ್ಞಾನಪ್ರಾಪ್ತಿಯಾಗುವ ಎಲ್ಲಾ ಸಾಧ್ಯತೆಯು ಉಂಟಾಗುವುದು. ಹಾಗಾಗಿ ಮನುಷ್ಯನು ಜ್ಞಾನಪ್ರಾಪ್ತಿಗಾಗಿ ಪ್ರಯತ್ನಿಸಬಹುದು.

ಜ್ಞಾನಪ್ರಾಪ್ತಿಗಾಗಿ ನಮ್ಮ ಪೂರ್ವಜರು ಯಾವ ರೀತಿಯಲ್ಲಿ ಪ್ರಯತ್ನ ಮಾಡುತ್ತಿದ್ದರು ಎಂಬುದನ್ನು ತಿಳಿಯಲು ನಾವು ಭಾರತೀಯ ಗುರುಕುಲ ಶಿಕ್ಷಣ ಪದ್ಧತಿಯನ್ನು ಅವಲೋಕಿಸಲೇಬೇಕು. ಇಲ್ಲಿ ವಿದ್ಯೆಯನ್ನು ಕಲಿಯಬೇಕೆಂದವನು ಗುರುವನ್ನು ಆಶ್ರಯಿಸುತ್ತಾನೆ. ಇದನ್ನು ಉಪನಿಷತ್ತಿನಲ್ಲಿ ಹೀಗೆ ಹೇಳಿದ್ದಾರೆ.

ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ । (ಮುಂಡಕೋಪನಿಷತ್)

ಅಂದರೆ ವಿದ್ಯಾರ್ಥಿಯು ವಿದ್ಯೆಯನ್ನು ಪಡೆಯಬೇಕೆಂದರೆ ಪಂಡಿತೋತ್ತಮನಾದ ಬ್ರಹ್ಮನಿಷ್ಠನಾದ ಗುರುವಿನ ಬಳಿ ವಿನೀತನಾಗಿ ಹೋಗಬೇಕು. (ಇಲ್ಲಿ ಬ್ರಹ್ಮವಿದ್ಯೆಯ ಸಂದರ್ಭವಾದ್ದರಿಂದ ಅದರ ಬಗ್ಗೆ ಇದೆ. ಇತರ ವಿದ್ಯೆಯ ಸಂದರ್ಭದಲ್ಲಿಯೂ ಹೀಗೆಯೇ ಎಂದು ತಿಳಿಯಬೇಕು). ಈ ರೀತಿಯಾಗಿ ವಿದ್ಯಾರ್ಥಿಯು ಗುರುವಿನ ಬಳಿ ಹೋಗಿ ಜಿಜ್ಞಾಸೆಯಲ್ಲಿ ತೊಡಗಿಕೊಳ್ಳಬೇಕು. ವಿದ್ಯೆಯಲ್ಲಿ ತೊಡಗಿಕೊಳ್ಳುವುದು ಎಂದಾಗ ಈ ಪ್ರಶ್ನೆ ಬಹಳ ಮುಖ್ಯ.

ವಿದ್ಯೆ ಎಂದರೇನು?

ಜ್ಞಾನ ಎಂಬ ಅರ್ಥದಲ್ಲಿರುವ ವಿದ್ ಧಾತುವಿನಿಂದ ಉತ್ಪತ್ತಿಯಾದ ಶಬ್ದವೇ ವಿದ್ಯೆ. ಆದ್ದರಿಂದ ವಿದ್ಯೆಯೆಂದರೆ 'ಜ್ಞಾನ' ಎಂದರ್ಥ ಅಥವಾ ಯಾವುದರ ಮೂಲಕ ಜ್ಞಾನಪ್ರಾಪ್ತಿಯಾಗುವುದೋ ಅದು ವಿದ್ಯೆ. ಹಾಗಾದರೆ ಜ್ಞಾನವೆಂದರೇನು? ಎಂಬ ಪ್ರಶ್ನೆಯನ್ನಿರಿಸಿಕೊಂಡು ಅದಕ್ಕಾಗಿ ಒಂದು ವಾಕ್ಯದ ಅಥವಾ ಹಲವಾರು ವಾಕ್ಯಗಳ ವಿವರಣೆಯನ್ನು ಒದಗಿಸಿದರೆ ಅದು ಜ್ಞಾನದ ಬಗ್ಗೆ ಹೇಳಿದಂತಾಗುವುದೇ ಹೊರತು ಜ್ಞಾನ ಎಂದರೇನು ಎಂಬ ಪ್ರಶ್ನೆಗೆ ಉತ್ತರವಾಗುವುದಿಲ್ಲ. ಏಕೆಂದರೆ ಜ್ಞಾನವು ವಾಕ್ಯಗಳಲ್ಲಿ ಇಲ್ಲ. ಜ್ಞಾನ ಎಂದರೇನು ಎನ್ನುವುದು ಜ್ಞಾನದ ಪ್ರಶ್ನೆಯೆ ಆಗಿದೆ. ಅಂದರೆ ಅದನ್ನು ಜ್ಞಾನವೇ ಉತ್ತರಿಸಬೇಕು. ಹಾಗಾಗಿ ನಾವು ಜ್ಞಾನದ ಬಗ್ಗೆ ಚಿಂತನೆ ಮಾಡೋಣ.

ಮನುಷ್ಯರಾದ ನಾವು ನಮ್ಮ ಸುತ್ತ ಇರುವ ಪ್ರಪಂಚವನ್ನು ಅವಲೋಕಿಸಿ ಅದರ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳಲು ಸದಾ ಪ್ರಯತ್ನಿಸುತ್ತಿರುತ್ತೇವೆ. ನಮಗೆ ಗೋಚರವಾಗುವ ಈ ಪ್ರಪಂಚವನ್ನು ಅನೇಕ ವಿಧವಾಗಿ ವಿಂಗಡಿಸಿ ಅದನ್ನು ಅರ್ಥಮಾಡಿಕೊಳ್ಳುತ್ತಿರುತ್ತೇವೆ. ಉದಾಹರಣೆಗೆ: ಚಲಿಸುವ ವಸ್ತುಗಳು – ಚಲನೆಯಿಲ್ಲದ ವಸ್ತುಗಳು, ಜೀವಿಗಳು – ನಿರ್ಜೀವ ಪದಾರ್ಥಗಳು ಇತ್ಯಾದಿ. ನಾವು ಈ ರೀತಿಯ ವಿಭಾಗವನ್ನು ಮಾತ್ರ ಮಾಡಿಲ್ಲ ಅದರಿಂದ ತುಂಬಾ

CC-0. Nepal Sanskrit Academy, Kathmandu Collection

ಮುಂದೆ ಹೋಗಿದ್ದೇವೆ. ಅಂದರೆ ಒಂದು ರೀತಿಯಲ್ಲಿರುವ ಪ್ರಪಂಚವನ್ನು ನಮಗೆ ಬೇಕಾದ ಹಾಗೆ ಬದಲಾಯಿಸಿಕೊಳ್ಳುತ್ತಿರುತ್ತೇವೆ. ಎಲ್ಲಿಯೋ ಹರಿಯುತ್ತಿರುವ ನೀರನ್ನು ನಮ್ಮ ಅವಶ್ಯಕತೆಗೆ ತಕ್ಕಂತೆ ಪಂಪನ್ನು, ಪೈಪ್ ಗಳನ್ನು ಉಪಯೋಗಿಸಿ ಇನ್ನೊಂದೆಡೆ ಹರಿಯುವಂತೆ ಮಾಡಿದ್ದೇವೆ. ಈ ರೀತಿಯ ಬದಲಾವಣೆಯನ್ನು ಬೇಕಾಬಿಟ್ಟಿ ಮಾಡುವುದಿಲ್ಲ. ನಮ್ಮಲ್ಲಿರುವ ವಿದ್ಯೆಯನ್ನು ಬಳಸಿ ಅಥವಾ ಜ್ಞಾನದ ಆಧಾರದ ಮೇಲೆ ನಾವು ಅನೇಕ ರೀತಿಯಲ್ಲಿ ನಮ್ಮ ಪ್ರಪಂಚವನ್ನು ಬದಲಾಯಿಸಿಕೊಳ್ಳುತ್ತಿರುತ್ತೇವೆ. ಆದ್ದರಿಂದ ಹೀಗೆ ಹೇಳಬಹುದು. ವಿದ್ಯೆಯಿರುವುದರಿಂದಲೇ ನಮಗೆ ಅನುಕೂಲಕರವಾದ ರೀತಿಯಲ್ಲಿ ನಮ್ಮ ಪ್ರಪಂಚವನ್ನು ಬದಲಾಯಿಸಲು ಸಾಧ್ಯವಾಗಿದೆ ಎಂದು. ನಮಗೆ ಬೇಕಾದ ಹಾಗೆ ಪ್ರಪಂಚವನ್ನು ಬದಲಾಯಿಸಿದ ಮೇಲೆ ಉಂಟಾಗುವ ಪರಿಣಾಮಗಳನ್ನು ಆಧರಿಸಿ ನಮ್ಮ ವಿದ್ಯೆಯು ಬೆಳೆಯುತ್ತದೆ. ಅಂದರೆ ಸ್ಥೂಲಪದಾರ್ಥಗಳಲ್ಲಿದ್ದ ನಮ್ಮ ಅರಿವು ಸೂಕ್ಷ್ಮಪದಾರ್ಥಗಳತ್ತ ಹರಿಯುತ್ತಾ ಬೆಳವಣಿಗೆಯನ್ನು ಪಡೆಯುತ್ತದೆ. ಆದ್ದರಿಂದಲೇ ವಿದ್ಯೆಗೆ ಕೊನೆ ಎಂಬುದು ಇಲ್ಲ. ಇವಿಷ್ಟು ವಿದ್ಯೆಯ ಬಗ್ಗೆ ಹೇಳಿದ್ದಾಯಿತು. ಇನ್ನು ನಾವು ಯಾವ ಯಾವ ರೀತಿಯಲ್ಲಿ ವಿದ್ಯೆ ಶಬ್ದವನ್ನು ಬಳಸುತ್ತೇವೆ ಎಂಬುದನ್ನು ನೋಡೋಣ. ವಿದ್ಯಾಭ್ಯಾಸ, ವಿದ್ಯಾದಾನ, ವಿದ್ಯಾರ್ಥಿ, ವಿದ್ಯಾರ್ಜನೆ, ವಿದ್ಯಾಲಯ, ವಿದ್ಯಾವಂತ, ವಿದ್ಯಾಧಿದೇವತೆ....... ಇತ್ಯಾದಿ ಪದಗಳಲ್ಲಿ ತಿಳಿವಳಿಕೆ ಅಥವಾ ಜ್ಞಾನ ಎಂಬರ್ಥದಲ್ಲಿ ವಿದ್ಯೆ ಶಬ್ದ ಬಳಕೆಯಾಗಿದೆ. ಯುದ್ಧವಿದ್ಯೆ, ಧನುರ್ವಿದ್ಯೆ ಇತ್ಯಾದಿ ಶಬ್ದಗಳಲ್ಲಿ ಕೌಶಲ ಎಂಬ ಅರ್ಥದಲ್ಲಿ ವಿದ್ಯೆ ಶಬ್ದದ ಬಳಕೆಯಾಗಿದೆ ಅಂತ ಅನಿಸುತ್ತದೆ. ಒಟ್ಟಿನಲ್ಲಿ ಜ್ಞಾನದಾಯಕವಾಗಿರುವುದನ್ನು ವಿದ್ಯೆ ಎಂದು ಹೇಳಬಹುದು.

ಎಷ್ಟು ವಿದ್ಯೆಗಳಿವೆ?

ವಿದ್ಯಾವಿಭಾಗಕ್ಕೆ ಸಂಬಂಧಿಸಿದಂತೆ ಬಹಳ ಮುಖ್ಯವಾದ ವಿಚಾರ ಉಪನಿಷತ್ತಿನಲ್ಲಿ ಇದೆ.

ದ್ವೇ ವಿದ್ಯೇ ವೇದಿತವ್ಯೇ ಪರಾ ಚೈವಾಪರಾ ಚ ॥ 4 ॥

ಈ ಮುಂಡಕೋಪನಿಷತ್ತಿನ ವಾಕ್ಯದಂತೆ ವಿದ್ಯೆಯಲ್ಲಿ ಎರಡು ವಿಧ.

1) ಪರಾ ವಿದ್ಯೆ 2) ಅಪರಾ ವಿದ್ಯೆ

ಪರಾ ಮತ್ತು ಅಪರಾ ವಿದ್ಯೆಗಳು ಯಾವುವು ಎಂದು ಮುಂದೆ ತಿಳಿಸಿದೆ.

ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋ ಅಥರ್ವವೇದಃ ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೌತಿಷಮಿತಿ । ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ॥ 5 ॥

CC-0. Nepal Sanskrit Academy, Kathmandu Collection

ಋಗ್ವೇದಾದಿಗಳು 10 ಅಪರವಿದ್ಯೆಗಳು, ಯಾವುದರಿಂದ ತದಕ್ಷರವು (ಕ್ಷಯರಹಿತವಾದ ತತ್) ತಿಳಿಯುವುದೋ ಅದು ಪರಾ ವಿದ್ಯೆ. ಅಪರವಿದ್ಯೆಗಳನ್ನು ಈ ಉಪನಿಷತ್ತಿನ ವಾಕ್ಯದಲ್ಲಿ ಋಗ್ವೇದಾದಿಗಳು ಒಟ್ಟು ಹತ್ತು ಎಂದಿದೆ.

ಆದರೆ ಕಾಮಂದಕನು ಹೀಗೆ ಹೇಳುತ್ತಾನೆ –

ಅಂಗಾನಿ ವೇದಾಶ್ಚತ್ವಾರೋ ಮೀಮಾಂಸಾ ನ್ಯಾಯವಿಸ್ತರಃ ।
ಪುರಾಣಂ ಧರ್ಮಶಾಸ್ತ್ರಂ ಚ ತ್ರಯೀದಂ ಸರ್ವಮುಚ್ಯತೇ ॥

ಶಿಕ್ಷಾ ವ್ಯಾಕರಣ, ಛಂದಃ, ನಿರುಕ್ತ, ಜ್ಯೋತಿಷ, ಕಲ್ಪಗಳೆಂಬ ಆರು ವೇದಾಂಗಗಳು ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ ಎಂಬ ನಾಲ್ಕು ವೇದಗಳು ಮೀಮಾಂಸಾ, ನ್ಯಾಯ, ಪುರಾಣ, ಧರ್ಮಶಾಸ್ತ್ರ ಹೀಗೆ ಇವೆಲ್ಲವನ್ನೂ ಸೇರಿಸಿ ತ್ರಯೀ ಎಂದು ಕರೆದಿದ್ದಾನೆ. ಶುಕ್ರಾಚಾರ್ಯರ ಶಿಷ್ಯರಾದ ಔಶನಸರ ಅಭಿಪ್ರಾಯದಲ್ಲಿ ಇರುವುದೊಂದೇ ವಿದ್ಯೆ. ಅದೇ ದಂಡನೀತಿ ವಿದ್ಯೆ. ಏಕೆಂದರೆ ಅವರ ಅಭಿಪ್ರಾಯದಲ್ಲಿ ಉಳಿದೆಲ್ಲ ವಿದ್ಯೆಗಳು ದಂಡನೀತಿಯನ್ನು ಆಶ್ರಯಿಸಿ ಇವೆ. ಬೃಹಸ್ಪತಿ ಅಚಾರ್ಯರ ಶಿಷ್ಯರು ವಾರ್ತಾ ದಂಡನೀತಿಗಳೆಂಬ ಎರಡು ವಿದ್ಯೆಗಳಿವೆ ಎಂದು ತಿಳಿಸಿದ್ದಾರೆ. ಮನುವಿನ ಶಿಷ್ಯರು ತ್ರಯೀ, ವಾರ್ತಾ, ದಂಡನೀತಿಗಳೆಂಬ ಮೂರು ವಿದ್ಯೆಗಳಿವೆ ಎಂದು ತಿಳಿಸಿದ್ದಾರೆ. ಕೌಟಿಲ್ಯನು ಆನ್ವೀಕ್ಷಿಕೀ, ತ್ರಯೀ, ವಾರ್ತಾ, ದಂಡನೀತಿಗಳೆಂದು ಒಟ್ಟು ನಾಲ್ಕು ವಿದ್ಯೆಗಳಿವೆ ಎಂದು ವಿದ್ಯೆಯನ್ನು ವಿಭಾಗಿಸುತ್ತಾನೆ.

ಹೀಗೆ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ವಿದ್ಯಾವಿಭಾಗಗಳನ್ನು ಮಾಡಿದ್ದಾರೆ. ಆಯಾ ಕಾಲಕ್ಕೆ ತಕ್ಕಂತೆ ಉಪಲಬ್ಧವಿರುವ ವಿದ್ಯೆಗಳನ್ನು ಒಂದು ಕ್ರಮದಲ್ಲಿ ಹೇಳುವ ಸಲುವಾಗಿ ಈ ರೀತಿಯಾಗಿ ವಿಭಾಗಗಳನ್ನು ಮಾಡಿರಬಹುದು. ಈ ವಿಷಯದಲ್ಲಿ ಯಾಕೆ ಒಬ್ಬೊಬ್ಬರು ಒಂದೊಂದು ರೀತಿ ಮಾತನಾಡಿದ್ದಾರೆ ಎಂಬುದು ಸಂಶೋಧನೀಯ ವಿಷಯ.

ಪರಾ ಮತ್ತು ಅಪರಾ ವಿದ್ಯೆಗಳು ಎಂಬ ಉಪನಿಷತ್ತಿನ ವಿಭಾಗವನ್ನು ಮುಂದಿಟ್ಟುಕೊಂಡು ಕೆಲವು ಪ್ರಶ್ನೆಗಳನ್ನು ಕೈಗೆತ್ತಿಕೊಳ್ಳೋಣ.

ಪರಾ ವಿದ್ಯೆ ಎಂದರೇನು? ಅಪರಾವಿದ್ಯೆಗಿಂತ ಹೇಗೆ ಈ ಪರಾ ವಿದ್ಯೆ ಭಿನ್ನವಾಗಿದೆ? ಈ ಪರಾ ವಿದ್ಯೆಯನ್ನು ಪಡೆಯುವುದು ಹೇಗೆ?

ಈ ಪರಾ ವಿದ್ಯೆಯಿಂದ ತಿಳಿಯುವ ಅಕ್ಷರದ ಬಗ್ಗೆ ವಿವರಿಸುತ್ತ ಉಪನಿಷತ್ತಿನಲ್ಲಿ ಈ ಕೆಳಗಿನ ವಾಕ್ಯವಿದೆ –

ಯತ್ತದದೃಶ್ಯಮಗ್ರಾಹ್ಯಮಗೋತ್ರಮವರ್ಣಮಚಕ್ಷುಃಶ್ರೋತ್ರಂ ತದಪಾಣಿಪಾದಮ್।

CC-0. Nepal Sanskrit Academy, Kathmandu Collection

ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂ ತದವ್ಯಯಂ ಯದ್ಭೂತಯೋನಿಂ ಪರಿಪಶ್ಯಂತಿ ಧೀರಾಃ ॥ 6 ॥

ಈ ಅಕ್ಷರವು ಅದೃಶ್ಯವಾಗಿದೆ. ಪ್ರಪಂಚದಲ್ಲಿರುವ ಅನೇಕ ವಸ್ತುಗಳು ಕಣ್ಣಿಗೆ ಕಾಣಿಸುವ ವಸ್ತುಗಳಾಗಿವೆ. ಉದಾಹರಣೆಗೆ ಪುಸ್ತಕ, ಲೇಖನೀ ಇತ್ಯಾದಿ. ಅವುಗಳನ್ನು ದೃಶ್ಯವಸ್ತುಗಳು ಎನ್ನುತ್ತೇವೆ. ಈ ಅಕ್ಷರವು ಅಂತಹ ದೃಶ್ಯವಸ್ತುಗಳ ಗುಂಪಿಗೆ ಸೇರದೇ ಇರುವುದರಿಂದ ಅದೃಶ್ಯವಾಗಿದೆ. ಕಣ್ಣಿಗೆ ಕಾಣಿಸದಿರುವ ವಸ್ತುಗಳೆಲ್ಲವನ್ನು ಇಲ್ಲ ಎನ್ನಲು ಸಾಧ್ಯವಿಲ್ಲ. ಉದಾಹರಣೆಗೆ ಗಾಳಿ. ಗಾಳಿಯು ಅದೃಶ್ಯಪದಾರ್ಥವಾದರೂ ಅದು ಗ್ರಾಹ್ಯವಸ್ತುವಾಗಿದೆ. ಅಂದರೆ ಗಾಳಿಗೆ ಗ್ರಾಹ್ಯವೆನ್ನುವ ಗುಣವಿದೆ. ಅಕ್ಷರವು ಈ ಗ್ರಾಹ್ಯಪದಾರ್ಥಗಳ ಗುಂಪಿಗೆ ಸೇರದೇ ಇರುವುದರಿಂದ ಅಗ್ರಾಹ್ಯವಾಗಿದೆ. ಈ ಅಕ್ಷರವು ಅಗೋತ್ರ ಮತ್ತು ಅವರ್ಣ. ಗೋತ್ರವೆಂದರೆ ಕುಲ ಅಥವಾ ವಂಶ. ವರ್ಣ ಎಂದರೆ ಬಣ್ಣ ಅಥವಾ ಬ್ರಾಹ್ಮಣಾದಿಗಳು ಅಕ್ಷರವು ಇದ್ಯಾವುದೂ ಅಲ್ಲವಾದ್ದರಿಂದ ಅದು ಅಗೋತ್ರ, ಅವರ್ಣವಾಗಿದೆ. ಈ ಅಕ್ಷರವು ಕಣ್ಣು, ಕಿವಿ, ಕೈ, ಕಾಲುಗಳಲ್ಲವಾದ್ದರಿಂದ **ಅಚಕ್ಷುಃ ಅಶ್ರೋತ್ರಂ ಅಪಾಣಿಪಾದಂ.** ಈ ಅಕ್ಷರವು ನಿತ್ಯ, ವಿಭು (ಎಲ್ಲೆಡೆ ಸಿಗುವುದು) ಸರ್ವಗತ(ಎಲ್ಲದರಲ್ಲಿಯೂ ಸೇರಿರುವುದು)ವಾಗಿದೆ. ಅಂದರೆ ಇದು ಒಂದು ದೊಡ್ಡ ವಸ್ತುವಾಗಿದೆ ಅಂತ ಅನ್ನಿಸಬಹುದು ಈ ಅಕ್ಷರವು ಅಂತಹ ದೊಡ್ಡವಸ್ತುವಲ್ಲ. ಹಾಗಾಗಿ ಅತ್ಯಂತ ಸೂಕ್ಷ್ಮವಾಗಿದೆ. ಇದು ವ್ಯಯವಾಗುವ ಯಾವ ಪದಾರ್ಥದ ರೀತಿಯಲ್ಲೂ ಇಲ್ಲವಾದ್ದರಿಂದ ಇದು ಅವ್ಯಯ. ಇಂತಹ ಜಗತ್ತಿನಲ್ಲಿರುವ ಪದಾರ್ಥದ ಗುಣಲಕ್ಷಣಗಳನ್ನು ಹೊಂದಿಲ್ಲದ ಪದಾರ್ಥವೇ ಈ ಅಕ್ಷರ. ಇದನ್ನು ಪದಾರ್ಥ ಎಂದು ಕರೆಯುವುದು ಕೂಡ ಕಷ್ಟ. ಏಕೆಂದರೆ ಪದಾರ್ಥಗಳಿಗಿರುವ ಯಾವ ಗುಣಲಕ್ಷಣಗಳೂ ಇದಕ್ಕಿಲ್ಲ ಎಂದಾದರೆ ಅದು ಪದಾರ್ಥವೇ ಅಲ್ಲ. ಅದು ಇಲ್ಲ ಎಂದರ್ಥವಲ್ಲ ಏಕೆಂದರೆ ಧೀರರು ಅದನ್ನು ಭೂತಯೋನಿಯನ್ನಾಗಿ ನೋಡುತ್ತಾರೆ. ಅಂದರೆ ಜಗತ್ತಿನ ಎಲ್ಲಾ ವಸ್ತುಗಳಿಗೂ ಕಾರಣೀಭೂತವಾಗಿರುವ ಈ ಅಕ್ಷರವು ಧೀರರಿಗೆ ಕಾಣಿಸುತ್ತದೆ.

ಅಕ್ಷರದ ಬಗ್ಗೆ ಈ ವಿವರಣೆಯನ್ನು ಗಮನಿಸಿದ ಮೇಲೆ ಅಕ್ಷರದ ಬಗ್ಗೆ ಒಂದು ರೀತಿಯ ಶಾಬ್ದಿಕ ವಿವರಣೆಯನ್ನು ತಿಳಿದುಕೊಂಡಂತೆ ಆಗಿದೆ. ಏಕೆಂದರೆ ಜಗತ್ತಿನಲ್ಲಿ ಇರುವ ಪದಾರ್ಥವಾದರೆ ಅದು ಎಲ್ಲಿದೆ? ಹೇಗಿದೆ? ಇತ್ಯಾದಿಯಾಗಿ ತಿಳಿದುಕೊಂಡು ವಿವರಣೆ ಸರಿಯಾಗಿದೆಯೇ ಇಲ್ಲವೇ ಎಂದು ಪರೀಕ್ಷಿಸಿ ತೋರಿಸಲು ಸಾಧ್ಯ. ಈ ಅಕ್ಷರವು ಆ ರೀತಿಯ ಯಾವುದೇ ವಿವರಣೆಗಳಿಗೆ ಸಿಗುವ ವಸ್ತುವಲ್ಲ. ಈ ಅಕ್ಷರವು ಇರುವ ವಸ್ತುಗಳ ಗುಂಪಿಗೆ ಸೇರುವುದಿಲ್ಲ.

CC-0. Nepal Sanskrit Academy, Kathmandu Collection

ಆದ್ದರಿಂದ ಶಾಬ್ದಿಕ ವಿವರಣೆ ಮಾತ್ರ ಸಾಧ್ಯವಾಗಿದೆ. ಈ ವಿವರಣೆಯು ಒಂದು ರೀತಿಯಲ್ಲಿ ಅರ್ಥಹೀನ ಎಂದೇ ಅನ್ನಿಸುತ್ತದೆ. ಏಕೆಂದರೆ "ಅಕ್ಷರ" ಎಂಬ ವಸ್ತು ಪ್ರಪಂಚದಲ್ಲಿ ಇಲ್ಲ. ಹಾಗಾದರೆ ಇದನ್ನು ಇಲ್ಲದಿರುವ ವಸ್ತು ಎಂದು ಕರೆಯೋಣವೇ ಎಂದರೆ ಅದು ಸಾಧ್ಯವಿಲ್ಲ. ಅದು ಧೀರರಿಗೆ ಕಾಣಿಸುತ್ತದೆ. ಅಂದರೆ ಅಕ್ಷರವು ಅನುಭವಕ್ಕೆ ಸಿಗುತ್ತದೆ. ಇದು ಯಾವಾಗ ಅನುಭವದ ಸ್ತರದಲ್ಲಿ ತಿಳಿಯುವುದೋ ಆಗ ಈ ಪರಾ ವಿದ್ಯೆಯು ಅರ್ಥಪೂರ್ಣವಾಗುವುದು.

ಉಪಸಂಹಾರ

ಸಂಸ್ಕೃತಿ ಮತ್ತು ಜ್ಞಾನ ಇವೆರಡೂ ನಮ್ಮ ಪರಂಪರೆಯಲ್ಲಿ ಒಂದನ್ನೊಂದು ಹೆಣೆದುಕೊಂಡಿದೆ. ಆಧುನಿಕ ಭಾರತವು ತನ್ನನ್ನು ತಾನು ಅರಿಯಬೇಕೆಂದರೆ ಇವುಗಳ ಕುರಿತು ಗಂಭೀರವಾದ ಅಧ್ಯಯನವನ್ನು ನಡೆಸಬೇಕಾಗಿದೆ. ಗಂಭೀರ ಅಧ್ಯಯನ ನಡೆದಿದೆ ಎಂದು ತಿಳಿಯುವುದೆ ಶೋಧಲೇಖನ ಮತ್ತು ಶೋಧಪ್ರಬಂಧಗಳಿಂದ. ಆ ದಿಸೆಯಲ್ಲಿ ಗುರುಕುಲಗಳ ಪಾತ್ರ ಬಹಳ ಮಹತ್ತ್ವದ್ದಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಗುರುಕುಲಗಳಲ್ಲಿ ಪ್ರಯತ್ನ ನಡೆಯುತ್ತಿದೆ ಎಂದುಬು ಬಹಳ ಸಂತಸದ ಸಂಗತಿಯಾಗಿದೆ.

❀ ❀ ❀

CC-0. Nepal Sanskrit Academy, Kathmandu Collection

औपनिषदं शिक्षणचिन्तनम्

✍ डा. उमेशः हेगडे
आचार्यः, उद्यानम् अनौपचारिकशिक्षणसंस्था

प्राणिसमूहे स्वबुद्धिशक्त्या चिन्तनशक्त्या सर्वानतिशेते मानवः । तस्मात् परमात्मनः सृष्टावस्यां मनुष्यस्य विशिष्टं स्थानं विद्यते । कारणं तावत् अस्य विद्यते यत् मानवस्य मनः अथवा बुद्धिः ज्ञानेन संस्कर्तुं योग्या अस्ति, परं नान्येषां प्राणिनाम्। तस्मात् संस्कृतः एव मानवः मानवपदेन अभिधातुं योग्यः भवति नान्यः । मनसः संस्कारे तु शिक्षणस्य बहु प्रमुखं स्थानं वर्तते । अत हेतोः उक्तं भर्तृहरिणा **'विद्या नाम नरस्य रूपमधिकं', 'विद्याविहीनः पशुः'** इत्यादि वचनम् । विद्या मानवं संस्करोति इत्यत्र न कस्यापि संशीतिः विद्यते । अतः ज्ञानप्रधानः एव मानवः । मन-ज्ञाने इति धातुना मानवः इति पदं उत्पद्यते । तस्मात् ज्ञानेन विना मानवः मानवत्वं न आप्नोति । ज्ञानेन एव सुखं जीवनं संभवति मानवस्य । ज्ञाने तावत् शिक्षणस्य स्थानं प्रामुख्यमावहति।

शिक्ष विद्योपादाने इति धातुना शिक्षणमिति पदं निष्पन्नम् । तस्यार्थस्तु सामीप्येन विद्यायाः प्राप्तिः इति। कस्मात् ? गुरोः सकाशात् । विद्यायाः प्राप्तिप्रक्रिया या वर्तते तस्याः एव शिक्षणं इति नाम । एषा प्रक्रिया कथं भवेत् ? तस्याः स्वरूपं किम् ? इत्यादि विषयेषु उपनिषत्सु अनेके विचाराः उक्ताः सन्ति । तत्तु इदानीन्तनशिक्षणस्य कृते दिग्दर्शकमस्ति ।

शिक्षावल्ली तैत्तिरीयोपनिषदः एकः भागः वर्तते । वल्लीत्रये प्रथमावल्ली शिक्षावल्ली। तत्र शिक्षणसम्बध्दाः अनेके विचाराः सन्ति । तत् प्रथमं वयं ज्ञास्यामः ।

शिक्षणे तु विद्यायाः आदानप्रदानं भवति । तत्र भाषायाः मुख्यं स्थानं भवति । अत एव प्रधानभूतायाः भाषायाः एव विषये शिक्षावल्यां आरम्भे उच्यते । यस्य भाषाज्ञानं सम्यक् अस्ति सः विद्यामपि सम्यक् प्राप्तुं शक्नोति । तस्मात् वर्णोच्चारणक्रमः एव आरम्भे निरूप्यते । यच्च ज्ञानमस्माभिः प्राप्यते तस्य ६०% श्रवणेनैव भवतीति शिक्षणतज्ज्ञाः अभिप्रयन्ति । अतः शिक्षणे भाषा शुद्धा सरला च भवेत् । तदर्थं तत् सूचयितुमेव आरम्भे **'वर्णस्वरः। मात्रा बलं। साम सन्तानः।'** इत्युच्यते ।

आचार्यलक्षणम्

शिक्षणे तु आचार्यस्य प्रधानं स्थानम् । यथा आचार्याः भवन्ति तथैव छात्राः अपि वर्धिताः भवन्ति । तस्मात् आचार्याः स्वविद्यया व्यवहारेण च विद्यार्थिनः शिक्षयेत् । तदा एव

CC-0. Nepal Sanskrit Academy, Kathmandu Collection

छात्राः विद्यासम्पन्नाः व्यवहारकुशलाश्च भवन्ति । अत एव कीदृशः आचार्यः भवितुमर्हति ? किं तस्य स्वरूपम् इति स्पष्टमुच्यते अत्र । यत्र च ओङ्कारोपासनं निरूप्यते तत्र आचार्यस्य प्रार्थना वर्तते । तत्रः आचार्यः प्रार्थयति यत् - **'समेन्द्रो मेधया स्पृणोतु । अमृतस्य देवधारणो भूयासम् । शरीरं मे विचर्षणम् । जिह्वा मे मधुमत्तमा । कर्णाभ्यां भूरि विश्रुवम् ।'** परमेश्वरः मां मेधाशक्त्या बलयतु, प्रीणयतु । अहं ब्रह्मज्ञानस्य धारयिता भवेयम् । शरीरं मम योग्यं भवेत् । जिह्वा मम मधुरभाषिणी भवेत् । अहं श्रोत्राभ्यां बहुश्रोता भवेयम् - इत्यादि प्रार्थयते । अनेन एकः आचार्यः कथं भवेदिति ज्ञायते । सः ज्ञानी भवेत् । **'अहं ज्ञानी अस्मि'** इति अहङ्कारः अपि न भवेत् । यदि पुनरपि यत् किञ्चित् ज्ञेयमस्ति तर्हि तद् ज्ञानार्थं सः सविनयं प्रयतेत । तदा एव आचार्यः आचार्यत्वमाप्नोति । अपि च आचार्यः मधुरभाषी भवेत् । तदा एव अन्तेवासिनः आचार्यस्य समीपमुपयान्ति ।

एतदपेक्षया अपि बहु प्रमुखं कर्तव्यं आचार्यस्य विद्यते यत् विद्यार्थिनां व्यवहारे गुणादानं, दोषनिवारणं च । अत अत्र तु आचार्यः स्वव्यवहारेणैव तत् कर्तुं शक्नोति न बोधनेन । अत एव आचार्यः इति पदस्य अर्थः अपि तथैव निरूपितः ।

आचिनोति च यच्छास्त्रं आचारे स्थापयत्यपि ।

स्वयमाचरति श्रेष्ठः तस्मादाचार्य उच्यते ॥ इति ।

यः यं व्यवहारं शास्त्रोक्तं अन्येभ्यः वदति तं व्यवहारं स्वजीवने आचरेत् । तदा एव सः आचार्यः भवति। एतदर्थं आचार्यः मुक्तमनस्कः भवेत् । छात्रेभ्यः यत् उपदिशति, सः तत् स्वयमाचरेत् । नास्ति चेत् छात्राः तं निश्चयेन तिरस्कुर्वन्ति । एष एव अंशः सूचितः अस्ति आचार्योपदेशभागे - **'यान्यनवद्यानि कर्माणि । तानि सेवितव्यानि । नो इतराणि । यान्यस्माकं सुचरितानि । तानि त्वयोपास्यानि । नो इतराणि ।'** - अस्माकमाचार्याणां ये च सदाचाराः सन्ति ते त्वया अनुसर्तव्याः । अस्माभिः ये च दुराचाराः अनुष्ठिताः ते च नानुसर्तव्याः । इति आचार्यः वदति । अनेन ज्ञायते यत् आचार्यः व्यवहारकुशलः भवेत् अनुतिष्ठेत् च । अपि च सः विनम्रः भवेत् । मयापि दोषाः अनुक्रीयन्ते । तस्मात् तान् नानुतिष्ठ इति वक्तुं एषः विनम्रभावः यदि आचार्ये नास्ति, तर्हि सः आचार्यो न भवति इति उपनिषद् सन्दिशति ।

अपि च आचार्यस्य अन्य अपि एकः गुणः उक्तः अस्ति शिक्षावल्याम् । सः वर्तते परगुणग्रहणं, तस्य च गौरवप्रदानम् । आचार्योपदेशे आचार्यैः उच्यते यत् 'ये के चास्मच्छ्रेयांसो ब्राह्मणाः । तेषां त्वयासनेन प्रश्वसितव्यम् ।' - यदि गुरुकुलात् गृहगमनोत्तरं तव व्यवहारविषयकविचिकित्सा भवति तर्हि तत्र ये ज्ञानिनः सन्ति ते प्रष्टव्याः । तान् उपसर्प्य संशयनिवारणं कृत्वा गौरवप्रदानं करोतु - **'ये तत्र ब्राह्मणाः संमर्शिनः । युक्ता आयुक्ताः । अलूक्षा धर्मकामा स्युः । यथा ते तत्र वर्तेरन् तथा तत्र वर्तेथाः ।'** ते केषुचित् कठिणेषु

CC-0. Nepal Sanskrit Academy, Kathmandu Collection

सन्निवेशेषु यथा व्यवहरन्ति तथा व्यवहरतु इति आचार्याः वदन्ति । एवं ज्ञानिनां विषये असूयां विना सगौरवं आदरपूर्वकं व्यवहर्तव्यमाचार्येण इत्यपि आदिशति उपनिषत् । एवं शिक्षणे विद्यार्थिनिर्माणे आचार्यस्य महत्त्वं स्थानं दर्शयति उपनिषद् ।

विद्याक्षेत्राणि

ज्ञानं सविषयं भवति । विषयेन विना ज्ञानं न स्यात् । ज्ञानविषयाः अपि शिक्षणे प्रामुख्यमावहन्ति । अतः ज्ञानविषयाः के भवेयुः, भवितुमर्हन्ति इत्यपि सम्यक् निरूपितमत्र । **'ऋतं च स्वाध्यायप्रवचने च'** इत्यतः **'प्रजनश्च स्वाध्यायप्रवचने च'** इति पर्यन्तं ज्ञानस्य विषयाः अथवा क्षेत्राणि उक्तानि । ऋतं नाम शास्त्राध्ययनेन, प्रकृत्यध्ययनेन वा यत् तत्त्वम् अवधार्यते तत् । इत्युक्ते वैश्विकं सत्यम् । तदेव वाक्कायाभ्यां यदा अनुष्ठीयते तत् सत्यं भवति। एवं च शिष्यस्य वा आचार्यस्य वा प्रकृत्या सह भूत्वा तस्याः अध्ययनं नितान्तमपेक्षितमेव। प्रकृतिस्थं नित्यं तत्त्वं प्रथमं ज्ञातं स्यात् । यदा प्रकृत्या सह भवामः तदा प्रकृतिरक्षणमपि भवति । तत्र वयं बद्धादराः भवेम । इदानीं तावत् तन्नास्ति। तस्मात् मानवः प्रकृतिनाशे रतः विद्यते। तस्मात् प्रकृत्याः अध्ययनं तस्य रक्षणं च कर्तव्यमेव अस्माभिः।

एवं प्रकृत्यावधारितानां तत्त्वानां जीवने अनुष्ठानमेव सत्यमित्युच्यते। तच्च वाक्कायाभ्यां निर्वर्तितं भवति। तत्र च सत्यवाक्यं कथं केन प्रकारेण वक्तव्यमिति ज्ञात्वा वक्तव्यम् । एवमेव मानवस्य बाह्येन्द्रियाणामन्तरिन्द्रियाणां च न समीचीनमार्गे चालनं स्यात् । तद्विषयकज्ञानमपि सर्वेषामपेक्षितम् । अपि च मानवेन विषये कस्मिन् निरन्तरं परिश्रमः विधेयः। तेन च सह तत्र सिद्धिमाप्नोति। तस्मात् तपोविषयकज्ञानमपि नितान्तमपेक्षितम्। बहुप्रधानमेतत् वर्तते यत् मानवानां व्यवहाराध्ययनम्। मानवः नाम मनोयुक्तः भवति। तस्मात् प्रत्येकस्यापि मनः भिन्नं भवतीत्यतः व्यवहारोऽपि भिन्नः भवति। अतः तेषामध्ययनमपेक्षितमेव। तदा एव मानवेषु सामरस्यं वर्धते। तस्मात् एतस्यापि अध्ययनमध्यापनञ्च भवेत्। तथैव वेदोक्तकर्मविषयकमध्ययनं कर्तव्यम्। अपि च प्रजाप्राप्तिविषयकाध्ययनमध्यापनञ्च भवेदिति वदति उपनिषत् । एवं शिक्षणस्य क्षेत्राणामपि उल्लेखं करोति उपनिषदियम् । एवं शिक्षणस्य अनेके विचाराः शीक्षावल्यां चर्चिताः । ते च अस्माभिः अवश्यं ज्ञेयाः ।

एवमेव छान्दोग्योपनिषदि सप्तमे अध्याये नारदः स्वयं किं किम् अधीतं मया इति वदति । ते सर्वेऽपि पाठ्यविषयाः एव भवन्ति । सः वदति ऋग्वेदं भगवो अध्येमि, यजुर्वेदं, सामवेदं, अथर्वणं चतुर्थमितिहासपुराणं - इत्येवमनेकान् विषयान् अधीतान् उल्लिखति । एते सर्वेऽपि पाठ्यविषयाः एव भवन्ति। अपि च उपनिषदि जीवात्मा, परमात्मा, प्रकृतिः एते प्राधान्येन निरूपिताः विषयाः। अतः मानवः प्रत्येकोऽपि एतेषामपि यथार्थज्ञानं प्राप्नुयात् । तस्मात् एतेऽपि पाठ्यविषयत्वेन स्वीकरणीयाः एव । तथैव चित्तशुद्ध्यर्थं श्रद्धा, ब्रह्मचर्यं, तपः इत्यादयः गुणाः उक्ताः । तेऽपि पाठ्यविषयत्वं भजन्ते। एवं उपनिषदि ये च

CC-0. Nepal Sanskrit Academy, Kathmandu Collection

पाठ्यविषयत्वेन उक्ताः ते यदि पाठ्यन्ते, अनुस्रियन्ते तर्हि मानवस्य उन्नतिः अवश्यं भवत्येव । एवमेव पाठनविधयः, आचार्यसम्बध्दाः विषयाः, अन्तेवासिसम्बध्दाः विचाराः इत्येवमादयः शैक्षणिकाः विषयाः उपनिषत्सु बहुधा लभ्यन्ते । ते चात्र न सङ्गृहीताः अध्यायदैर्घ्यभयात् । ते च विषयाः शिक्षणावसरे अवश्यं चिन्तनीयाः एव सन्ति ।

शिक्षणोद्देशः - स्वरूपविज्ञानम्

उपनिषदध्ययनेन ज्ञायते यत् शिक्षणस्य किं भवेत् उद्देश्यमिति। प्रथमं तावत् भवति उद्देश्यं शिक्षणस्य स्वरूपपरिज्ञानम्। उपनिषदि तावत् आत्मविज्ञानमेव प्राधान्येन निरुप्यते। देहमेव आत्मत्वेन मन्वानः मानवः अज्ञानेन संसारे दुःखमनुभवति। तस्मात् सः उत्थाय देहातिरिक्तमात्मानं स्वस्वरूपत्वेन यथा जानीयात् तथा आत्मविद्यां बोधयति उपनिषत् । तद्वदेव शिक्षणस्यापि स्वस्वरुपज्ञानमेव उद्देशः भवेत् । स्वरूपज्ञानं नाम स्वसामर्थ्यस्य तथैव स्वन्यूनतायाः ज्ञानं । तद्यदा भवति तदा मानवः न्यूनतां परित्यज्य स्वसामर्थ्यवर्धने समर्थः भवति । सामर्थ्यं तु सर्वेषामन्तर्निहितमेव भवति । परन्तु तत् ज्ञापयित्वा तत् सामर्थ्यं यथा बहिरागच्छेत् तथा शिक्षणं प्रदेयमस्माभिः । अत एव विवेकानन्दाः एवमूचुः शिक्षणविषये – "Education is the manifestation of perfection which is already existing in man."

अतः शिक्षणं प्रत्येकस्य व्यक्तेः सामर्थ्यं ज्ञापयित्वा तत् वर्धने साहाय्यं कुर्यात् इति उपनिषदध्ययनेन ज्ञायते । एवं शिक्षणस्य मुख्यमुद्देश्यं भवति स्वरूपविज्ञानम् उपनिषदनुसारेण।

श्रद्धावतः निर्माणम्

उपनिषदि आत्मज्ञानसाधनत्वेन श्रध्दा प्राधान्येन उच्यते । छान्दोग्ये तावत् आरुणिः स्वपुत्राय श्वेतकेतवे वदति एवं **'श्रध्दस्व सौम्य'** इति । एवमेव पिप्पलादः अपि प्रश्नेन सह आगतान् भारद्वाजादीन् अपि वदति एवं 'तान्ह ऋषिरुवाच भूय एव तपसा ब्रह्मचर्येण श्रद्धाया संवत्सरं संवत्स्यथ' इति । एवं गीतायामपि उक्तमस्ति श्रद्धावान् लभते ज्ञानम् इति । एवं श्रद्धा सर्वत्र अपेक्षिता एव । मानवः तावत् श्रद्धावान् यदि भवति तर्हि केवलं मनसा शुद्धः भवितुमर्हति । अत एव उपनिषदि श्रद्धा चित्तशुद्धिकारणमिति गीयते । तस्मात् व्यक्तौ यदि श्रद्धा भवति तर्हि अवश्यं सः ज्ञानी भवति विवेकी च । उपनिषदि इदमपि स्पष्टमुच्यते यत् आत्मश्रद्धा भवेत् व्यक्तौ इति। शिक्षणं एतत् कुर्यात् यत् व्यक्तौ स्वसामर्थ्यस्य विषये श्रद्धां जनयेत् । तदा एव सः वर्धते । अपि च धर्मदेवश्रद्धेऽपि व्यक्तेः व्यक्तित्वनिर्माणे प्रधानं पात्रं वहतः इति उपनिषदा ज्ञायते । अतः श्रद्धावान् मानवः शिक्षणेन सिद्धो भवेदिति उपनिषदध्ययनेन ज्ञायते ।

CC-0. Nepal Sanskrit Academy, Kathmandu Collection

व्यक्तौ विवेकोत्पादनम् -

उपनिषदि तावत् अनेके विचाराः सन्ति । प्रधानः तु विषयः भवति अज्ञाननिवृत्या आत्मयथार्थज्ञानोत्पादनम्। अतः ज्ञानस्वरूपमपि सम्यक् निरूप्यते। एवमेव अज्ञानस्वरूपमपि। तेन ज्ञानाज्ञानयोः विवेकः जायते। विवेकेन च ज्ञानमार्गे मानवः प्रवर्तते। अत एव साधनचतुष्टये प्रथममेव विद्यते नित्यानित्यवस्तुविवेकः । नित्यं वस्तु किम् अनित्यं किमिति ज्ञात्वा विवेकेन नित्यवस्तुप्राप्तये मानवः प्रयतेत इति विवेकः एव प्रथमं विद्यते साधनचतुष्टये । एवमेव यदि कार्याकार्यविवेकः मानवे भवति तर्हि सः अवश्यं कार्यमेव करोति नैव अकार्यम् । अत एव उपनिषत् तदेव कार्यं करोति । एवमेव शिक्षणेनापि यदि प्रत्येकस्मिन् मानवे विवेकः जागर्ति तर्हि न कोऽपि अहिंसाद्यकार्यं करोति । अतः उपनिषदनुसारेण यदा पश्यामः तदा ज्ञायते यत् व्यक्तौ विवेकोत्पत्तिः शिक्षणस्य उद्देश्येषु अन्यतममस्ति इति ।

एकस्याः व्यक्तेः व्यक्तित्वनिर्माणे शिक्षणस्य पात्रं प्रधानमस्ति । शिक्षणं यदि सम्यक् लभ्यते तर्हि व्यक्तिः स्वस्था भवति । स्वस्थव्यक्त्या स्वस्थसमाजनिर्माणं शक्यते । तत्र उपनिषदः अवश्यं सहकुर्वन्ति स्वविचारैः ।

CC-0. Nepal Sanskrit Academy, Kathmandu Collection

ಶಿಕ್ಷಣದಲ್ಲಿ ನಾರೀ ಪರಂಪರೆ

✍ **ಹೆಚ್. ಕೆ. ಶ್ರುತಿ**
ಯೋಜನಾಧಿಕಾರಿ, ವೇದಾಂತ ವಿಭಾಗ
ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ

'ಏತದ್ದೇಶಪ್ರಸೂತಸ್ಯಸಕಾಶಾದಗ್ರಜನ್ಮನಃ ।
ಸ್ವಂ ಸ್ವಂ ಚರಿತ್ರಂ ಶಿಕ್ಷೇರನ್ಪೃಥಿವ್ಯಾಂ ಸರ್ವಮಾನವಾಃ'॥ – (ಮನು–2–20)

ಎಂಬ ಉಕ್ತಿಯು ದೇಶದ ಶೈಕ್ಷಣಿಕ ಹಿರಿಮೆಯನ್ನು ವಿಶ್ವದಲ್ಲಿ ಸಾರುತ್ತದೆ. ಭಾರತದ ಶಿಕ್ಷಣದ ಮಹತ್ವ ವ್ಯಕ್ತಿ ಶಿಕ್ಷಣದಿಂದ ಸಮಷ್ಟಿಯ ಹಿತದವರೆಗಿನದು. ಶಿಕ್ಷಾಶಬ್ದದ ಅರ್ಥವು ಜ್ಞಾನ, ವಿದ್ಯೆ ಎಂಬುದಾಗಿದೆ. ಮುಂಡಕೋಪನಿಷತ್ತು ಜ್ಞಾನವು ಲೌಕಿಕ ಹಾಗೂ ಅಲೌಕಿಕ ಎಂದು ಎರಡಾಗಿ ಇರುವುದೆಂದು ಹೇಳಿ, ಎರಡೂ ಜ್ಞಾನಗಳ ಮಹತ್ವ, ಸಾಧನೆ, ಸಾಧಕ ಹಾಗೂ ಗಮ್ಯಗಳು ಬೇರೆ ಬೇರೆ ಎಂದು ತಿಳಿಸಿದೆ. ವಿಶೇಷವೆಂದರೆ ಭಾರತೀಯ ಲೌಕಿಕ ಶಿಕ್ಷಣವೂ ಕೂಡಾ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಯನ್ನು ಅಭಿಲಕ್ಷಿಸಿಯೇ ಹೇಳಲ್ಪಟ್ಟಿದೆ. ಶಿಕ್ಷಣವೆಂದರೆ ಕೇವಲ ಮಾಹಿತಿಗಳ ಸರಕಿನಿಂದ ವಿದ್ಯಾರ್ಥಿಯ ಬೌದ್ಧಿಕಮಟ್ಟವನ್ನು ಹೆಚ್ಚಿಸಿ, ಅವನು ಆರ್ಥಿಕವಾಗಿ ಸಬಲನಾಗಿ ಸಮಾಜದಲ್ಲಿ ಒಂದಿಷ್ಟು ಘನತೆಯನ್ನು ಸಂಪಾದಿಸುವುದನ್ನು ಹೇಳಿಕೊಡುವುದಲ್ಲ ಶಿಕ್ಷಣವೆಂದರೆ ಮಗುವಿನ ಆಂತರ್ಯದಲ್ಲಿ ಸಂಸ್ಕಾರರೂಪದಲ್ಲಿದ್ದ ಜ್ಞಾನವನ್ನು ಹೊರತೆಗೆದು ಮಾನಸಿಕವಾಗಿ ಬೌದ್ಧಿಕವಾಗಿ ದೈಹಿಕವಾಗಿ ಅವನನ್ನು ಸದೃಢನನ್ನಾಗಿ ಮಾಡಿ ಸಮಾಜದ ಹಿತಕ್ಕಾಗಿ ಶ್ರಮಿಸುವಂತೆ ವ್ಯಕ್ತಿತ್ವವನ್ನು ಸರ್ವತೋಮುಖವಾಗಿ ವಿಕಸನಗೊಳಿಸುವುದು. ಈ ದೃಷ್ಟಿಯಲ್ಲಿ ಶಿಕ್ಷಣವನ್ನು ನೋಡಿದಾಗ ಇಂತಹ ಪರಿಪೂರ್ಣ ಶಿಕ್ಷಣವನ್ನು ಕೇವಲ ಗುರುವು ಮಾತ್ರವೇ ನೀಡಲು ಸಾಧ್ಯವಿಲ್ಲ. ಜೀವನ ಹುಟ್ಟಿನಿಂದಲೇ ಈ ಶಿಕ್ಷಣದ ಪ್ರಕ್ರಿಯೆಯು ಆರಂಭವಾಗುತ್ತದೆ. ತಂದೆ–ತಾಯಿಯರು ಮಗುವಿನ ನಿರ್ಧಾರವನ್ನು ಮಾಡುವ ಕಾಲದಲ್ಲೇ ಯೋಗ್ಯ ಗಳಿಗೆಯಲ್ಲಿ ಸಮಾಹಿತಚಿತ್ತರಾಗಿ ಯೋಗ್ಯ ಶಿಶುವಿನಜನನವನ್ನು ಲಕ್ಷಿಸಬೇಕು. ಶಿಶುವು ಗರ್ಭಸ್ಥವಾಗಿರುವಾಗಲೇ ತಾಯಿಯು ಮೊದಲಗುರುವಾಗಿ ಧ್ಯಾನ, ಸತ್ಕಾರ್ಯ, ಅಧ್ಯಯನಾದಿಗಳನ್ನು ಮಾಡಬೇಕು. ಇದರಿಂದ ಒಳ್ಳೆಯ ಸಂಸ್ಕಾರವು ಶಿಶುವಿಗೆ ಆದಿಯಲ್ಲೇ ದೊರೆಯುತ್ತದೆ. ಶಿಶುವಿನ ಜನನದ ನಂತರದಲ್ಲಿ ತಂದೆ–

CC-0. Nepal Sanskrit Academy, Kathmandu Collection

ತಾಯಿಯರು, ಪ್ರಮುಖವಾಗಿ ಮಗುವಿನ ಆಟೋಟಗಳಲ್ಲಿ ಸದಾತೊಡಗುವ ತಾಯಿ ಮಗುವಿನ ಬೆಳವಣಿಗೆಗೆ ಕಾರಣವಾಗುವ ಎಲ್ಲಅಂಶಗಳನ್ನು ಮಗುವಿಗೆ ನೀಡಬೇಕು. ಹಾಗಾಗಿ ಶಿಕ್ಷಣವು ಮಗುವಿನ ಜನನಕ್ಕೆ ಮೊದಲೇ ಆರಂಭವಾಗುತ್ತದೆ. ಈ ದೃಷ್ಟಿಯಿಂದ ಶಿಕ್ಷಣವನ್ನು ನೋಡಿದರೆ ಭಾರತೀಯ ಶಿಕ್ಷಣದ ಮಹತ್ವವು ಅರಿವಾಗುತ್ತದೆ. ಈಗ ಜೀವಿಕೆಯ ಸಾಧನಗಳಿಗೆ ಮಹತ್ವವನ್ನು ನೀಡಿ ಶಿಕ್ಷಣವನ್ನು ನೀಡಲಾಗುತ್ತದೆ. ಹಿಂದೆ ಜೀವಿಕೆಗಳಿಗಾಗಿ ಓದುವುದು ಕಲಿಕೆಯ ಅಂಗವಾಗಿತ್ತು. ಜೀವನದ ಅರಿವು, ಜೀವನದ ನಂತರದ ಸಾಕ್ಷಾತ್ಕಾರದ ಅರಿವಿಗಾಗಿ ಶಿಕ್ಷಣವಾಗಿತ್ತು. ಎಲ್ಲ ಶಿಕ್ಷಾವಿಭಾಗಗಳ ಮುಖ್ಯಪ್ರಯೋಜನವೂ ಕೂಡಾ ಇದೇ ಆಗಿದೆ. ಈ ಹಿನ್ನೆಲೆಯಲ್ಲಿ ಶಿಕ್ಷಣವನ್ನು ಲಕ್ಷಿಸಿ ಇಂತಹ ಶಿಕ್ಷಣವನ್ನು ನೀಡಿದ ಭಾರತೀಯ ಮಹಿಳೆಯರ, ಜೀವನದ ಅರಿವನ್ನು ಮೂಡಿಸಿದವರ ಚಿತ್ರಣವನ್ನು ನೀಡಲಾಗಿದೆ. ಜೊತೆಗೆ ಆಧುನಿಕ ದೃಷ್ಟಿಯಿಂದಲೂ ಅಲ್ಲಲ್ಲಿ ನಿರೂಪಿಸಲಾಗಿದೆ.

ವೈದಿಕ ಕಾಲದ ಶಿಕ್ಷಿತ ಮಹಿಳೆಯರು

ವೇದಗಳ ಕಾಲದಲ್ಲಿ ಸ್ತ್ರೀಯರು–ಪುರುಷರಿಗೆ ಸಮಾನರಾಗಿದ್ದರು ಎಂದೂ ವಿದ್ಯಾರ್ಜನೆಗೆ ಹಾಗೂ ತನಗೆ ಬೇಕಾದ ಜೀವನ ಕ್ರಮವನ್ನು ಆಯ್ದುಕೊಳ್ಳಲು ಅವರಿಗೆ ಸ್ವಾತಂತ್ರ್ಯವಿತ್ತೆಂದೂ ಆಧಾರಗಳು ದೊರಕುತ್ತವೆ. ಮಂತ್ರದ್ರಷ್ಟಾರರಾದ ಪರಾಶರ, ವಿಶ್ವಾಮಿತ್ರಾದಿ ಶ್ರೇಷ್ಠ ಋಷಿಗಳೊಂದಿಗೆ ಅದಿತಿ ದಾಕ್ಷಾಯಣಿ (ಋಕ್10.72), ಅಪಾಲಾ ಆತ್ರೇಯೀ (ಋಕ್8.91), ವಾಗಂಭೃಣೀ (ಋಕ್10.125) ಮುಂತಾದ ಮಂತ್ರದೃಷ್ಟ್ರಗಳಾದ ಬ್ರಹ್ಮವಾದಿನಿಯರು ಕಾಣಬರುತ್ತಾರೆ. ಭಾರತವನ್ನು ಹೊರತುಪಡಿಸಿ ಮತ್ತಿನ್ನಾವುದೇ ಧಾರ್ಮಿಕ ಪರಂಪರೆಯಲ್ಲಿ ಪುರುಷರಿಗೆ ಸಮಾನವಾದ ದಾರ್ಶನಿಕರ ಸ್ಥಾನದಲ್ಲಿರುವುದು ಕಾಣಬರುವುದಿಲ್ಲ. **'ಸ್ತ್ರೀ ಹಿ ಬ್ರಹ್ಮಾ ಬಭೂವಿಥ'** (ಋಕ್–8.319) ಸ್ತ್ರೀಯರು ವೇದಗಳನ್ನು ಅಭ್ಯಾಸ ಮಾಡುತ್ತಿದ್ದರು ಎಂಬುದು ತಿಳಿಯುತ್ತದೆ. ಹಾಗೂ ಯಾಜ್ಞಿಕರೂ ಆಗಿದ್ದರೆಂದು ಮಂತ್ರಗಳಿಂದ ತಿಳಿಯುತ್ತದೆ. ವೇದಾಭ್ಯಾಸವು ಉಪನಯನವಿಲ್ಲದೆ ಸಾಧ್ಯವಿಲ್ಲ. ಹಾಗಾಗಿ ಸ್ತ್ರೀಯರೂ ಉಪನೀತರಾಗುತ್ತಿದ್ದರೆಂದು ತಿಳಿಯಬಹುದಾಗಿದೆ.

ಅಂದಿನ ಗುರುಕುಲಗಳಲ್ಲಿ ವೇದವೇದಾಂತಶಾಸ್ತ್ರಗಳಲ್ಲದೇ ಜೀವನಕ್ಕೆ ಬೇಕಾದ ವ್ಯವಸಾಯ, ರಥ ತಯಾರಿಸುವುದು ಇತ್ಯಾದಿಗಳನ್ನೂ ಕಲಿಸುತ್ತಿದ್ದರು. ಬ್ರಹ್ಮಚಾರಿಣಿಯು 16 ವರ್ಷಗಳ ಕಾಲ ಇಂತಹ ವಿದ್ಯೆಯನ್ನು ಗುರುಕುಲಗಳಲ್ಲಿ ಕಲಿಯುತ್ತಿದ್ದಳು. ವಿದ್ಯಾಭ್ಯಾಸದ ನಂತರ ತನಗೆ ಯೋಗ್ಯನಾದವರನನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಳು. **'ತಮಸ್ಮೇರಾ ಯುವತಯೋ ಯುವಾನಂ ಮರ್ಮೃಜ್ಯಮಾನಾ ಪಾರೇಯಂತ್ಯಾಪ: । ಸ ಶುಕ್ರೇಭಿ: ಸ್ವೇದಸ್ಥೇ ದೀನಾಯಾನಿಧ್ಮೋ ಘೃತನಿರ್ಣಿಗತ್ಸು'** (ಋಕ್–2.35.4) [illegible] ಮಂತ್ರದಿಂದ [illegible] [illegible]ಗುತ್ತಿದ್ದರು.

SC40. Nepal Sanskrit Academy, Kathmandu Collection

ಯೋಗ್ಯಕಾಲದಲ್ಲೇ ಆಯ್ಕೆಯಿಂದ ವಿವಾಹವಾಗುತ್ತಿದ್ದರು ಎಂದು ತಿಳಿಯುತ್ತದೆ. ಇನ್ನೂ ಅನೇಕ ಮಂತ್ರಗಳಲ್ಲಿ ವಿವಾಹೋತ್ತರದಲ್ಲಿಯೂ ಜ್ಞಾನಾರ್ಜನೆಯನ್ನು ಮುಂದುವರೆಸುವುದು ಕಾಣಬಹುದಾಗಿದೆ.

ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬರುವ ಯಾಜ್ಞವಲ್ಕ್ಯ- ಮೈತ್ರೇಯೀ, ವಾಚಕ್ನವೀ, ಗಾರ್ಗೀ - ಯಾಜ್ಞವಲ್ಕ್ಯರ ಸಂವಾದದಿಂದ ಸ್ತ್ರೀಯರು ಬ್ರಹ್ಮಜ್ಞಾನಿಗಳಷ್ಟೇ ಅಲ್ಲದೇ ಗುರುಕುಲಗಳ ಕುಲಪತಿಯ ಹುದ್ದೆಯನ್ನೂ ನಿರ್ವಹಿಸುತ್ತಿದ್ದರು ಎಂಬುದು ಗಮನಿಸಬೇಕಾದ ಅಂಶ.

ಜ್ಞಾನಪ್ರಾಪ್ತಿಯು ಎಲ್ಲ ಸ್ತ್ರೀಯರಿಗೂ ಸಮಾನವಾದರೂ ವಿವಾಹ ವಿಚಾರದಲ್ಲಿ ಸ್ತ್ರೀಯರಿಗೆ ಸ್ವಾತಂತ್ರ್ಯವಿತ್ತು. ಲೌಕಿಕವಾದ ಗೃಹಸ್ಥಾಶ್ರಮವನ್ನು ನಿರ್ವಹಿಸಲು ಇಚ್ಛಿಸುವ ಮಹಿಳೆಯನ್ನು ಸದ್ಯೋವಧುಗಳೆಂದೂ ಅಲೌಕಿಕವಾದ ಬ್ರಹ್ಮಸಂಪತ್ತನ್ನು ಅರಸುವವರನ್ನು ಬ್ರಹ್ಮವಾದಿನಿಯರೆಂದೂ ಕರೆಯುತ್ತಿದ್ದರು. ಬ್ರಹ್ಮವಾದಿನಿಯರು ಗುರುಕುಲಗಳಲ್ಲಿ ಅಧ್ಯಯನ-ಅಧ್ಯಾಪನಗಳೊಂದಿಗೆ, ತಪ:ಸಾಧನೆಯೊಂದಿಗೆ ಮೋಕ್ಷವನ್ನರಸುತ್ತಿದ್ದರು. ಇದು ಬೃಹದಾರಣ್ಯಕದ ಕಾತ್ಯಾಯನಿ-ಮೈತ್ರೇಯೀ-ಯಾಜ್ಞವಲ್ಕ್ಯ ಸಂಭಾಷಣೆಯಿಂದ ತಿಳಿಯುತ್ತದೆ.

ಗುರುಕುಲ ಕೌಲಪತ್ಯವೋ ಅಧ್ಯಾಪಕ ವೃತ್ತಿಯೋ ಇಲ್ಲದಿದ್ದರೂ ಸ್ತ್ರೀಯರಿಗೆ ಶಿಕ್ಷಣ ನೀಡಿದರೆ ಕ್ರಮವಾಗಿ ಮನೆಯ ವಾತಾವರಣವೇ ಶೈಕ್ಷಣಿಕ ವಾತಾವರಣವಾಗಿ ಮಾರ್ಪಡುತ್ತದೆ. ಅದರಲ್ಲಿಯೂ ಅಧ್ಯಾತ್ಮದ ಶಿಕ್ಷಣ ಮಹಿಳೆಗೆ ದೊರೆತರೆ ಅದರಿಂದ ಕುಟುಂಬ, ಅದರಿಂದ ಸಮಾಜ ಹೀಗೆ ವೈಶ್ವಿಕವಾಗಿ ಶಿಕ್ಷಿತರ ವರ್ಗದಿಂದ ಶಾಂತಿ ನೆಲೆಸುತ್ತದೆ.

ಪುರಾಣಕಾಲದಲ್ಲಿ ಸ್ತ್ರೀಯರ ಶಿಕ್ಷಣ :

ವೇದಗಳ ಕಾಲದಲ್ಲಿದ್ದ ಸಮಾನತೆ, ಶಿಕ್ಷಣ ಕಾಲಾಂತರದಲ್ಲಿ ಹ್ರಾಸವಾಗುತ್ತಾ ಬಂದಿತು. ಆದರೂ ಮಹಾಭಾರತದ **ಭರದ್ವಾಜಸ್ಯ ದುಹಿತಾ.... ಕೌಮಾರೀ ಬ್ರಹ್ಮಚಾರಿಣೀ'** (ಶಲ್ಯ-48-2) ಎಂಬುದರಿಂದ ಸ್ತ್ರೀಶಿಕ್ಷಣವು ಕಾಣಬಹುದಾಗಿದೆ. ರಾಮಾಯಣದಲ್ಲಿ **'ದದರ್ಶ ಚ ಮಹಾಭಾಗಾಂ'** ಎನ್ನುವಲ್ಲಿ ಅಹಲ್ಯೆಯು ತಪೋನಿರತವಾಗಿರುವುದೂ, **'ಸಂಧ್ಯಾಕಾಲಮನಶ್ಯಾಮಾ'** ಎನ್ನುವಲ್ಲಿ ಸೀತೆಯ ಸಂಧ್ಯಾವಂದನಾದಿಗಳ ಕುರಿತೂ ಹೇಳಲಾಗಿದೆ. **'ಸಾಕ್ಷೌಮವಸನಾಹೃಷ್ಟಾ'** ಎಂಬ ಶ್ಲೋಕದಲ್ಲಿ ಕೌಸಲ್ಯೆಯು ರಾಮನ ಹಿತಕ್ಕಾಗಿ ವೇದಮಂತ್ರಸಹಿತವಾಗಿ ಹೋಮ ಮಾಡುವುದು ತಿಳಿಯುತ್ತದೆ.

ಸ್ಮೃತಿಗ್ರಂಥಗಳಲ್ಲಿಯೂ ಮಹಿಳೆಯರು ಉಪನಯನ ಮಾಡಿಕೊಂಡು ಯಜ್ಞೋಪವೀತವನ್ನು ಧರಿಸಿ ವೈದಿಕಜೀವನವನ್ನು ನಡೆಸುತ್ತಿದ್ದ ಉಲ್ಲೇಖಗಳು

CC-0. Nepal Sanskrit Academy, Kathmandu Collection

ದೊರೆಯುತ್ತವೆ. **'ಪ್ರವೃತ್ತಾಂ ಯಜ್ಞೋಪವೀತಿನೀಮಭ್ಯುದಾನಯಂ'** ಇತ್ಯಾದಿಗಳಲ್ಲಿ ಸ್ತ್ರೀಯರಿಗೆ ಮುಖ್ಯ ಸಂಸ್ಕಾರವಾದ ವಿವಾಹವಿಧಿಯ ಮಂತ್ರಗಳು ತಿಳಿದಿರಬೇಕಾಗಿತ್ತು. ಪತಂಜಲಿಯು ಆಪಿಶಲಾ, ಕಾಶಕೃತ್ಸ್ನಾ, ಆಚಾರ್ಯಾ ಎಂಬ ಉದಾಹರಣೆಗಳಿಂದ ಸ್ತ್ರೀಯರು ವ್ಯಾಕರಣ ಹಾಗೂ ಮೀಮಾಂಸಾ ಶಾಸ್ತ್ರಗಳ ಅಧ್ಯಾಪಿಕೆಯರಾಗಿದ್ದರೆಂದು ಸೂಚಿಸುವನು.

ಸಂಸ್ಕೃತದ ಕಾವ್ಯಗಳಲ್ಲಿ ಬಾಣನು ತನ್ನ ಕಾದಂಬರಿಯಲ್ಲಿ ಮಹಾಶ್ವೇತೆಯು ಯಜ್ಞೋಪವೀತವನ್ನು ಹಾಗೂ ಭಸ್ಮ-ತ್ರಿಪುಂಡ್ರವನ್ನು ಧರಿಸಿರುವಂತೆ ವರ್ಣಿಸಿದ್ದಾನೆ. ಅಭಿಜ್ಞಾನದ ಶಾಕುಂತಲೆಯು ಪತ್ರವನ್ನು ರಚಿಸುವುದರಲ್ಲಿ ಕುಶಲಳಾಗಿ ಚಿತ್ರಿತಳಾಗಿದ್ದಾಳೆ. ಮಾಲತೀ ಹಾಗೂ ಮಾಧವರ ತಂದೆಯು ಕಾಮಂದಕಿಯೊಡನೆ ಒಂದೇ ಗುರುವಿನ ಬಳಿ ಅಧ್ಯಯನ ಮಾಡಿದರೆಂದು ಭವಭೂತಿಯು ಹೇಳಿರುವುದರಿಂದ ಸಹಾಧ್ಯಯನವು (Co-education) ಇತ್ತೆಂದು ಹೇಳಬಹುದು.

ಮಧ್ಯಕಾಲೀನ ಭಾರತದಲ್ಲಿ ಸ್ತ್ರೀಶಿಕ್ಷಣ

ದ್ವೈತಮತದ ಸಂಸ್ಥಾಪಕರಾದ ಶ್ರೀಮಧ್ವಾಚಾರ್ಯರು ಪರಾಶರಸಂಹಿತೆಯ ಟೀಕಾರಚನಾ ಕಾಲದಲ್ಲಿ ಹೀಗೆ ಹೇಳುತ್ತಾರೆ –**'ದ್ವಿವಿಧಾ ಸ್ತ್ರೀಯ ಬ್ರಹ್ಮವಾದಿನ್ಯ: ಸದ್ಯೋವಧುಶ್ಚ । ತತ್ರ ಬ್ರಹ್ಮವಾದಿನೀನಾಮುಪನಯನಮ್ ಅಗ್ನಿಬಂಧನವೇದಾಧ್ಯಯನಂ ಸ್ವಗೃಹೇ ಭಿಕ್ಷಾ ಇತಿ !'** ಎಂದು. ಬ್ರಹ್ಮವಾದಿನಿಯರಿಗೆ ವೇದಕಾಲದಲ್ಲಿ ಉಪನಯನ, ಅಗ್ನಿಕಾರ್ಯ, ವೇದಾಧ್ಯಯನ ಹಾಗೂ ಭಿಕ್ಷಾಟನೆ ಇದನ್ನು ಹೇಳಲಾಗಿತ್ತು. ಗುರುಕುಲದಲ್ಲಿ ವಾಸ ಮಾಡುವ ಎಲ್ಲರಿಗೂ ಇದು ಸಾಧಾರಣವಾಗಿತ್ತು. ಆದರೆ 13ನೆಯ ಶತಮಾನದ ವೇಳೆಗೆ ಭಾರತದ ಸ್ಥಿತಿಗಳು ಬದಲಾದ ಕಾರಣ ಭಿಕ್ಷಾಟನೆಯನ್ನು ಮನೆಯಲ್ಲಿಯೇ ಮಾಡಲು ತಿಳಿಸಲಾಗಿದೆ. ಹಾಗೂ ಅಧ್ಯಯನವು ಮನೆಯಲ್ಲಿಯೇ ತಂದೆ, ಸಹೋದರ ಅಥವಾ ಪತಿಯೊಂದಿಗೆ ನಡೆಸಬೇಕೆಂದು ಹೇಳಿದ್ದಾರೆ. ಅವರ ವಿದ್ಯಾಭ್ಯಾಸಕ್ಕಿಂತ ರಕ್ಷಣೆಯೇ ಮುಖ್ಯವಾಗಿದ್ದು ಇಲ್ಲಿ ತೋರುತ್ತದೆ.

ಮಂಡನಮಿಶ್ರರ ಪತ್ನಿಯಾದ ಉಭಯ ಭಾರತಿಯು ಅಸಾಧಾರಣ ಪಂಡಿತೆ. ಈಕೆ ಆಚಾರ್ಯ ಶಂಕರ ಹಾಗೂ ಮಂಡನಮಿಶ್ರರ ವಾದದಲ್ಲಿ ಮಧ್ಯಸ್ಥೆಯಾಗಿ ನಿಲ್ಲುತ್ತಾಳೆ. ಮಧ್ಯಸ್ಥರಿಗೆ ಇಬ್ಬರೂ ವಾದಿಗಳ ಜ್ಞಾನವು ಇರಬೇಕು. ಆಕೆ ಮಂಡನಮಿಶ್ರರಿಗೆ ಸಮಾನವಾದ ಜ್ಞಾನವಂತಳಾಗಿ ಅವರೊಂದಿಗೆ ಗುರುಕುಲದ ನಿರ್ವಹಣೆಯನ್ನು ಮಾಡುತ್ತಿರುತ್ತಾಳೆ. ಇದು ಅಂದಿನ ಮಹಿಳೆಯರ ಹೆಚ್ಚುಗಾರಿಕೆ.

ಭಾರತದ ಮೇಲಾದ ಪರಕೀಯರ ನಿರಂತರ ಧಾಳಿ ಹಾಗೂ ಇನ್ನಿತರ ಸಾಮಾಜಿಕ [illegible] ಶಿಕ್ಷಣದ ಅವನತಿಯು

CC-0. Nepal Sanskrit Academy, Kathmandu Collection

ಕಾಣಬರುತ್ತದೆ. ಉಪನಯನ, ಅಧ್ಯಯನ ಇತ್ಯಾದಿಗಳಿಂದ ಮಹಿಳೆಯರು ವಂಚಿತರಾದರು. ವೇದಗಳ ಕಾಲದ ನಂತರ ಬಂದಂತಹ ಬೌದ್ಧ, ಜೈನಾದಿಗಳಿಂದ ಹೊಸ ಪರಂಪರೆಗಳೂ ಬೆಳೆದು ಬಂದವು.

ಬಾಲ್ಯವಿವಾಹ ಪದ್ಧತಿ, ಸತಿಪದ್ಧತಿ, ಜೌಹರ್, ವಿಧವಾವಿವಾಹ ಪದ್ಧತಿ ಇತ್ಯಾದಿ ಇತ್ಯಾದಿ ಪಿಡುಗುಗಳಿಂದ ವೇದ ಕಾಲದ ಸ್ಥಾನವು ನಶಿಸಿ ಆಕ್ರಮಣಗಳ ಹೊಡೆತದಿಂದ ತತ್ತರಿಸಿದ ಭಾರತದಲ್ಲಿ ಕಾಣಬಹುದಾಗಿತ್ತು. ಆದರೂ ಸ್ತ್ರೀಯರು ಧೀಶಕ್ತಿಯಿಂದ ಉನ್ನತ ವಿದ್ಯೆಯನ್ನು ಪಡೆದು ಶಿಕ್ಷಕಿಯರೂ ಸಾಹಿತ್ಯ ರಚನಾಕಾರರೂ ಆಗಿದ್ದ ಉಲ್ಲೇಖವನ್ನು ಕಾಣಬಹುದಾಗಿದೆ.

ಭಾರತದಲ್ಲಿ 'ಮಧ್ಯಕಾಲೀನ' ಯುಗದಲ್ಲಿ ಸ್ತ್ರೀ ಶಿಕ್ಷಣವನ್ನು ಕಾಣಲಾರೆವು ಎನ್ನುವವರಿದ್ದಾರೆ. ವಿಕತನಿತಾಂಬಾ, ಅವಂತೀ ಸುಂದರೀ, ವಿಜ್ಜಿಕಾ ಮೊದಲಾದ ವಿದುಷಿಯರನ್ನು ರಚನಾಕಾರರನ್ನು ಕಾಣಬಹುದಾಗಿದೆ.

ಇತಿಹಾಸ ಕಾಲದಲ್ಲಿ ಸ್ತ್ರೀ

ಅನೇಕ ಶತಮಾನಗಳಿಂದ ಬಾಹ್ಯರ ಧಾಳಿಗೆ ತುತ್ತಾಗುತ್ತಲೇ ಇದ್ದ ಭಾರತಕ್ಕೆ ಕೊನೆಯ ದಾಳಿಯನ್ನು ಮಾಡಿದವರು ಬ್ರಿಟಿಷರು. ಇವರ ಕಾಲದ ಹೊತ್ತಿಗೆ ಸ್ತ್ರೀಯರ ಶಿಕ್ಷಣವು ಅಧೋಗತಿಗೆ ತಲುಪಿತ್ತು. ಅವರ ಜೀವನವು ಅಸ್ವತಂತ್ರವಾಗಿದ್ದು ಕುಟುಂಬದ, ಸಂಪ್ರದಾಯಗಳ ಹಾಗೂ ಸಾಮಾಜಿಕವಾದ ಅನೇಕ ಕಟ್ಟಳೆಗಳಿಂದ ಕೂಡಿದ್ದು ನಮಗೆ ತಿಳಿದ ವಿಷಯ. ಈ ಎಲ್ಲ ಕಟ್ಟಳೆಗಳಿಗೆ ಅನೇಕ ಬಾಹ್ಯ ದಾಳಿಗಳು ಹಾಗೂ ಇನ್ನಿತರ ಸಾಮಾಜಿಕ ಕಾರಣಗಳಿಂದ ರಕ್ಷಣೆ ನೀಡುವುದೇ ಆದರೂ ಕಾಲಾಂತರದಲ್ಲಿ ಸ್ತ್ರೀಯರ ವೈಯಕ್ತಿಕ ಪ್ರಗತಿಗೆ, ಸಾಮಾಜಿಕವಾದ ಆಕೆಯ ಬದುಕಿಗೆ ವ್ಯತಿರಿಕ್ತವಾದ ಪರಿಣಾಮವನ್ನುಂಟುಮಾಡಿತು.

ಇಂತಹ ಕಾಲದಲ್ಲೂ ಬ್ರಿಟಿಷರ ಆಳ್ವಿಕೆಯ ನಡುವೆಯೂ ಅನೇಕರು ಸಾಧನೆ ಮಾಡಿದ್ದನ್ನು ಕಾಣಬಹುದಾಗಿದೆ. ಕೆಳಕಂಡ ಕೆಲವನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಪ್ಯಾರೇ ಚರಣದಾಸರೆಂಬ ಹಿಂದೂ ಕಾಲೇಜಿನ ವಿದ್ಯಾರ್ಥಿಯಾದವರು, ಯುವ ಬಂಗಾಳದ ಸದಸ್ಯರೂ ಆದವರು 1847ರಲ್ಲಿ ಬರಸಾತಿನಲ್ಲಿ ಹುಡುಗಿಯರಿಗಾಗಿ ಶಾಲೆಯನ್ನು ತೆಗೆದರು. ಮುಂದೆ ಇದು ಕಾಲಿಕೃಷ್ಣ ಹೈಸ್ಕೂಲ್ ಎಂದು ಪ್ರಸಿದ್ಧವಾಯಿತು.

ರಾಜಾರಾಮ ಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಜ್ಯೋತಿ ರಾವ್ ಫುಲೆ ಮೊದಲಾದವರು ಸ್ತ್ರೀಯರ ಹಕ್ಕಿಗಾಗಿ ಹೋರಾಡಿದವರು.

ಚಂದ್ರಮುಖಿ ಬಸು, ಕಾದಂಬಿನಿ ಗಂಗೂಲಿ ಹಾಗೂ ಆನಂದೀ ಗೋಪಾಲ ಜೋಶಿ ಇವರು ಈ ಕಾಲದಲ್ಲಿ ಪದವಿಯನ್ನು ಪಡೆದ ಶಿಕ್ಷಿತ ಸ್ತ್ರೀಯರು.

1927ರಲ್ಲಿ ಪುಣೆಯಲ್ಲಿ ಮೊದಲ ಬಾರಿಗೆ ಮಹಿಳೆಯ ಶಿಕ್ಷಣದ ಕುರಿತಾಗಿ

CC-0. Nepal Sanskrit Academy, Kathmandu Collection

ವಿಚಾರ ಸಂಕಿರಣವು ನಡೆಯಿತು. ಈ ವಿಚಾರ ಸಂಕಿರಣದ ಫಲವಾಗಿ ಸಾಮಾಜಿಕವಾಗಿ ಅನೇಕ ಬದಲಾವಣೆಯಾದವೆಂದು ಇತಿಹಾಸವು ಹೇಳುತ್ತದೆ.

ಶ್ರೀಮತಿ ಸಾವಿತ್ರಿ ಬಾಯಿ ಫುಲೆಯವರು ಅವರ ಪತಿ ಜ್ಯೋತಿರಾವ್ ಫುಲೆಯವರೊಂದಿಗೆ ಪುಣೆಯಲ್ಲಿ 1848ರಲ್ಲಿ ಹಿಂದುಳಿದ ಹೆಣ್ಣು ಮಕ್ಕಳಿಗಾಗಿ ಮೊದಲಬಾರಿಗೆ ಶಾಲೆಯನ್ನು ತೆರೆದರು. ಈ ಶಾಲೆಯಲ್ಲಿ ಸಾವಿತ್ರಿ ಬಾಯಿ ಫುಲೆಯವರು ಭಾರತದ ಮೊದಲ ಅಧಿಕೃತ ಶಿಕ್ಷಕಿಯಾದರು. (ಇವರು ಶಾಲೆಯನ್ನು ತೆರೆಯುವಾಗ ಪುಣೆಯಲ್ಲಿ ಬ್ರಾಹ್ಮಣರ ಸಂಖ್ಯೆ ಅಧಿಕವಾಗಿತ್ತು). ಇವರಿಗೆ ಅನೇಕರು ಅನೇಕ ರೀತಿಯಲ್ಲಿ ಕಿರುಕುಳವನ್ನು ನೀಡಿದರೂ ಕೂಡಾ ಶಾಲೆಯನ್ನು ನಡೆಸಿದರು. ಹೆಣ್ಣು ಮಕ್ಕಳ ಹಕ್ಕಿಗಾಗಿ ಹೋರಾಡಿದರು.

1849ರಲ್ಲಿ John Elliot Drinkwater Bethune ರವರು Bethune ಎಂಬ ಶಾಲೆಯನ್ನು ತೆರೆದರು. ಇದೇ ಮುಂದೆ 1879ರಲ್ಲಿ Bethune College ಆಯಿತು. ಭಾರತದಲ್ಲಿ ಇದೇ ಮೊದಲ ಕಾಲೇಜ್ ಆಗಿದೆ.

1898 ಸೋದರಿ ನಿವೇದಿತಾ ಅವರು ಹೆಣ್ಣು ಮಕ್ಕಳ ಶಾಲೆಯನ್ನು ತೆರೆದು, ಶಿಕ್ಷಣವನ್ನು ಹೆಣ್ಣು ಮಕ್ಕಳಿಗೆ ನೀಡಿದರು.

2.06.1916ರಲ್ಲಿ ಎಸ್.ಎನ್.ಡಿ.ಟಿ ಎಂಬ ಮಹಿಳಾ ವಿಶ್ವವಿದ್ಯಾಲಯವನ್ನು ತೆರೆಯಲಾಯಿತು.

ಡಾ. ಅಸೀಮಾ ಚಟರ್ಜಿಯವರು ಮೊದಲ ಬಾರಿಗೆ 1944ರಲ್ಲಿ ಇಂಡಿಯನ್ ವಿಶ್ವವಿದ್ಯಾಲಯದಿಂದ ಡಾಕ್ಟರ್ ಆಫ್ ಸೈನ್ಸ್ ಪದವಿಯನ್ನು ಪಡೆದವರು. ಇವರು ಆರ್ಗ್ಯಾನಿಕ್ ಕೆಮಿಸ್ಟ್ರಿಯನ್ನು ಓದಿದವರು ಹಾಗೂ ಕ್ಯಾನ್ಸರ್ ವಿಷಯದಲ್ಲಿ ಅದಕ್ಕೆ ಔಷಧಿ ತಯಾರಿಕೆಯಲ್ಲಿ ಸಂಶೋಧನೆ ನಡೆಸಿದವರು. ಇದಕ್ಕೆ ಹೊರತಾಗಿ ಇವರು ಕೋಲ್ಕತಾ ವಿಶ್ವವಿದ್ಯಾಲಯದಲ್ಲಿ ರಸಾಯನಶಾಸ್ತ್ರ ಪಾಠವನ್ನು ವಿದ್ಯಾರ್ಥಿಗಳಿಗೆ ಮಾಡುತ್ತಾ ಅವರಿಗೆ ಪ್ರೇರಕ ಶಕ್ತಿಯಾಗಿದ್ದರು.

ಸ್ವಾತಂತ್ರ್ಯಾನಂತರದ ಭಾರತದಲ್ಲಿ ಸ್ತ್ರೀ

ಸ್ವಾತಂತ್ರ್ಯೋತ್ತರದಲ್ಲಿ ಮಹಿಳೆಯರ ಶೈಕ್ಷಣಿಕ ಪರಿಸ್ಥಿತಿ ಉತ್ತಮವಾಗಿರಲಿಲ್ಲ ಎಂಬುದು ಎಲ್ಲರಿಗೂ ತಿಳಿದ ಅಂಶ. ಸ್ವಾತಂತ್ರಪೂರ್ವದಿಂದ ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಮಹಿಳೆಯರು ಮಹಿಳೆಯರ ಶಿಕ್ಷಣ ಕ್ಕಾಗಿ ಹೋರಾಡಿದ್ದಾರೆ.

ಆನಿಬೆಸೆಂಟ್ರವರು ಥಿಯೋಸೋಫಿಕಲ್ ಸೊಸೈಟಿಯ ಮುಖ್ಯಸ್ಥರು, ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕಾರಣಕರ್ತರಲ್ಲಿ ಇವರೂ ಕೂಡಾ ಒಬ್ಬರು. ಮೇಡಂ ಕಾಮಾ, ಮಹಾರಾಷ್ಟ್ರದ ದುರ್ಗಾಬಾಯಿ ದೇಶಮುಖ್ರವರೂ ಕೂಡಾ ಮಹಿಳೆಯರ ಹಾಗೂ ಹಿಂದುಳಿದ ಮಹಿಳೆಯರ ಶಿಕ್ಷಣಕ್ಕಾಗಿ ಹೋರಾಡಿದವರು. ಸ್ವತ: ಸ್ನಾತಕರಾದ ಅರುಣಾ ಅಸಫ್ ಅಲಿ ಹಾಗೂ

CC-0. Nepal Sanskrit Academy, Kathmandu Collection

ಮುಂತಾದ ಅನೇಕ ಸ್ವಾಂತಂತ್ರ್ಯ ಹೋರಾಟಗಾರ್ತಿಯರು ಕೂಡಾ ಮಹಿಳೆಯರ ವಿಷಯವಾಗಿ ಅವರ ಶಿಕ್ಷಣಕ್ಕಾಗಿ ಹೋರಾಡಿದ್ದಾರೆ.

ಜೈನ-ಬೌದ್ಧ-ಸಿಖ್ ಮತಗಳಲ್ಲಿನ ಸ್ತ್ರೀಯರು

ಮಾತಾ ತೃಪ್ತಾ ಗುರುನಾನಕರ ತಾಯಿ. ಇವರು ಅತ್ಯಂತ ಸಾಧ್ವಿಯಾಗಿದ್ದು ದೃಢ ಚಿತ್ತದವರಾಗಿದ್ದರು. ಗುರುನಾನಕರು ಉದರದಲ್ಲಿರುವಾಗಲೇ ಧ್ಯಾನವನ್ನು ಮಾಡುತ್ತಾ ಸಮಚಿತ್ತರಾಗಿದ್ದರು. ಹಾಗಾಗಿ ಗುರುನಾನಕರಂತಹ ಶ್ರೇಷ್ಠರನ್ನು ಪಡೆದ ಮಹಾತಾಯಿಯಾದರು. ಹಾಗೆಯೇ ಗುರುನಾನಕರ ಅಕ್ಕ ಬೇಬೆ ನಾನಕಾಜಿ ಕೂಡ ಸಿಖ್ಖರಲ್ಲಿ ಪ್ರಸಿದ್ಧರಾದವರು. ತಮ್ಮನ ಏಳ್ಗೆಯಲ್ಲಿ ಬಹುಪಾಲು ಇವರಿಗೂ ಸಲ್ಲುತ್ತದೆ.

ಬೌದ್ಧರಲ್ಲಿ ಮೊದಲು ಸ್ತ್ರೀಯರಿಗೆ ಅಧ್ಯಾತ್ಮ ಶಿಕ್ಷಣದಲ್ಲಿ ಅವಕಾಶ ನೀಡದಿದ್ದರೂ ನಂತರ ಕಾಲದಲ್ಲಿ ಬೌದ್ಧಭಿಕ್ಷುಗಳಾಗಿ ಸಾಧನೆ ಮಾಡಲು ಅವಕಾಶ ನೀಡಲಾಯಿತು. ಥೇರೀಗಾಥಾ ಗಳನ್ನು ಸ್ತ್ರೀಯರೂ ರಚಿಸುತ್ತಿದ್ದರು ಹಾಗೂ ಭದ್ರ (ಯಶೋಧರಾ), ಧರ್ಮದೀನಾ, ಗೌತಮೀ ಮುಂತಾದ ಬುದ್ಧತತ್ತ್ವಗಳನ್ನು ಅರಿತು ಸಮಾಜಕ್ಕೆ ನೀಡಿದ ಮಹಿಳೆಯರೂ ಇದ್ದಾರೆ.

ಜೈನರಲ್ಲಿ ದಾನ ಚಿಂತಾಮಣಿ ಅತ್ತಿಮಬ್ಬೆ, ಶಾಂತಲೆ, ಚೇಳಿನಿ, ಚಕ್ರೇಶ್ವರಿ, ಗುಂಡಮಬ್ಬೆ(ಅತ್ತಿಮಬ್ಬೆಯ ಅಕ್ಕ) ಮುಂತಾದವರಿದ್ದಾರೆ. ಈಗಿನ ಕಾಲದ ಪ್ರೊ. ಕಮಲಾ ಹಂಪನಾ ಅವರನ್ನು ನೋಡಬಹುದು.

ಜೀವನದ ಸಂಬಂಧಗಳಲ್ಲಿ ಶಿಕ್ಷಕಿಯಾಗಿ ಪ್ರೇರಣೆಯಾಗಿ ಸ್ತ್ರೀ

ಸ್ತ್ರೀ ಪ್ರಕೃತಿಯ ರೂಪ. ಅವಳನ್ನು ಶಿಕ್ಷಕಿಯಾಗಿ ಶಾಲೆಗಳಲ್ಲೇ ಕಾಣಬೇಕೆಂದೇನಿಲ್ಲ. ಅವಳ ವ್ಯಕ್ತಿತ್ವವೇ ಪ್ರೇರಕಶಕ್ತಿಯಾಗಿದೆ. ಅನೇಕ ವ್ಯಕ್ತಿಗಳ ಜೀವನವು ಇಂತಹ ಸ್ತ್ರೀಯರಿಂದ ರೂಪುಗೊಂಡಿವೆ. ಕೆಲವು ಮಾತ್ರ ಇಲ್ಲಿ ನಿರೂಪಿಸಬಹುದಾಗಿವೆ. ಶಿವಾಜಿಯ ತಾಯಿ ಜೀಜಾಬಾಯಿ ಶಿವಾಜಿಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವನ ಸಾಮ್ರಾಜ್ಯ ಕಟ್ಟುವ ಕನಸಲ್ಲಿ ಭಾಗಿಯಾಗಿದ್ದಾಳೆ. ಕುಂತಿ ತಾಯಿಯಾಗಿ ದ್ರೌಪದಿ ಪತ್ನಿಯಾಗಿ ಪಾಂಡವರ ಬೆನ್ನೆಲುಬಾಗಿ ನಿಂತು ಧರ್ಮಯುದ್ಧಕ್ಕೆ ಕಾರಣೀಭೂತರಾಗಿದ್ದಾರೆ. ಇಬ್ಬರೂ ದೃಢಚಿತ್ತದವರು ಹಾಗೂ ಸಮಚಿತ್ತದವರು. ಅವರ ಸ್ವಾಭಿಮಾನವೇ ಮಹಾಭಾರತದ ಅಧರ್ಮದ ವಿರುದ್ಧದ ಜಯಕ್ಕೆ ಕಾರಣವಾಯಿತು. ಶ್ರೀ ಮಾತೆ ಶಾರದಾ ದೇವಿಯಂತಹವರು ಮನುಕುಲಕ್ಕೆ ಆದರ್ಶಪ್ರಾಯರಾದ ಅಂತ:ಚಕ್ಷುವನ್ನು ತೆರೆಸುವ ಮಾತೃಸ್ವರೂಪರು. ಭಗಿನಿ ನಿವೇದಿತಾ ಸಮಾಜದ ಎಲ್ಲ ಸ್ತ್ರೀಯರಿಗೆ ತ್ಯಾಗದ ಮೂರ್ತಿಯಾಗಿ ಆದರ್ಶರಾಗಿ ಎಲ್ಲರಿಗೂ ದೇಶಸೇವೆಯನ್ನು ಸಮಾಜದ

CC-0. Nepal Sanskrit Academy, Kathmandu Collection

ಸೇವೆಯನ್ನು ನಿ:ಸ್ವಾರ್ಥವಾಗಿ ಮಾಡಲು ತೋರಿಸಿದವರು.

ವಸ್ತುತ: ಮನೆಯೇ ಮೊದಲ ಪಾಠಶಾಲೆ. ತಾಯಿಯೇ ಎಲ್ಲರಿಗೂ ಮೊದಲ ಗುರು. ಭಾರತೀಯ ಜೀವನ ಧಾರೆಯ ಮೂಲಸ್ರೋತವೇ ಪರಿವಾರವಾಗಿದೆ. ಪರಿವಾರವೇ ವ್ಯಕ್ತಿಯ ಮೊದಲ ಕಲಿಕಾ ಶಾಲೆಯಾಗಿದೆ. ಆ ಶಾಲೆಯಲ್ಲಿ ತಾಯಿಯೇ ಗುರುವು. **'ಸಹಸ್ರಂ ತು ಪಿತೃನ್ ಮಾತಾ ಗೌರವೇಣಾತಿರಿಚ್ಯತೇ'** (ಯಾಜ್ಞವಲ್ಕ್ಯ ಸ್ಮೃತಿ). ಹೀಗಾಗಿ ಮಾತೃಪ್ರಧಾನವಾದ ನಮ್ಮ ಸಮಾಜದಲ್ಲಿಮಗುವಿನ ಸಂಸ್ಕಾರವನ್ನು ನೀಡಿದುದರಿಂದ ಅದರ ಸರ್ವತೋಮುಖವಿಕಸನ ಕುಟುಂಬದಲ್ಲಿಯೇ ಆಗುತ್ತಿತ್ತು.

ಭಕ್ತಿಪಂಥದ/ಸಂತರಾಗಿ ಪ್ರೇರಣೆ ನೀಡಿದ ಸ್ತ್ರೀಯರು

ಅಕ್ಕಮಹಾದೇವೀ, ಮೀರಾಬಾಯಿ, ಹೆಳವನ ಕಟ್ಟೆಗಿರಿಯಮ್ಮ, ಶ್ರೀಶಾರದಾ ದೇವೀ, ರಾಣಿ ರಾಸಮಣಿ, ಮಹಾರಾಷ್ಟ್ರದ ಮುಕ್ತಾ ಬಾಯಿ ಹಾಗೂ ಜನಾಬಾಯಿ, ತಮಿಳುನಾಡಿನ ಆಂಡಾಳ್ ಮುಂತಾದ ಸಂತ ಸ್ತ್ರೀಯರು ಸಮಾಜವನ್ನು ಮೌಢ್ಯದಿಂದ ತಿದ್ದುವ ಕಾರ್ಯವನ್ನು ಮಾಡಿದ್ದಾರೆ. ದ್ವೈತ ಅದ್ವೈತದಂತಹ ಮತಸ್ಥಾಪನೆಯನ್ನು ಮಾಡಿದ ಮಹಿಳೆಯರು ಇತಿಹಾಸದಲ್ಲಿ ಇಲ್ಲದಿರಬಹುದು. ಆದರೆ ಅಂತಹ ಕಾರ್ಯವನ್ನು ಮಾಡಿದ ಆಚಾರ್ಯರಿಗೆ ಮಹಾತಾಯಿಯಾಗಿ ಪ್ರೇರಣೆ ಹಾಗೂ ಸಂಸ್ಕಾರವನ್ನು ನೀಡಿದ್ದಾಳೆ ಎನ್ನುವುದು ಸತ್ಯ. ಒಂದು ಚೌಕಟ್ಟಿನಲ್ಲಿ ನೀಡುವ ಶಿಕ್ಷಣಕ್ಕಿಂತ ಜೀವನ ಶಿಕ್ಷಣವು ಅತ್ಯಂತ ಪ್ರಮುಖವಾದುದು. ಇಂತಹ ಜ್ಞಾನವನ್ನು ಸಮಾಜಕ್ಕೆ ನೀಡಿದ ಈ ವೈರಾಗ್ಯರೂಪಿಣಿಯರು ನಿಜಕ್ಕೂ ಧನ್ಯರು.

ಇದಷ್ಟೇ ಅಲ್ಲದೇ ಸಂಗೀತ, ಭರತನಾಟ್ಯ, ಯಕ್ಷಗಾನ, ಚಿತ್ರಕಲೆ ಮುಂತಾದ ಕಲೆಗಳನ್ನು, ರಕ್ಷಿಸಿ ಪೋಷಿಸಿ ಕಾಲ ಕಾಲಕ್ಕೆ ಹೊಸರೂಪಗಳನ್ನು ನೀಡಿದ ಕಲಾವಂತ ಮಹಿಳೆಯರು ಅನೇಕಾನೇಕರಿದ್ದಾರೆ. ಕಲೆಯೇ ಸ್ತ್ರೀ ಸೌಂದರ್ಯದ ಪ್ರತೀಕ. ಇಂತಹ ಕಲೆಗಳನ್ನು ಪರಂಪರೆಯಿಂದ ಉಳಿಸಿ ಬೆಳೆಸುವ ಮಹತ್ಕಾರ್ಯವನ್ನು ಸ್ತ್ರೀಯರು ಮಾಡುತ್ತಿದ್ದಾರೆ.

ವೈಜ್ಞಾನಿಕ, ಸಾಮಾಜಿಕ, ಮಾಹಿತಿ ತಂತ್ರಜ್ಞಾನ ಆಧಾರಿತ ಮುಂತಾದ ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀಯರು ಅಧ್ಯಾಪಕರಾಗಿ ಸಂಶೋಧಕರಾಗಿ ಸಾಧನೆಯನ್ನು ಮಾಡಿದ್ದಾರೆ. ಮುಂದಿನ ಪೀಳಿಗೆಯನ್ನು ಅವರ ಹಾದಿಯಲ್ಲಿ ಬೆಳೆಸುತ್ತಿದ್ದಾರೆ. ಭಾರತದ ಎಲ್ಲ ಶಿಕ್ಷಣ ಕ್ಷೇತ್ರದಲ್ಲಿ ತಜ್ಞರಾದ ಎಲ್ಲರೂ ಇದಕ್ಕೆ ಉದಾಹರಣೆ.

ಭಾರತೀಯ ಸಂಸ್ಕಾರದ ಜೀವಾಳದಲ್ಲೇ ಜ್ಞಾನದ ಹರಿವು ಇದೆ. ಅದು ಸ್ತ್ರೀ ಪುರುಷ ಎಂಬ ಭೇದವಿಲ್ಲದ ಅಂತರಂಗದ ಜ್ಞಾನ. ಇದು ಇಲ್ಲಿ

CC-0. Nepal Sanskrit Academy, Kathmandu Collection

ಜನಿಸುವ ಪ್ರತಿವ್ಯಕ್ತಿಗೂ ಸಹಜವಾಗಿಯೇ ಬರುತ್ತದೆ. ಒಂದು ಕಾಲಘಟ್ಟದಲ್ಲಿ ಬಾಹ್ಯರ ಆಕ್ರಮಣದಿಂದ ಬೆಂದ ಭಾರತದಲ್ಲಿ ರಕ್ಷಣೆಗಾಗಿಯೋ ಇನ್ನಿತರ ಕಾರಣಗಳಿಂದಲೋ ಒಂದಷ್ಟು ಕಾಲಾಂಶ ಸ್ತ್ರೀ ಶಿಕ್ಷಣದಿಂದ ವಂಚಿತರಾಗಿದ್ದರೂ ಕೂಡಾ ಮನೆಯಲ್ಲಿ, ಕುಟುಂಬದಲ್ಲಿ ವ್ಯಕ್ತಿತ್ವ ಕಟ್ಟುವಲ್ಲಿ ಅವಳ ಜ್ಞಾನದ ವಿನಿಮಯ ನಿರಂತರವಾಗಿ ಸಾಗಿಯೇ ಇತ್ತು. ಒಂದಂಶವಂತೂ ನಿಜ – ಭಾರತವು ಅನೇಕ ಅನೇಕ ಆಕ್ರಮಣಗಳಿಗೆ ತುತ್ತಾದರೂ, ಅನೇಕ ಆಂತರಿಕ ಜಂಜಡಗಳಿದ್ದರೂ, ಹೋರಾಟಗಳಿದ್ದರೂ ಭಾರತವು ಏಕವಾಗಿದೆ ಎಂದರೆ ಅದು ಸ್ತ್ರೀಯರು, ನಮ್ಮ ಮಾತೆಯರ ತ್ಯಾಗದಿಂದ ಸಂಸ್ಕಾರ ಧಾರೆಯಿಂದ. ಈ ನಿರುಪಮ ಕೊಡುಗೆಯನ್ನು ನೀಡುವ ಪ್ರತಿಯೋರ್ವ ಮಹಿಳೆಯೂ ಶಿಕ್ಷಕಿಯೇ.

❀ ❀ ❀

CC-0. Nepal Sanskrit Academy, Kathmandu Collection

ಇಂದಿನ ಶಿಕ್ಷಣಕ್ಕೆ ಕಾಯಕಲ್ಪ: ಏಕೆ? ಹೇಗೆ?

✍ ರೋಹಿತ್ ಚಕ್ರತೀರ್ಥ
ಲೇಖಕರು, ಬೆಂಗಳೂರು

ನಾವು ನಮ್ಮ ಚಿಂತನೆಯಲ್ಲಿ, ಶಿಕ್ಷಣ ಕ್ರಮದಲ್ಲಿ, ನೌಕರಿಯಲ್ಲಿ; ಸೃಷ್ಟಿಶೀಲ ಎಂದು ಹೇಳುವ ಸಾಹಿತ್ಯ, ಕಲೆಯ ಸೃಷ್ಟಿಕಾರ್ಯದಲ್ಲಿ; ಜೀವನಶೈಲಿಯಲ್ಲಿ – ಹೀಗೆ ಇಡಿಯ ಜೀವನಕ್ರಮದಲ್ಲೇ ಪಾಶ್ಚಾತ್ಯ ಮಾರ್ಗಗಳ ಅನುಕರಣೆ ಮಾಡಲು ತೊಡಗಿದ್ದೇವೆ. ಇವೆಲ್ಲವುಗಳಿಂದ ಹೊರಬರಬೇಕು – ಎಂಬ ಒಂದು ಎಚ್ಚರ ಕೆಲ ವರ್ಷಗಳ ಹಿಂದೆ ಕಾಣಿಸಿಕೊಂಡಿತು. ಮೆಕಾಲೆ ನಮಗೆ ಮೋಸ ಮಾಡಿದ್ದಾನೆ; ನಮ್ಮದೆಂಬ ಎಲ್ಲವೂ ನಮಗೇ ಮರೆತುಹೋಗುವಂತೆ ನಮ್ಮ ತಲೆ ಸವರಿದ್ದಾನೆ ಎಂಬ ಭಾವ ಹುಟ್ಟಿತು. ನಾವೊಂದು ದೊಡ್ಡ ವಿಸ್ಮೃತಿಗೆ ಒಳಗಾಗಿದ್ದೇವೆ; ಈ ಮೈಮರೆವಿನ ಪೊರೆ ಕಳಚಿಕೊಂಡು ಹೊರಬರಬೇಕು ಎಂಬ ಜಾಗೃತಿ ಎಲ್ಲೆಡೆ ಹಬ್ಬಿತು. ಇದೆಲ್ಲ ಆದದ್ದು ಬಹುಶಃ ಮೂವತ್ತೈದು ವರ್ಷಗಳ ಕೆಳಗೆ. ಧರ್ಮಪಾಲರು 1983ರಲ್ಲಿ ವಿದ ಬ್ಯೂಟಿಫುಲ್ ಟ್ರೀಹಿ ಕೃತಿಯನ್ನು ಪ್ರಕಟಿಸಿದ ಮೇಲೆ.

ನಾವು ಏನನ್ನೋ ಕಳೆದುಕೊಂಡಿದ್ದೇವೆ ಎಂಬುದೇನೋ ನಮಗೆ ಗೊತ್ತಿತ್ತು. ಆದರೆ ಅದನ್ನು ಮರಳಿ ಪಡೆಯುವ ವಿಧಾನ ತಿಳಿದಿರಲಿಲ್ಲ. ಉದಾಹರಣೆಗೆ, ಭಾರತೀಯರಾದ ನಾವು ಇಂಗ್ಲೀಷ್ ಶಿಕ್ಷಣ ಪಡೆದ ಮೇಲೆ ನಮ್ಮದೇ ನೆಲದ ಭಾಷೆಯಾದ ಸಂಸ್ಕೃತದಿಂದ ವಿಮುಖರಾದೆವು ಎಂಬ ದುಃಖ ನಮಗೆ ಇದ್ದದ್ದು ನಿಜ. ಆದರೆ ಸಂಸ್ಕೃತವನ್ನು ನಮ್ಮ ಪ್ರಸ್ತುತ ತಲೆಮಾರಿಗೆ ಒಗ್ಗಿಸಿಕೊಳ್ಳುವ ಬಗೆ ತಿಳಿದಿರಲಿಲ್ಲ. ವಿಜ್ಞಾನ ತಂತ್ರಜ್ಞಾನಗಳ ಮಾತು ಬಿಡಿ, ಸಾಹಿತ್ಯದಲ್ಲಿ ಕೂಡ ನಮಗೆ ಸಂಸ್ಕೃತವನ್ನು ಸಮಕಾಲೀನ ಸನ್ನಿವೇಶಗಳಿಗೆ ಪ್ರಸ್ತುತವಾಗಿಸುವುದು ಹೇಗೆ ಎಂಬುದು ತಿಳಿಯಲಿಲ್ಲ. ಶೇಕ್ಸ್‌ಪಿಯರ್ ನಮಗೆ ಪ್ರಸ್ತುತನಾದಂತೆ ಕಾಳಿದಾಸ, ಭಾಸ, ಭಾರವಿಗಳು ಆಗಲಿಲ್ಲ. ಇಂಗ್ಲೀಷಿನ ಬದಲು ಹಠಕ್ಕಾದರೂ ಸಂಸ್ಕೃತ ಕಲಿಯಬೇಕು ಎಂದು ಹೊರಟು ಆ ಕವಿಗಳನ್ನೆಲ್ಲ ಓದಿಕೊಳ್ಳಬೇಕಾಗಿತ್ತೇ ಹೊರತು ಉದ್ಯೋಗದ ಭದ್ರತೆ ಒದಗಿಸಲು ಅಥವಾ ಧೈರ್ಯದಿಂದ ಇಂಗ್ಲೀಷ್‌ನಲ್ಲಿ ವ್ಯವಹರಿಸಲು ಶೇಕ್ಸ್‌ಪಿಯರ್ ಸಹಾಯ ಮಾಡಿದಂತೆ ನಮಗೆ ನಮ್ಮ ಸಂಸ್ಕೃತ ಕವಿಗಳು ಉಪಯೋಗಕ್ಕೆ ಬರಲಿಲ್ಲ.

CC-0. Nepal Sanskrit Academy, Kathmandu Collection

ಮೆಕಾಲೆಯ ಸರಪಳಿಯಲ್ಲಿ ಬಂಧಿತರಾಗಿದ್ದೇವೆ ಎಂದು ಗೊತ್ತಾದರೂ ನಮಗೆ ಆ ಬಂಧನದಿಂದ ಹೊರಬಂದು ಸ್ವತಂತ್ರರಾಗುವ ಬಗೆ ತಿಳಿಯಲಿಲ್ಲ.

ಆಗ ನಾವು ಎರಡನೇ ಮಾರ್ಗಕ್ಕೆ ನಿಧಾನವಾಗಿ ಹೊರಳಿಕೊಂಡೆವು. ಅದೇನೆಂದರೆ, ಸಂಸ್ಕೃತ ಅಥವಾ ಭಾರತೀಯವಾದ ಯಾವುದೇ ಸಾಹಿತ್ಯ ಮತ್ತು ಜ್ಞಾನ, ನಮ್ಮ ಈಗಿನ ದಿನಗಳಿಗೂ ಪ್ರಸ್ತುತವಾಗಿವೆ ಎಂದು ತೋರಿಸಿಕೊಳ್ಳುವ ಹಠ, ಹಠಕ್ಕಿಂತಲೂ ಹೆಚ್ಚು ತೆವಲು ಹುಟ್ಟಿದ್ದು ಆಗ. ಭಾರತದಲ್ಲಿ ಎಲ್ಲವೂ ಇದೆ ಎಂಬ ಅತಿಯಿಂದ ಹೊರಟ ಈ ಮಾದರಿಯಲ್ಲಿ ಇದ್ದ ಅಪಾಯಗಳು ಒಂದೆರಡಲ್ಲ. ಭಾರತದಲ್ಲಿ ಲೋಹಶಾಸ್ತ್ರ ಇತ್ತು, ಯುದ್ಧಗಳಲ್ಲಿ ಬಾಂಬು ತಯಾರಿಸುವುದು ಗೊತ್ತಿತ್ತು, ಭಾರತೀಯರು ಪರಮಾಣು ವಿಜ್ಞಾನ ತಿಳಿದಿದ್ದರು, ವೈದ್ಯಶಾಸ್ತ್ರದ ಎಲ್ಲವೂ ನಮ್ಮಲ್ಲಿತ್ತು, ಪ್ಲಾಸ್ಟಿಕ್ ಸರ್ಜರಿ ಮಾಡುತ್ತಿದ್ದರು. ಹೀಗೆ ಪ್ರಪಂಚದಲ್ಲಿ ಈಗ ಕಾಣುವ ಎಲ್ಲ ಆಧುನಿಕ ಸಂಗತಿಗಳೂ ಆ ಕಾಲದಲ್ಲಿ ಭಾರತದಲ್ಲಿ ಇದ್ದವು ಎಂದು ಹೇಳಲು ಪ್ರಾರಂಭಿಸಿಬಿಟ್ಟೆವು. ಭಾರತದಲ್ಲಿ ಏನೇನೂ ಇರಲಿಲ್ಲ; ಇದೊಂದು ಕಾಡುಜನರ ಬೀಡಾಗಿತ್ತು; ಇಲ್ಲಿಗೆ ಸಂಸ್ಕೃತಿಯನ್ನು ಪರಿಚಯಿಸಿದ್ದೇ ಹೊರಗಿನವರು ಎಂದು ಹೇಳುವ ಎಡಪಂಥದ ಚಿಂತನೆಗೆ ಟಾಂಗು ಕೊಡಲು ನಾವು ಇಂಥದೊಂದು ಅತಿಯಿಂದ ಹೊರಡಬೇಕಾದ್ದು ಅನಿವಾರ್ಯವಾಗಿತ್ತೋ, ಅಥವಾ ಅದು ನಮ್ಮ ಅಜ್ಞಾನವೇ ಆಗಿತ್ತೋ – ಅದು ಮತ್ತೊಂದು ದೊಡ್ಡ ಚರ್ಚೆಯ ವಿಷಯ. ಆದರೆ ಸದ್ಯಕ್ಕೆ, ನಾವು, ಪಾಶ್ಚಾತ್ಯ ಚಿಂತನಕ್ರಮದಿಂದ ನಮ್ಮನ್ನು ಬಿಡುಗಡೆಗೊಳಿಸಿಕೊಳ್ಳಲು ಮಾಡಿದ ಒಂದು ಯತ್ನ ಎಂಬಷ್ಟಕ್ಕೇ ಅದನ್ನೆಲ್ಲ ನೋಡಬೇಕಾಗಿದೆ.

ಪಾಶ್ಚಾತ್ಯ ಶಿಕ್ಷಣ ಕ್ರಮದಲ್ಲಿ ದೋಷವಿದೆ ಎಂದು ನಾವು ಗುರುತಿಸಿದ್ದೇ ನಮ್ಮ ಮೊತ್ತಮೊದಲ ಬಹು ದೊಡ್ಡ ಸಾಧನೆ. ಕೆರೆಯಲ್ಲಿದ್ದ ಕಪ್ಪೆಯನ್ನು ತಂದು ಬಾವಿಯೊಳಗೆ ಬಿಟ್ಟಾಗ, ಅದು ಬಾವಿಯಿಂದ ಹೊರಬಂದು ಮತ್ತೆ ಕೆರೆಗೆ ಹೋಗುವ ಕೆಲಸವನ್ನೇನೋ ಮಾಡಬೇಕೆನ್ನಿ. ಆದರೆ ಮೊದಲು ಅದಕ್ಕೆ ತಾನು ಕೆರೆಯಲ್ಲಿಲ್ಲ, ನಾಲ್ಕು ಸುತ್ತ ಗೋಡೆ ಕಟ್ಟಿರುವ ಕೂಪದೊಳಗಿದ್ದೇನೆ ಎಂಬ ಜ್ಞಾನ ಹುಟ್ಟಬೇಕಲ್ಲ? ಹಾಗೆ, ಪಾಶ್ಚಾತ್ಯ ಚಿಂತನಕ್ರಮದ ಬಂಧನದಿಂದ ಬಿಡಿಸಿಕೊಂಡು ಭಾರತೀಯ ಚಿಂತನಕ್ರಮ ರೂಪಿಸಿಕೊಳ್ಳುವುದಕ್ಕೂ ಮೊದಲು ನಮಗೆ ನಾವು ಪಶ್ಚಿಮಬುದ್ಧಿಗಳಾಗಿದ್ದೇವೆ ಎಂಬ ತಿಳಿವಳಿಕೆಯಾದರೂ ಮೂಡಬೇಕಲ್ಲ? ಅಂಥದೊಂದು ತಿಳಿವಳಿಕೆ ಹುಟ್ಟಲು ನಮಗೆ ಸಹಾಯ ಮಾಡಿದ್ದು ಧರ್ಮಪಾಲ್, ರಾಮ್‌ಸ್ವರೂಪ್, ಸೀತಾರಾಮ ಗೋಯಲ್, ರಾಜೀವ್ ಮಲ್ಹೋತ್ರಾ ಮುಂತಾದವರ ಬರಹಗಳು. ಅವು ನಮ್ಮ ಸುತ್ತ ಕಟ್ಟಿದ್ದ ಗೋಡೆಯ ಪರಿಚಯ ಮಾಡಿಕೊಟ್ಟವು. ಆ ಗೋಡೆಯ ನಡುವೆ ಎಲ್ಲೋ

CC-0. Nepal Sanskrit Academy, Kathmandu Collection

ಸಂದಿಯಲ್ಲಿ ದಾರಿ ಹುಡುಕಿ ಹೊರಬರಬೇಕಾದ ಜವಾಬ್ದಾರಿ ಮಾತ್ರ ಪೂರ್ತಿ ನಮ್ಮದೇ ಆಗಿತ್ತು, ಆಗಿದೆ.

ಪಾಶ್ಚಾತ್ಯ ಚಿಂತನೆಯನ್ನು ವಿರೋಧಿಸುವ ಕೆಲಸ ಪ್ರಾರಂಭಿಸಿದಾಗ ನಾವು ತುಳಿದ ಕೆಲವು ಹೆಜ್ಜೆಗಳನ್ನು ಗಮನಿಸಬೇಕು. ಅವು:

(1) ಪಾಶ್ಚಾತ್ಯ ಜಗತ್ತಿನಲ್ಲಿ ಏನೇನು ಸಾಧನೆಗಳಾಗಿವೆಯೋ ಆ ಎಲ್ಲದರ ಪಡಿಯಚ್ಚು ಎನ್ನಬಹುದಾದ ಕೆಲಸಗಳು ನಮ್ಮ ದೇಶದಲ್ಲಿ ಹಿಂದೆ ಆಗಿದ್ದವು – ಎಂದು ವಾದಿಸುವುದು.

(2) ನಮ್ಮ ಎಲ್ಲ ಜ್ಞಾನವೂ ವೇದಗಳಲ್ಲಿದೆ ಎಂದು ನಂಬುವುದು. ಕೆಲವು ಶಬ್ದಗಳು ವೇದಗಳಲ್ಲಿ ಬಂದಿವೆ ಎಂದ ಮಾತ್ರಕ್ಕೆ ಆ ಶಬ್ದಗಳಿಗೆ ಈಗ ನಾವು ಕೊಟ್ಟಿರುವ ಅರ್ಥಗಳೇ ಆಗಲೂ ಇದ್ದವು ಎಂದು ಭಾವಿಸುವುದು. ಮತ್ತು ಆ ಶಬ್ದಗಳ ಬಗ್ಗೆ ಸಂಪೂರ್ಣ ಜ್ಞಾನ ನಮಗಿತ್ತು ಎಂದುಕೊಳ್ಳುವುದು.

(3) ಪಾಶ್ಚಾತ್ಯ ದೇಶಗಳಿಂದ ಬಂದದ್ದೆಲ್ಲವನ್ನೂ ಸಂಶಯದಿಂದ ನೋಡಬೇಕು, ಧಿಕ್ಕರಿಸಬೇಕು ಎಂಬ ಮನಸ್ಥಿತಿ ಬೆಳೆಸಿಕೊಳ್ಳುವುದು.

(4) ಪಾಶ್ಚಾತ್ಯ ಜ್ಞಾನಕ್ಕೆ ಅದರದ್ದೇ ಭಾಷೆಯಲ್ಲಿ ಮತ್ತು ವಿಧಾನದಲ್ಲಿ ಪ್ರತ್ಯುತ್ತರ ಕೊಡಬೇಕು ಎಂದು ಭಾವಿಸುವುದು.

ಈ ಬಗೆಯ ಆಲೋಚನಾ ಕ್ರಮ ಬೆಳೆಸಿಕೊಂಡದ್ದರಿಂದ ನಾವು ನಮ್ಮದೆಲ್ಲವೂ ಶ್ರೇಷ್ಠ ಎಂದು ಬಿಂಬಿಸಿಕೊಳ್ಳಲು ಪ್ರಾರಂಭಿಸಿದೆವು. ಸಂಸ್ಕೃತವನ್ನು ಗಣಕಕ್ಕೆ ಅತ್ಯಂತ ಸುಲಭವಾಗಿ ಹೊಂದಿಸಬಹುದು ಎಂದೆವು. ಜಗತ್ತಿನಲ್ಲೇ ಅತಿ ಹೆಚ್ಚು ಕಂಪ್ಯೂಟರ್ ಇಂಜಿನಿಯರ್‌ಗಳನ್ನು ಪ್ರತಿ ವರ್ಷ ಉತ್ಪಾದಿಸುವ ರಾಷ್ಟ್ರವಾದ ನಮ್ಮಲ್ಲಿ ಇನ್ನೂ ನಾವೆಲ್ಲ ಮೈಕ್ರೋಸಾಫ್ಟ್ ವಿಂಡೋಸ್ ಹಾಕಿಕೊಂಡೇ ಕೆಲಸ ತೆಗೆಯುತ್ತಿದ್ದೇವೆ. ಆಯುರ್ವೇದದ ಬಗ್ಗೆ ಗರ್ವ ಪಡಬೇಕು ಎನ್ನುವ ಈ ದೇಶದಲ್ಲಿ ಆಯುರ್ವೇದದಲ್ಲಿ ಡಿಗ್ರಿ ಪಡೆದು ನಂತರ ಆಲೋಪತಿ ಪ್ರಾಕ್ಟೀಸ್ ಮಾಡುವ ವೈದ್ಯರ ಸಂಖ್ಯೆ ಲಕ್ಷಗಳಲ್ಲಿದೆ. ನಮ್ಮ ಇತಿಹಾಸ ಪ್ರಜ್ಞೆಯ ಬಗ್ಗೆ ಹೆಮ್ಮೆ ಪಡುವ ನಮಗೆ ನಮ್ಮ ದೇಶದಲ್ಲಿ ನಶಿಸಿಹೋದ ನಳಂದದಂಥ ವಿಶ್ವವಿದ್ಯಾಲಯಗಳನ್ನು ಪುನರುತ್ಥಾನ ಮಾಡಲು ಸಾಧ್ಯವಾಗಲಿಲ್ಲ. ನಮ್ಮ ಸಾವಿರಾರು ದೇವಸ್ಥಾನಗಳು ಜರಾಜೀರ್ಣ ಸ್ಥಿತಿಯಲ್ಲಿವೆ. ಆಧುನಿಕ ಎನ್ನುವ ಯಾವ ಕಟ್ಟಡಗಳಲ್ಲೂ ನಾವು ಭಾರತೀಯ ಎನ್ನಬಹುದಾದ ತಂತ್ರಜ್ಞಾನವನ್ನಾಗಲೀ ವಾಸ್ತು ಸೌಂದರ್ಯವನ್ನಾಗಲೀ ಬಳಸಿಲ್ಲ. 4000 ವರ್ಷಗಳ ಹಿಂದೆಯೇ ನಮಗೆ ಲೋಹಶಾಸ್ತ್ರ ತಿಳಿದಿತ್ತು; ಡಮಾಸ್ಕಸ್ ಕತ್ತಿಗೆ ಬೇಕಾದ ಲೋಹ ಕೊಡುತ್ತಿದ್ದವರು ನಾವೇ ಎನ್ನುವ ನಮಗೆ ಯಾವ ಕಾಲೇಜಿನಲ್ಲೂ ಭಾರತೀಯ ಲೋಹಶಾಸ್ತ್ರ (ಮೆಟಲರ್ಜಿ) ಹೇಗಿತ್ತು ಎಂಬುದನ್ನು ಕಲಿಸುವುದಿಲ್ಲ. ನಮ್ಮ ಎಲ್ಲ ಆಧುನಿಕ

CC-0. Nepal Sanskrit Academy, Kathmandu Collection

ಉಪಕರಣಗಳು, ಯಂತ್ರಗಳು ಬರುತ್ತಿರುವುದು ಜರ್ಮನಿ, ಇಂಗ್ಲೆಂಡ್, ಜಪಾನ್, ಅಮೆರಿಕಗಳಿಂದ. ಭಾರತದಲ್ಲಿ ಅರ್ಥಶಾಸ್ತ್ರ ಹುಟ್ಟಿತು ಎನ್ನುತ್ತೇವೆ; ನಮ್ಮವರು ಒಬ್ಬರೂ ಅರ್ಥಶಾಸ್ತ್ರದ ನೊಬೆಲ್ ಪಡೆಯಲಿಲ್ಲ. ಅಮರ್ತ್ಯ ಸೇನ್ ಕೂಡ ಭಾರತದ ಅರ್ಥಶಾಸ್ತ್ರಕ್ಕೆ ಕೊಟ್ಟ ಕೊಡುಗೆಗೆ ಪ್ರಶಸ್ತಿ ಪಡೆದವರಲ್ಲ. ಹಾಗಾದರೆ ಸಮಸ್ಯೆ ಎಲ್ಲಿದೆ? ನಾವು ಗಂಭೀರವಾಗಿ ಯೋಚಿಸಬೇಕು ತಾನೆ?

ವಿವಿಧ ಕ್ಷೇತ್ರಗಳ ಜನರಲ್ಲಿ ಭಾರತದ ಬಗ್ಗೆ ಹೆಮ್ಮೆ ಮೂಡಿಸುವುದು ಹೇಗೆ ಎಂಬ ದೊಡ್ಡ ಚರ್ಚೆಯನ್ನು ಪಕ್ಕಕ್ಕಿಟ್ಟು ಶಿಕ್ಷಣ ವ್ಯವಸ್ಥೆಯಲ್ಲಿ ಬರಬೇಕಾದ, ತರಬೇಕಾದ ಬದಲಾವಣೆಗಳ ಕುರಿತಷ್ಟೇ ನಮ್ಮ ಚರ್ಚೆಯನ್ನು ಸೀಮಿತಗೊಳಿಸೋಣ. ಎಲ್ಲ ಸಮಸ್ಯೆಗಳ ತಾಯಿಬೇರು ಶಿಕ್ಷಣ ಕ್ಷೇತ್ರದಲ್ಲಿದೆ ಎಂಬ ಹೇಳಿಕೆ ತುಂಬ ಜನರಲೈಸ್ಡ್ (ಸಾಮಾನ್ಯೀಕರಿಸಿದ ಹೇಳಿಕೆ) ಅನ್ನಿಸಿದರೂ ಪೂರ್ಣ ತಪ್ಪು ಹೇಳಿಕೆ ಏನೂ ಅಲ್ಲ. ಪಶ್ಚಿಮಬುದ್ಧಿಗಳಾಗಿರುವ ನಾವು ನಮ್ಮ ದೇಶದೊಳಗನ್ನೂ ಸ್ವಲ್ಪ ನೋಡಬೇಕು ಎಂದಾದರೆ ಆ ಶಿಕ್ಷಣ ಶಾಲೆಗಳಲ್ಲೇ ಆಗಬೇಕು. ಈಗಿನ ಶಿಕ್ಷಣ ಪದ್ಧತಿಯನ್ನು ಬದಲಿಸಿ ಭಾರತಕೇಂದ್ರಿತ ಶಿಕ್ಷಣ ಕೊಡಬೇಕಾದರೆ, ಅದನ್ನು ಮೂರು ರೀತಿಯಲ್ಲಿ ಮಾಡಬಹುದು. ಮೊದಲನೆಯದು: ಈಗಿರುವ ಪಠ್ಯಕ್ರಮದಲ್ಲೇ ಅಲ್ಲಲ್ಲಿ ಭಾರತಕ್ಕೆ ಸಂಬಂಧಿಸಿದ ಮಾಹಿತಿ, ಚಿತ್ರ ಕೊಡುವುದು. ಭಾರತೀಯ ವಿಜ್ಞಾನಿಗಳ, ಸಾಧಕರ, ಗಣಿತಜ್ಞರ ಮಾಹಿತಿ ತುಂಬುವುದು. ನಮ್ಮ ದೇಶದಲ್ಲೂ ಹೀಗೆಲ್ಲ ಇತ್ತು ಎಂಬುದನ್ನು ತಿಳಿಹೇಳುವ ಮಾಹಿತಿಯ ಬಾಕ್ಸ್‌ಗಳನ್ನು ಪಠ್ಯದಲ್ಲಿ ಸೇರಿಸುವುದು. ಎರಡನೆಯದು: ಪಠ್ಯದೊಳಗೆ ಭಾರತೀಯವೆನ್ನಬಹುದಾದ ಸಂಗತಿಗಳ ಬಗ್ಗೆ ವಿಸ್ತೃತ ಮಾಹಿತಿ ಕೊಡುವುದು. ವಿವರಣೆ, ಉದಾಹರಣೆ ಮುಂತಾದ ಕಡೆಗಳಲ್ಲಿ ಭಾರತಕ್ಕೆ ಸಂಬಂಧಿಸಿದ ವಿಷಯಗಳು ಬರುವಂತೆ ನೋಡಿಕೊಳ್ಳುವುದು. ಪಠ್ಯದ ಮುಖ್ಯಭಾಗದಲ್ಲಿ ವಿಇಂಡಿಯನ್ ಫ್ಲೇವರ್ಹಿ ಕಾಣಿಸುವಂತೆ ಅಧ್ಯಾಯಗಳನ್ನು ತಿದ್ದಿ ಬರೆಯುವುದು. ಮೂರನೆಯದು: ಸಂಪೂರ್ಣ ಭಾರತೀಯವೇ ಆದ ಪಠ್ಯಕ್ರಮ ಬೋಧಿಸುವುದು. ಅಂದರೆ ಈಗಾಗಲೇ ನಾವು ಹಾಕಿಕೊಂಡಿರುವ ಫಿಸಿಕ್ಸ್, ಕೆಮಿಸ್ಟ್ರಿ, ಸಿವಿಕ್ಸ್, ಜಿಯಾಲಜಿ ಮುಂತಾದ ಸಿದ್ಧಸೂತ್ರಗಳು ಅಲ್ಲಿ ಇರುವುದಿಲ್ಲ. ಪ್ರಾಚೀನ ಕಾಲದಲ್ಲಿ, ಗುರುಕುಲ ಪದ್ಧತಿಯಲ್ಲಿ ವಿದ್ಯಾರ್ಥಿಗಳು ಹೇಗೆ ಕಲಿಯುತ್ತಿದ್ದರೋ, ಯಾವ ವಿಷಯಗಳನ್ನು ಅಧ್ಯಯನ ಮಾಡುತ್ತಿದ್ದರೋ ಅವುಗಳಲ್ಲಿ, ಪ್ರಸ್ತುತ ಕಾಲಕ್ಕೆ ಹೊಂದುವ ವಿಷಯಗಳನ್ನು ಎತ್ತಿಕೊಂಡು ಮಕ್ಕಳಿಗೆ ಕಲಿಸುವುದು.

ಈ ಮೂರು ವಿಧಾನಗಳಲ್ಲಿ ಮೊದಲನೆಯದ್ದು ಅಷ್ಟೇನೂ ಪ್ರಯೋಜನಕಾರಿಯಲ್ಲ. ನಾವು ಕಳೆದ ಮೂರ್ನಾಲ್ಕು ದಶಕಗಳಿಂದ ಮಾಡಿಕೊಂಡು ಬಂದಿರುವ, ಯಾವ ಗಟ್ಟಿ ಪ್ರತಿಫಲವನ್ನೂ ಕೊಡದ ಗೊಡ್ಡು

CC-0. Nepal Sanskrit Academy, Kathmandu Collection

ವಿಧಾನ ಇದು. ಈ ವಿಧಾನ ಯಾಕೆ ನಿರರ್ಥಕ ಎನ್ನುವುದನ್ನು ಒಂದು ಉದಾಹರಣೆ ಮೂಲಕ ವಿವರಿಸಿದರೆ ಅರ್ಥವಾದೀತು. ನಮ್ಮಲ್ಲಿ ಇತ್ತೀಚೆಗೆ ಪಠ್ಯಪುಸ್ತಕಗಳನ್ನು ಬರೆಯುವಾಗ, ಭಾರತೀಯತೆಯನ್ನು ಕೂಡ "ಟಚ್" ಮಾಡಿ ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಹೇಳಿದ್ದಾರೆ. ಅಂದರೆ ಪಠ್ಯದಲ್ಲಿ ಯಾವುದಾದರೂ ವಿಷಯ ಹೇಳುವಾಗ, ಭಾರತೀಯರಾದ ನಾವು ಹೆಮ್ಮೆ ಪಡುವಂಥ ಸಂಗತಿಗಳನ್ನು ಸಹ ಅಲ್ಲಲ್ಲಿ ಕೊಡಬೇಕು – ಎಂದು ಅರ್ಥ. ಅದನ್ನು ಪಠ್ಯ ಬರೆಯುವವರು ಅತ್ಯಂತ ಶಿಸ್ತುಬದ್ಧವಾಗಿ ಆಚರಣೆ ಮಾಡಿಕೊಂಡು ಬಂದಿದ್ದಾರೆ. ಯಾವುದೇ ಪಠ್ಯದಲ್ಲಿ ನಡುವೆ ಭಾರತಕ್ಕೆ ಸಂಬಂಧಿಸಿದ ವಿಚಾರ ಹೇಳಬೇಕಾದಲ್ಲೆಲ್ಲ ಆ ವಿಚಾರಗಳನ್ನು ಬಾಕ್ಸ್ ಮಾಡಿ ಕೊಟ್ಟುಬಿಡುತ್ತಾರೆ. ಇದು ಅವರಿಗೆ ಬಹಳ ಅನುಕೂಲವಾಗುವ ಸಂಗತಿ. ಭಾರತದ ಬಗ್ಗೆ ಹೇಳಿದ್ದೀರೋ? ಹೇಳಿದ್ದೇವೆ! ಹೇಗೆ ಹೇಳಿದ್ದೀರಿ? ಬಾಕ್ಸ್ ಐಟಮ್ ಮಾಡಿ ಹೇಳಿದ್ದೇವೆ! ಅಲ್ಲಿಗೆ ಹೇಳಿದಂತೆಯೂ ಆಯಿತು, ನಿಯಮ ಪಾಲನೆಯೂ ಆಯಿತು, ಪಾಠದ ಮೂಲ ಓಘಕ್ಕೆ ತಡೆ ಬರದಂತೆಯೂ ಆಯಿತು! ದುರಂತವೆಂದರೆ ನಮ್ಮ ಪಠ್ಯಪುಸ್ತಕಗಳಲ್ಲಿ ಪಾಠಗಳ ಮೂಲ ಭಾಗಗಳೆಲ್ಲವೂ ಇನ್ನೂ 20–30 ವರ್ಷಗಳ ಹಿಂದೆ ಹೇಗೆ ಬರೆಯಲ್ಪಟ್ಟಿದ್ದವೋ ಹಾಗೆಯೇ ಇವೆ. ಪಾಠಗಳಲ್ಲಿ ಅಲ್ಲಲ್ಲಿ ಬಾಕ್ಸ್ ಐಟಮ್‌ಗಳಾಗಿ ಭಾರತಕ್ಕೆ ಸಂಬಂಧಿಸಿದ ವಿಷಯಗಳನ್ನು ತುರುಕಿರುವುದರಿಂದ, ಅದು ಭಾರತೀಯತೆಯನ್ನು ಪ್ರತಿನಿಧಿಸಿದೆ ಎಂದು ಪಠ್ಯ ಬರೆದವರೂ, ಪಠ್ಯಕ್ರಮ ಚೌಕಟ್ಟು ರೂಪಿಸಿದ ಪಂಡಿತರೂ, ಪಾಠ ಮಾಡುವ ಶಿಕ್ಷಕರೂ, ಪಾಠ ಕಲಿಯುವ ವಿದ್ಯಾರ್ಥಿಗಳೂ, ಎಲ್ಲಕ್ಕಿಂತ ಮುಖ್ಯವಾಗಿ – ಪಠ್ಯ ಪುಸ್ತಕಗಳಲ್ಲಿ ಭಾರತೀಯತೆ ಬರಬೇಕೆಂದು ಪ್ರತಿಪಾದಿಸುವ ಕೆಲ ರಾಷ್ಟ್ರೀಯ ಸಂಘಟನೆಗಳವರೂ ಭಾವಿಸಿದ್ದಾರೆ. ಮತ್ತು ಈ ಭಾರತೀಯತೆಯನ್ನು ತುರುಕುವುದು ಎಂದರೆ ಏನು ಎಂದು ಇವರೆಲ್ಲ ಭಾವಿಸಿದ್ದಾರೋ ಅದು ಕೂಡ ಹಾಸ್ಯಾಸ್ಪದವಾಗಿದೆ. ರಾಷ್ಟ್ರೀಯತೆ, ಭಾರತೀಯತೆ ಕಾಣಿಸಿಕೊಳ್ಳುವಂತೆ ಪಠ್ಯ ರಚಿಸಬೇಕು ಎಂದು ಹೇಳುತ್ತಿರುವವರಲ್ಲಿ, "ಹಾಗೆಂದರೆ ಏನು, ಸ್ವಲ್ಪ ವಿವರಿಸಿ" ಎಂದರೆ ನಮಗೆ ಸಿಗುವ ಉತ್ತರ ಇದು: "ವಿಜ್ಞಾನ, ಗಣಿತ, ಇತಿಹಾಸ, ಭೂಗೋಳ.. ಹೀಗೆ ಯಾವುದೇ ವಿಷಯ ಇರಲಿ; ಅಲ್ಲೆಲ್ಲ ಬೇರೆ ದೇಶಗಳವರು ಏನು ಸಾಧನೆ ಮಾಡಿದ್ದಾರೋ ಅಂಥ ಎಲ್ಲ ಸಾಧನೆಗಳನ್ನು ನಮ್ಮವರು ಕೂಡ ಮಾಡಿದ್ದಾರೆ. ಉದಾಹರಣೆಗೆ ಭೂಮಿ ದುಂಡಗಿದೆ ಎಂದು ಆರ್ಯಭಟ ಹೇಳಿದ್ದಾನೆ. ಪರಮಾಣುಗಳ ಪರಿಕಲ್ಪನೆಯನ್ನು ನಮ್ಮಲ್ಲಿ ಕಣಾದ ಮಹರ್ಷಿಗಳೇ ಕೊಟ್ಟಿದ್ದಾರೆ. ಇಂಥ ವಿಷಯಗಳನ್ನು ನಮ್ಮ ಮಕ್ಕಳಿಗೆ ತಿಳಿಸಬೇಕು. ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ಭಾರತದ ಸಾಧನೆಗಳ ಬಗ್ಗೆ ನಮ್ಮ ಮಕ್ಕಳಿಗೆ ತಿಳಿಸಲು

CC-0. Nepal Sanskrit Academy, Kathmandu Collection

ಪ್ರಯತ್ನಿಸುವುದೇ ಪಠ್ಯಪುಸ್ತಕಗಳ ಪರಿಷ್ಕರಣೆಯ ಮುಖ್ಯ ಉದ್ದೇಶ". ವಿಷಯ ಸ್ಪಷ್ಟ. ಭಾರತದ ಪ್ರಾಚೀನ ವೇದ-ಉಪನಿಷತ್ತುಗಳ, ಭಾರತದ ಋಷಿಮುನಿಗಳ ಉಲ್ಲೇಖವನ್ನು ಪಠ್ಯಪುಸ್ತಕದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲೆಲ್ಲ ತುರುಕುವುದೇ ಪಠ್ಯಗಳನ್ನು ಭಾರತೀಯಗೊಳಿಸುವ ಸಾಹಸದ ಒಂದಂಶದ ಕಾರ್ಯಕ್ರಮ.

ಪಠ್ಯವನ್ನು ಭಾರತೀಯಗೊಳಿಸುವುದು ಎಂದರೆ ಇದಲ್ಲ (ಮತ್ತು ಇದಷ್ಟೇ ಅಲ್ಲ) ಯಾಕೆ ಎಂಬುದನ್ನು ಮುಂದಿನ ಭಾಗದಲ್ಲಿ ವಿವರಿಸುವ ಯತ್ನ ಮಾಡುತ್ತೇನೆ. ಸದ್ಯಕ್ಕೆ, ಭಾರತದ ಋಷಿಮುನಿಗಳ ಉಲ್ಲೇಖ ಕೊಡುವುದಕ್ಕಷ್ಟೇ ಸೀಮಿತವಾಗಿಯಾದರೂ ನಮ್ಮ ಪಠ್ಯಪುಸ್ತಕ ರಚನಕಾರರು ಸಮರ್ಪಕ ಕೆಲಸ ಮಾಡಿದ್ದಾರೋ ಎಂಬುದನ್ನು ನೋಡೋಣ. ಕರ್ನಾಟಕ ಸರಕಾರದ ಶಿಕ್ಷಣ ಇಲಾಖೆ ಹೊರತಂದಿರುವ ಒಂಬತ್ತನೇ ತರಗತಿಯ ವಿಜ್ಞಾನ (ಭಾಗ - 1) ಪಠ್ಯದ ಮೊದಲ ಅಧ್ಯಾಯ: ನಮ್ಮ ಸುತ್ತಮುತ್ತಲಿನ ದ್ರವ್ಯಗಳು - ಇದರ ಮೊದಲ ಪುಟದಲ್ಲಿ ಬರುವ ಒಂದು ವಾಕ್ಯವೃಂದವನ್ನು ಗಮನಿಸಿ:

ಮೊದಲಿನಿಂದಲೂ, ಮನುಷ್ಯನು ತನ್ನ ಸುತ್ತಮುತ್ತಲಿನ ಪ್ರದೇಶವನ್ನು ಅರ್ಥೈಸಲು ಪ್ರಯತ್ನಿಸುತ್ತಿದ್ದಾನೆ. ಭಾರತದ ಪ್ರಾಚೀನ ತತ್ತ್ವಜ್ಞಾನಿಗಳು ದ್ರವ್ಯವು ಐದು ಮೂಲ ಧಾತುಗಳ ರೂಪದಲ್ಲಿ ಮಾಡಲ್ಪಟ್ಟಿದೆ ಎಂದು ವರ್ಗೀಕರಿಸಿದ್ದಾರೆ. ಅವುಗಳೇ ಪಂಚತತ್ತ್ವಗಳು. ಅವುಗಳೆಂದರೆ ಗಾಳಿ, ಭೂಮಿ, ಅಗ್ನಿ, ಆಕಾಶ ಮತ್ತು ನೀರು. ಅವರುಗಳ ಪ್ರಕಾರ ಎಲ್ಲಾ ಜೀವಿಗಳು ಅಥವಾ ನಿರ್ಜೀವಿಗಳು ಈ ಐದು ಮೂಲಧಾತುಗಳಿಂದ ಮಾಡಲ್ಪಟ್ಟಿವೆ ಎಂದು ತಿಳಿಸಿದ್ದಾರೆ. ಪ್ರಾಚೀನ ಗ್ರೀಕ್‌ನ ತತ್ತ್ವಜ್ಞಾನಿಗಳೂ ಸಹ ವಿದ್ರವ್ಯಹಿವನ್ನು ಈ ರೀತಿಯಾಗಿಯೇ ವರ್ಗೀಕರಿಸಿದ್ದಾರೆ. ಆಧುನಿಕ ವಿಜ್ಞಾನಿಗಳು ಭೌತಗುಣಗಳು ಮತ್ತು ರಾಸಾಯನಿಕ ಸ್ವರೂಪದ ಆಧಾರದ ಮೇಲೆ ದ್ರವ್ಯವನ್ನು ಎರಡು ವಿಧಗಳಾಗಿ ವರ್ಗೀಕರಿಸಿದ್ದಾರೆ.

ಈ ವಾಕ್ಯವೃಂದದಲ್ಲಿರುವ ದೋಷಗಳನ್ನು ಗಮನಿಸಿ:

(1) ಮನುಷ್ಯತನ್ನಸುತ್ತಮುತ್ತಲಿನಪ್ರದೇಶವನ್ನುಅರ್ಥೈಸಲುಪ್ರಯತ್ನಿಸುತ್ತಿದ್ದಾನೆ. ಭಾರತದ ಪ್ರಾಚೀನ ತತ್ತ್ವಜ್ಞಾನಿಗಳು ದ್ರವ್ಯವು ಐದು ಧಾತುಗಳಿಂದ ಮಾಡಲ್ಪಟ್ಟಿವೆ ಎಂದು ಹೇಳಿದ್ದಾರೆ. - ಈ ಎರಡು ವಾಕ್ಯಗಳಿಗಿರುವ ಸಂಬಂಧ ಏನು? ದ್ರವ್ಯ, ಧಾತು, ವರ್ಗೀಕರಣ ಎಂಬ ಪದಗಳು, ಎಲ್ಲಿಂದಲೋ ಧುತ್ತನೆ ಭೂಮಿಗೆ ಬಿದ್ದ ಉಲ್ಕೆಗಳಂತೆ, ಈ ವಾಕ್ಯದಲ್ಲಿ ಕಾಣಿಸಿಕೊಂಡಿವೆ. ದ್ರವ್ಯ ಮತ್ತು ಧಾತು ಎಂಬ ಹೊಸ ಪರಿಕಲ್ಪನೆಗಳನ್ನು ಮೊದಲ ಬಾರಿಗೆ ವಿದ್ಯಾರ್ಥಿಗಳಿಗೆ ಹೇಳುವಾಗ ಪೂರ್ವರಂಗ ಒಂದಷ್ಟು ಬೇಕಲ್ಲ? ಅದು ಇಲ್ಲಿಲ್ಲ.

CC-0. Nepal Sanskrit Academy, Kathmandu Collection

(2) ಭಾರತದ ಪ್ರಾಚೀನ ತತ್ತ್ವಜ್ಞಾನಿಗಳು ದ್ರವ್ಯವು ಐದು ಮೂಲ ಧಾತುಗಳಿಂದ ಮಾಡಲ್ಪಟ್ಟಿವೆ ಎಂದು ಹೇಳಿದ್ದಾರಂತೆ. ಯಾವ ತತ್ತ್ವಜ್ಞಾನಿಗಳು ಅವರು? ಹಾಗೆ ಹೇಳಿದ್ದು ಎಲ್ಲಿ? ವಾಕ್ಯದಲ್ಲಿ ಬೇಡ, ಅಡಿಟಿಪ್ಪಣಿಯ ಮಾಹಿತಿ ಕೂಡ ಇಲ್ಲ.

(3) ದ್ರವ್ಯವು ಐದು ಮೂಲ ಧಾತುಗಳಿಂದ ಮಾಡಲ್ಪಟ್ಟಿವೆ ಎಂದು ಭಾರತೀಯರು ಹೇಳಿದರು ಎಂಬುದೇ ಶುದ್ಧಾಂಗ ತಪ್ಪು. ಅಂಥ ಯಾವ ಮಾತೂ ತತ್ತ್ವಶಾಸ್ತ್ರದ ಯಾವ ಮೂಲೆಯಲ್ಲೂ ಬಂದಿಲ್ಲ. ಮಾತ್ರವಲ್ಲ, ವಿಜ್ಞಾನ ಪಠ್ಯಗಳಲ್ಲಿ ಇಂಗ್ಲೀಷ್‌ನ "ಎಲಿಮೆಂಟ್" ಎಂಬ ಶಬ್ದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ "ಧಾತು" ಎಂಬ ಪದ ಬಳಸುವುದು ಸಾಮಾನ್ಯ. ಉದಾಹರಣೆಗೆ ಹೈಡ್ರೋಜನ್, ಹೀಲಿಯಂ, ಕಾರ್ಬನ್ ಮುಂತಾದವು ಧಾತುಗಳು. ಆದರೆ ಈ ಮೇಲೆ ಬಳಸಿಕೊಂಡ ವಾಕ್ಯವೃಂದದಲ್ಲಿ "ಧಾತು" ಎಂಬ ಶಬ್ದವನ್ನು ಈ ಅರ್ಥದಲ್ಲಿ ಬಳಸಿಲ್ಲ ಎಂಬುದನ್ನು ಗಮನಿಸಿ.

(4) ಪಠ್ಯ ಬರೆದವರು ಆ ಐದು "ಧಾತು"ಗಳನ್ನು ಪಂಚತತ್ತ್ವಗಳು ಎಂದು ಕರೆದಿದ್ದಾರೆ. ಧಾತು ಬೇರೆ, ತತ್ತ್ವ ಬೇರೆ. ಶಬ್ದಗಳನ್ನು ಬೇಕಾಬಿಟ್ಟಿಯಾಗಿ ಬರೆದು ಎಸೆದದ್ದಕ್ಕೆ ಇದೊಂದು ನಿದರ್ಶನ.

(5) ಪಂಚತತ್ತ್ವಗಳು ಗಾಳಿ, ಭೂಮಿ, ಅಗ್ನಿ, ಆಕಾಶ ಮತ್ತು ನೀರು – ಅಂತೆ. ಈ ಐದರ ಪೈಕಿ ಅಗ್ನಿ ಮೂರನೇ ಸ್ಥಾನದಲ್ಲಿ ಸರಿಯಾಗಿ ಕೂತಿದೆ ಅನ್ನುವುದು ಬಿಟ್ಟರೆ ಮಿಕ್ಕ ಯಾವುದನ್ನೂ ಕ್ರಮದಲ್ಲಿ ಬರೆದಿಲ್ಲ. ಪೃಥ್ವಿ, ಜಲ, ಅಗ್ನಿ, ವಾಯು, ಆಕಾಶ – ಇದು ಪಂಚತತ್ತ್ವ ಅಥವಾ ಪಂಚಭೂತಗಳ ಸರಿಯಾದ ಕ್ರಮ.

(6) ಪ್ರಪಂಚದ ಜೀವಿಗಳು ಹಾಗೂ ನಿರ್ಜೀವಿಗಳು ಈ ಐದು "ಮೂಲಧಾತು"ಗಳಿಂದ ಮಾಡಲ್ಪಟ್ಟಿವೆ ಎಂದು ತತ್ತ್ವಜ್ಞಾನಿಗಳು ಹೇಳಿದ್ದಾರೆ – ಎಂದು ಪಠ್ಯ ಹೇಳುತ್ತದೆ. ಅಂಥ ಯಾವ ಮಾತುಗಳನ್ನೂ ಭಾರತೀಯ ತತ್ತ್ವಜ್ಞಾನಿಗಳು ಹೇಳಿಲ್ಲ.

(7) ಗ್ರೀಕ್‌ನ ತತ್ತ್ವಜ್ಞಾನಿಗಳು ಸಹ ದ್ರವ್ಯವನ್ನು ಈ ರೀತಿಯಾಗಿಯೇ ವರ್ಗೀಕರಿಸಿದ್ದಾರೆ – ಎಂದು ಪಠ್ಯದಲ್ಲಿ ಹೇಳಲಾಗಿದೆ. ಗ್ರೀಸ್ (ಗ್ರೀಕ್‌ನ ಅಲ್ಲ) ದೇಶದ ತತ್ತ್ವಜ್ಞಾನಿಗಳು ಹೇಳಿದ್ದು ನಾಲ್ಕು "ಎಲಿಮೆಂಟ್ಸ್" ಬಗ್ಗೆಯೇ ಹೊರತು ಪಂಚತತ್ತ್ವಗಳ ಬಗ್ಗೆ ಅಲ್ಲ. ಮಾತ್ರವಲ್ಲ, ಭಾರತೀಯರು ಹೇಳುವ ಪಂಚತತ್ತ್ವಗಳಿಗೂ ಗ್ರೀಸ್‌ನ ಪ್ರಾಚೀನರು ಹೇಳಿದ ನಾಲ್ಕು ಎಲಿಮೆಂಟ್ಸ್‌ಗಳಿಗೂ ಮೂಲಭೂತ ವ್ಯತ್ಯಾಸವಿದೆ. ಅವೆರಡನ್ನು ಸಮೀಕರಿಸುವುದು ಸರಿಯಲ್ಲ.

CC-0. Nepal Sanskrit Academy, Kathmandu Collection

(8) ವಾಕ್ಯವೃಂದದ ಕೊನೆಗೆ, ಆಧುನಿಕ ವಿಜ್ಞಾನಿಗಳು ದ್ರವ್ಯವನ್ನು ಎರಡು ವಿಧಗಳಾಗಿ ವರ್ಗೀಕರಿಸಿದ್ದಾರೆ – ಎಂಬ ಮಾತು ಬಂದಿದೆ. ಆದರೆ, ಪಠ್ಯದ ಮುಂದುವರಿದ ಭಾಗದಲ್ಲಿ, ಅಧ್ಯಾಯದ ಕೊನೆಯವರೆಗೂ, ಆ ಎರಡು ವಿಧಗಳು ಯಾವುದು ಎಂಬುದನ್ನು ಪಠ್ಯ ಬರೆದವರು ಹೇಳುವುದೇ ಇಲ್ಲ! ಮೇಲಾಗಿ ಪ್ರಾಚೀನರು ಹೇಳಿದ ಪಂಚತತ್ತ್ವಕ್ಕೂ ಆಧುನಿಕ ವಿಜ್ಞಾನಿಗಳು ಮಾಡಿದ ಎರಡು ವಿಧಗಳ ವರ್ಗೀಕರಣಕ್ಕೂ ಏನು ಸಾಮ್ಯ, ಏನು ವ್ಯತ್ಯಾಸ ಎಂಬುದನ್ನು ಪಠ್ಯ ವಿವರಿಸುವುದಿಲ್ಲ.

ಇಲ್ಲಿ ನಾವು ಕೊಡಬಹುದಾದ ನಿರ್ಣಯಗಳು ಇವು :

(1) ಭಾರತೀಯ ಎನ್ನಿಸುವ ಸಂಗತಿಗಳನ್ನು ಪಠ್ಯದಲ್ಲಿ ಸೇರಿಸಿ – ಎಂಬ ಸೂಚನೆಯನ್ನು ಪಾಲಿಸುವುದಷ್ಟೇ ಪಠ್ಯ ಬರೆಯುತ್ತಿರುವವರ ಉದ್ದೇಶವಾಗಿದೆ. ತಾವು ಬರೆಯುವ ಸಂಗತಿಗಳಿಂದ ವಿದ್ಯಾರ್ಥಿಗಳಿಗೆ ಏನಾದರೂ ಲಾಭ ಆಗಬೇಕು ಎಂಬ ದೂರದೃಷ್ಟಿ ಅವರಿಗೆ ಇಲ್ಲ. ಹಾಗಾಗಿ, ಭಾರತೀಯ ಅಂಶಗಳನ್ನು ಪಠ್ಯಗಳಲ್ಲಿ ಕಾಟಾಚಾರಕ್ಕೆಂಬಂತೆ ತುರುಕುವ ಕೆಲಸ ಅಷ್ಟೇ ಆಗುತ್ತಿದೆ. ಮೇಲಾಗಿ, ಪಠ್ಯ ಬರೆಯುವವರಿಗೆ ಭಾರತೀಯ ವಿಷಯಗಳಲ್ಲಿ ಪ್ರವೇಶ (ಪ್ರಾಥಮಿಕ ತಿಳಿವಳಿಕೆ) ಇಲ್ಲ.

(2) ಪಠ್ಯದಲ್ಲಿ ಕೊಡುತ್ತಿರುವ (ಅರ್ಥಾತ್ ತುರುಕುತ್ತಿರುವ) ಭಾರತೀಯ ಅಂಶಗಳಿಗೂ ಪಠ್ಯದ ಮುಖ್ಯಭಾಗದ ಓಘಕ್ಕೂ ಸಂಬಂಧವಿಲ್ಲ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಭಾರತೀಯ ಎಂದು ಏನನ್ನು ಪಠ್ಯದಲ್ಲಿ ಹೇಳಲಾಗಿದೆಯೋ ಅದನ್ನು ತೆಗೆದುಹಾಕಿದರೂ ಪಠ್ಯದ ಮೂಲ ರಚನೆಗಾಗಲೀ, ಆಶಯಕ್ಕಾಗಲೀ ಯಾವ ಭಂಗವೂ ಆಗುವುದಿಲ್ಲ. ಪಠ್ಯದಲ್ಲಿ ಅಧ್ಯಾಯದ ವಿಷಯ ಮತ್ತು ಭಾರತೀಯ ಎಂಬ ಮಾಹಿತಿ ಎರಡೂ ಎಣ್ಣೆ – ನೀರಿನಂತೆ ಪ್ರತ್ಯೇಕವಾಗಿ ನಿಲ್ಲುತ್ತವೆ.

(3) ಭಾರತೀಯ ಎಂದು ಕೊಟ್ಟಿರುವ ಮಾಹಿತಿಗಳಲ್ಲಿ ಬಹುಪಾಲು ಅಸಂಗತ. ಮಿಕ್ಕವು ತಪ್ಪು, ದೋಷಪೂರಿತ.

(4) ಎಲ್ಲಕ್ಕಿಂತ ಮುಖ್ಯವಾಗಿ, ಪಠ್ಯದಲ್ಲಿ "ಭಾರತೀಯ" ಎಂಬ ನೆಲೆಯಲ್ಲಿ ಕೊಡುತ್ತಿರುವ ವಿಷಯಗಳನ್ನು ಓದಿ ನಮಗೆ ಹೆಮ್ಮೆ ಅನ್ನಿಸುವ ಬದಲು ಮತ್ತಷ್ಟು ಅಜ್ಞಾನ ಇಲ್ಲವೇ ಕೀಳರಿಮೆ ಬೆಳೆಯುವ ಸಾಧ್ಯತೆಯೇ ಹೆಚ್ಚುತ್ತಿದೆ!

ಈ ನಾಲ್ಕನೇ ಅಂಶವನ್ನು ಸ್ಪಷ್ಟಪಡಿಸಲು ಈ ಭಾಗವನ್ನು ನಾವು ಗಮನಿಸೋಣ:

ಪ್ರಾಚೀನ ಭಾರತೀಯ ಮತ್ತು ಗ್ರೀಕ್ ತತ್ತ್ವಶಾಸ್ತ್ರಜ್ಞರು ಯಾವತ್ತೂ ಅಪರಿಚಿತ

CC-0. Nepal Sanskrit Academy, Kathmandu Collection

ಮತ್ತು ಅಗೋಚರ ದ್ರವ್ಯದ ಕುರಿತು ತೀವ್ರ ಕುತೂಹಲಿಗಳಾಗಿದ್ದರು. ದ್ರವ್ಯದ ವಿಭಜನೀಯತೆಯ ಕಲ್ಪನೆಯು ಬಹಳಷ್ಟು ಹಿಂದೆಯೇ ಅಂದರೆ ಸುಮಾರು ಕ್ರಿಸ್ತಪೂರ್ವ 500ರಲ್ಲಿಯೇ ಭಾರತದಲ್ಲಿ ಪರಿಗಣಿತವಾಗಿತ್ತು. ಪ್ರಾಚೀನ ಭಾರತೀಯ ತತ್ತ್ವಶಾಸ್ತ್ರಜ್ಞರಾದ ಮಹರ್ಷಿ ಕಣಾದರ ಸಿದ್ಧಾಂತದ ಪ್ರಕಾರ ಒಂದು ವೇಳೆ ನಾವು ದ್ರವ್ಯವನ್ನು ವಿಭಜಿಸುತ್ತಾ ಹೋದರೆ ಕೊನೆಯಲ್ಲಿ ಚಿಕ್ಕ ಚಿಕ್ಕ ಕಣಗಳನ್ನು ಪಡೆಯುತ್ತೇವೆ. ಅಂತಿಮವಾಗಿ ಅತ್ಯಂತ ಚಿಕ್ಕ ಕಣವು ದೊರೆತು ಮುಂದೆ ವಿಭಜಿಸುವುದು ಅಸಾಧ್ಯವೆನ್ನುವ ಹಂತವನ್ನು ತಲುಪುತ್ತೇವೆ. ಅವರು ಈ ಕಣಗಳನ್ನು ಪರಮಾಣು ಎಂದು ಹೆಸರಿಸಿದರು. ಪಕುಧ ಕಾತ್ಯಾಯನ ಎಂಬ ಇನ್ನೋರ್ವ ಭಾರತೀಯ ತತ್ತ್ವಶಾಸ್ತ್ರಜ್ಞರು ಈ ಸಿದ್ಧಾಂತವನ್ನು ವಿವರಿಸುತ್ತಾ, ಈ ಕಣಗಳು ಸಾಮಾನ್ಯವಾಗಿ ಸಂಯೋಜಿತ ರೂಪದಲ್ಲಿದ್ದು ವಿವಿಧ ರೂಪದ ದ್ರವ್ಯಗಳನ್ನು ಉಂಟು ಮಾಡುತ್ತವೆ ಎಂದು ತಿಳಿಸಿದರು.

ಇದು ಒಂಬತ್ತನೇ ತರಗತಿಯ ವಿಜ್ಞಾನ ಪಠ್ಯದ ಮೂರನೇ ಅಧ್ಯಾಯವಾದ "ಪರಮಾಣುಗಳು ಮತ್ತು ಅಣುಗಳು" – ಇದರ ಪ್ರಾರಂಭ ಭಾಗ. ಅಧ್ಯಾಯದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಭಾರತೀಯವಾದ ಅಂಶವನ್ನು ತುರುಕಿ ಎಂದ ಸೂಚನೆಯನ್ನು ಅತ್ಯಂತ ಶಿಸ್ತಿನಿಂದ ಪಾಲಿಸಿದ ಪರಿಣಾಮವಾಗಿ ಬಂದಿರುವ ಸಾಲುಗಳಿವು. ಮೊದಲ ಐದಾರು ಸಾಲುಗಳಲ್ಲಿ ಕಣಾದರ ಪ್ರಸ್ತಾಪ ಬಂದಿದೆ ಎನ್ನುವುದು ಬಿಟ್ಟರೆ 25 ಪುಟಗಳಿರುವ ಈ ದೀರ್ಘ ಅಧ್ಯಾಯದಲ್ಲಿ ಮತ್ತೆಲ್ಲೂ ಭಾರತೀಯತೆಯ ಪ್ರಸ್ತಾಪ ಇಲ್ಲ! ಇರಲಿ, ಕೊಟ್ಟಿರುವ ಮಾಹಿತಿ ಸರಿಯಾಗಿದೆಯೆ? ಕಣಾದರ ಕುರಿತು ಅಂತರ್ಜಾಲದಲ್ಲಿ ಸಿಗುವ ಮೇಲುಮೇಲಿನ ತೇಲುಮಾಹಿತಿಯನ್ನಷ್ಟೇ ತೆಗೆದು ಪಠ್ಯದಲ್ಲಿ ತುಂಬಿಸಲಾಗಿದೆ ಎಂಬುದು ಭಾರತೀಯ ನ್ಯಾಯಶಾಸ್ತ್ರಗಳಲ್ಲಿ ಪ್ರವೇಶ ಇರುವ ಯಾರಿಗಾದರೂ ಗೊತ್ತಾಗುವ ಸಂಗತಿ. ಕಣಾದ ಮಹರ್ಷಿಗಳ ಕುರಿತು ಪಠ್ಯದಲ್ಲಿ ಬಂದಿರುವ ಎರಡು–ಮೂರು ವಾಕ್ಯಗಳನ್ನಷ್ಟೇ ಓದುವವರಿಗೆ ಮನಸ್ಸಿನಲ್ಲಿ ಬರುವ ಯೋಚನೆ ಏನು? ಒಂದು ವಸ್ತುವನ್ನು ವಿಭಜಿಸುತ್ತಾ ಹೋದರೆ ಕೊನೆಗೆ ಪರಮಾಣು ಸಿಗುತ್ತದೆ ಎಂಬುದನ್ನು ಕಣಾದರು ಹೇಳಿದ್ದಾರೆ. ಇದನ್ನು ಕಣಾದರೇ ಯಾಕೆ ಹೇಳಬೇಕು? ಸ್ವಲ್ಪ ಬುದ್ಧಿ ಉಪಯೋಗಿಸಿ ಯೋಚಿಸುವ ಯಾರಿಗೇ ಆದರೂ ಅತ್ಯಂತ ಸಹಜವಾಗಿ ಹೊಳೆಯುವ ಅಂಶ ಅಲ್ಲವೇ ಇದು! ಇದರಲ್ಲಿ ಕಣಾದರ ಹೆಚ್ಚುಗಾರಿಕೆ ಏನಿದೆ – ಎನ್ನಿಸಬಹುದು. ಯಾಕೆಂದರೆ, ಇಂಥ ಯೋಚನೆ ಬರುವಂತೆ ನಮ್ಮ ಪಠ್ಯದಲ್ಲಿ ಕಣಾದರನ್ನು ಚಿತ್ರಿಸಲಾಗಿದೆ. ವಸ್ತುವಿನ ಅತ್ಯಂತ ಸಣ್ಣ ಕಣವನ್ನು ಪರಮಾಣು ಎಂದು ಕಣಾದರು ಕರೆದರು ಎಂಬ ಮಾಹಿತಿಗಿಂತ ಹೆಚ್ಚಿನದೇನನ್ನೂ ನಮ್ಮ ಪಠ್ಯಗಳು ನಮಗೆ ಕೊಡವು! ಆದರೆ, ವಾಸ್ತವದಲ್ಲಿ, ಕಣಾದರು ವೈಶೇಷಿಕ ಎಂಬ

CC-0. Nepal Sanskrit Academy, Kathmandu Collection

ದರ್ಶನದ ಪ್ರವರ್ತಕರು. ವೈಶೇಷಿಕವು ಪ್ರಪಂಚದ ಇರವು ಯಾವುದರಿಂದ? ಮನುಷ್ಯನನ್ನೂ ಒಳಗೊಂಡು ಸಕಲ ಚರಾಚರ ವಸ್ತುಗಳು ಅವು ಕಾಣುವ ಸ್ಥಿತಿಯಲ್ಲಿ ಯಾಕಿವೆ? ಎಲ್ಲವೂ ಯಾವುದರಿಂದ ಆಗಿದೆ? ಒಂದು ವಸ್ತು ನಷ್ಟವಾದಾಗ ಅದರಲ್ಲಿದ್ದ ದ್ರವ್ಯ ಮತ್ತೇನಾಗುತ್ತದೆ? ಮುಂತಾದ ಹಲವು ಪ್ರಶ್ನೆಗಳನ್ನು ಎದುರಿಟ್ಟುಕೊಂಡು ಉತ್ತರ ತೆಗೆಯಲು ಯತ್ನಿಸುತ್ತದೆ. ವೈಶೇಷಿಕ ದರ್ಶನದಲ್ಲಿ ಕಣಾದರು ಪದಾರ್ಥದ ಆರು ಬಗೆಗಳನ್ನು ಹೇಳುತ್ತಾರೆ. ಅವು: ದ್ರವ್ಯ, ಗುಣ, ಕರ್ಮ, ಸಾಮಾನ್ಯ, ವಿಶೇಷ ಮತ್ತು ಸಮವಾಯ. ಕಣಾದರ ನಂತರದ ತಾತ್ತ್ವಿಕರು ಅಭಾವ ಎಂಬ ಏಳನೆಯ ಬಗೆಯನ್ನೂ ಆ ಪಟ್ಟಿಗೆ ಸೇರಿಸಿದರು. ಕಣಾದರ ತತ್ತ್ವಶಾಸ್ತ್ರ ಕೇವಲ ಪರಮಾಣುವಿನ ಕಲ್ಪನೆಯನ್ನಷ್ಟೇ ಅಲ್ಲದೆ ಗುರುತ್ವದ ಅಸ್ತಿತ್ವವನ್ನು ಕೂಡ (ಸಂಯೋಗಾಭಾವೇ ಗುರುತ್ವಾತ್ ಪತನಮ್) ಹೇಳುತ್ತದೆ. ನ್ಯೂಟನ್‌ನ ಮೊದಲ ನಿಯಮವನ್ನು ಕಣಾದರು ವಿವರಿಸುತ್ತಾರೆ. ವಸ್ತುವಿನಲ್ಲಿ ಚಲನೆಯ ಕಾರಣದಿಂದ ಶಕ್ತಿ ಸಂಚಯವಾಗುತ್ತದೆ ಎಂದು ಚಲನಶಕ್ತಿಯನ್ನು ವಿವರಿಸುವ ಭಾಗ ಕೂಡ ವೈಶೇಷಿಕ ದರ್ಶನದಲ್ಲಿದೆ. ಆದರೆ ಈ ಯಾವ ಅಂಶಗಳನ್ನು ಕೂಡ ಇವತ್ತಿನ ನಮ್ಮ ವಿಜ್ಞಾನ ಪಠ್ಯಗಳು ತಿಳಿಸುವುದಿಲ್ಲ.

ಪಠ್ಯಪುಸ್ತಕಗಳನ್ನು ಪಾಶ್ಚಾತ್ಯ ಚಿಂತನೆಯಿಂದ ಹೊರತಂದು ಭಾರತೀಯಗೊಳಿಸುವುದು ಎಂದರೆ ಪ್ರಾಚೀನ ಋಷಿಮುನಿಗಳ ಉಲ್ಲೇಖ ಮಾಡುವುದು ಮಾತ್ರವಲ್ಲ; ಆ ಪಠ್ಯಗಳು ನಮ್ಮ ಸುತ್ತಮುತ್ತಲಿನ ಸಂಗತಿಗಳನ್ನು ನಮಗೆ ಹೆಚ್ಚು ಸ್ಪಷ್ಟವಾಗಿಸುವಂತೆ ಅವನ್ನು ಆಮೂಲಾಗ್ರವಾಗಿ ತಿದ್ದಿ ಬರೆಯುವುದು. ಉದಾಹರಣೆಗೆ, ಒಂಬತ್ತನೇ ತರಗತಿಯ ವಿಜ್ಞಾನ ಪಠ್ಯದ ಮೊದಲ ಪಾಠ: ವಿನಮ್ಮ ಸುತ್ತಮುತ್ತಲಿನ ದ್ರವ್ಯಗಳುಹಿ, ದ್ರವನ, ಬಾಷ್ಪೀಕರಣ, ಘನೀಕರಣ, ಸಾಂದ್ರೀಕರಣ, ಆವೀಕರಣ (?), ಉತ್ಪತನ ಮುಂತಾದ ಹಲವು ಪ್ರಕ್ರಿಯೆಗಳನ್ನು ವಿವರಿಸುತ್ತದೆ. ಆದರೆ ಕೊಟ್ಟಿರುವ ಯಾವ ವಿವರಣೆ, ಪ್ರಶ್ನೆ, ಚಟುವಟಿಕೆಯಲ್ಲೂ ಭಾರತೀಯತೆಯ ಅಂಶ ಇಲ್ಲ. ನಮ್ಮವರು ಸಮುದ್ರದ ನೀರಿಂದ ಉಪ್ಪು ಮಾಡುತ್ತಿದ್ದದ್ದು ಹೇಗೆ? ಆಲೆಮನೆಯಲ್ಲಿ ಬೆಲ್ಲ ತಯಾರಿಸುವುದು ಹೇಗೆ? ಗಾಣದಿಂದ ಎಣ್ಣೆ ತೆಗೆಯುವುದು ಹೇಗೆ? ಉಪ್ಪಿನಕಾಯಿ ಹಾಕುವಾಗ ನೀರು ಸೋಕದಂತೆ ಜಾಗ್ರತೆ ವಹಿಸುವುದು ಏಕೆ? ದೇವಸ್ಥಾನಗಳಲ್ಲಿ ಮೂರ್ತಿ ಪ್ರತಿಷ್ಠಾಪನೆಯ ಸಂದರ್ಭದಲ್ಲಿ ಅಷ್ಟಬಂಧ ಮಿಶ್ರಣ ಯಾವುದರಿಂದ ಮಾಡುತ್ತಾರೆ? ಮಾಡಲು ಆ ಎಂಟು ಪದಾರ್ಥಗಳನ್ನೇ ಯಾಕೆ ಆಯ್ದುಕೊಳ್ಳುತ್ತಾರೆ? ಇಡ್ಲಿಯು ಸ್ನಿಗ್ಧರೂಪದಿಂದ ಘನರೂಪಕ್ಕೆ ಬದಲಾಗಬೇಕಾದರೆ ಯಾವ ಪ್ರಕ್ರಿಯೆ ಸಹಾಯ ಮಾಡುತ್ತದೆ? ಇಂಥ

CC-0. Nepal Sanskrit Academy, Kathmandu Collection

ಅಪ್ಪಟ ಭಾರತೀಯ ಸಂಗತಿಗಳನ್ನು ವಿವರಿಸುತ್ತ ಹೋಗಿದ್ದರೆ ಆ ಪಾಠದಲ್ಲಿ ಬಂದಿರುವ ವಿಷಯಗಳನ್ನು ಎಷ್ಟೊಂದು ಚೆನ್ನಾಗಿ ಮಕ್ಕಳಿಗೆ ಮನದಟ್ಟಾಗುವಂತೆ ವಿವರಿಸಬಹುದಿತ್ತು! ಪಠ್ಯಗಳನ್ನು ಭಾರತೀಯಗೊಳಿಸವುದು ಎಂದರೆ ಪ್ರಾಚೀನ ಋಷಿಮುನಿಗಳ ಮೇಲೆ ಒಂದೆರಡು ವಾಕ್ಯಗಳನ್ನು ಬಾಕ್ಸ್ ಐಟಮ್ ಮಾಡಿ ಕೊಡುವುದಲ್ಲ; ಇದೂ ಕೂಡ.

ನಮ್ಮ ದೇಶದಲ್ಲಿ ನಾವು ಮಕ್ಕಳಿಗೆ ಕೊಡುವ ವಿಭಾರತೀಯ ಶಿಕ್ಷಣಹಿ ಹೇಗಿರಬೇಕು ಎಂಬ ಚರ್ಚೆಯನ್ನು ಮುಂದುವರೆಸುವ ಮುನ್ನ ಈಗ ಚಲಾವಣೆಯಲ್ಲಿರುವ ಪಠ್ಯಕ್ರಮದ ಬಗ್ಗೆ ಎನ್.ಸಿ.ಇ.ಆರ್.ಟಿ.ಯ ಅಭಿಪ್ರಾಯ ಏನಿದೆ ಎಂಬುದನ್ನು ಸ್ವಲ್ಪ ನೋಡೋಣ. ಎನ್.ಸಿ.ಇ.ಆರ್.ಟಿ. ದೇಶದ ಕೋಟ್ಯಂತರ ಮಕ್ಕಳು ಓದುವ ಪಠ್ಯಕ್ರಮವನ್ನು ರೂಪಿಸುವ ಶಿಕ್ಷಣ ಸಂಸ್ಥೆ. ಸ್ವಾತಂತ್ರ್ಯ ಬಂದಾಗಿನಿಂದಲೂ ಶಿಕ್ಷಣಕ್ಷೇತ್ರದಲ್ಲೇ ಪೂರ್ತಿಯಾಗಿ ತನ್ನನ್ನು ಮುಳುಗಿಸಿಕೊಂಡಿರುವ ಈ ಸಂಸ್ಥೆ ಇಂದಿನ ಪಠ್ಯಕ್ರಮದ ಕುರಿತು ಕೊಡುವ ಅಭಿಪ್ರಾಯಗಳು ಅತ್ಯಂತ ಮುಖ್ಯವಾಗುತ್ತವೆ ಎಂಬುದರಲ್ಲಿ ಎರಡು ಮಾತಿಲ್ಲ. ಕಳೆದ ವರ್ಷ (2017ರಲ್ಲಿ) ಕರ್ನಾಟಕ ಸರಕಾರ ರೂಪಿಸಿದ್ದ/ಪರಿಷ್ಕರಿಸಿದ್ದ ಪಠ್ಯಪುಸ್ತಕಗಳನ್ನು (1ರಿಂದ 10ನೆಯ ತರಗತಿವರೆಗಿನವು) ವಿಷಯತಜ್ಞರಿಂದ ಓದಿಸಿ ಪರಾಮರ್ಶನ ನಡೆಸಿ ಒಂದು ದೀರ್ಘ ಟಿಪ್ಪಣಿಯನ್ನು ಎನ್.ಸಿ.ಇ.ಆರ್.ಟಿ. ಬರೆಯಿತು. ಅದು ಕೊಟ್ಟ ವರದಿಯಲ್ಲಿರುವ ಕೆಲವು ಅಂಶಗಳು ಇಲ್ಲಿವೆ:

ಇಂಗ್ಲೀಷ್ ಪಠ್ಯ: ಹೂರಣದ ದೃಷ್ಟಿಯಿಂದ ನೋಡುವುದಾದರೆ, ಪ್ರತಿ ತರಗತಿಯ ಪಠ್ಯವೂ ನೀರಸವಾಗಿದೆ. ಅನಗತ್ಯ ವಿವರಗಳನ್ನು ತುರುಕಲಾಗಿದೆ. ಬಳಸಿರುವ ಪಾಠಗಳಲ್ಲಿ ಹೆಚ್ಚಿನವು ವಿದ್ಯಾರ್ಥಿಗಳ ವಯೋಮಿತಿಯನ್ನು ದಾಟಿಹೋಗುವ ಸಂಕೀರ್ಣ ವಿಷಯಗಳನ್ನೇ ಒಳಗೊಂಡಿವೆ. ಪಠ್ಯ ರಚನಕಾರರು ಮಕ್ಕಳಿಗೆ ಭಾಷೆ ಕಲಿಸಬೇಕು ಎಂಬ ಉದ್ದೇಶಕ್ಕಿಂತ ತಮ್ಮ ಪಾಂಡಿತ್ಯ ಪ್ರದರ್ಶನ ಮಾಡಬೇಕೆಂದು ಇವನ್ನೆಲ್ಲ ಬರೆದಿದ್ದಾರೇನೋ ಅನ್ನಿಸುವಂತಿದೆ. ಭಾಷಾ ಪಠ್ಯದಲ್ಲಿ ಗುಂಪು ಚಟುವಟಿಕೆಗಳು ಇಲ್ಲ. ಅಭ್ಯಾಸ ಎಂಬ ಭಾಗದಲ್ಲಿ ಕೊಟ್ಟಿರುವ ಪ್ರಶ್ನೆಗಳೆಲ್ಲ ಯಾರು? ಏನು? ಹೇಗೆ? ಏಕೆ? ಎಂಬಂಥ ಪ್ರಶ್ನೆಗಳೇ. ಇವನ್ನು ಇಂಗ್ಲೀಷ್‌ನಲ್ಲಿ "ಡಬ್ಲ್ಯೂ ಎಚ್ ಪ್ರಶ್ನೆಗಳು" ಎನ್ನುತ್ತಾರೆ. ಈ ಪ್ರಶ್ನೆಗಳು ವಿದ್ಯಾರ್ಥಿ ಓದಿದ್ದರಲ್ಲಿ ಎಷ್ಟು ನೆನಪಿಟ್ಟಿದ್ದಾನೆ ಎಂಬುದನ್ನು ಪರೀಕ್ಷಿಸುತ್ತವೆಯೇ ಹೊರತು, ಹೊಸದಾಗಿ ಏನು ಕಲಿತಿದ್ದಾನೆ? ಕಲಿತದ್ದನ್ನು ತನ್ನ ಸ್ವಂತ ಬಳಕೆಯಲ್ಲಿ ಹೇಗೆ ತರುತ್ತಾನೆ? ಎಂಬುದನ್ನು ಪರೀಕ್ಷಿಸುವುದೇ ಇಲ್ಲ. ಒಂದು ವಿಷಯವನ್ನು ಚೆನ್ನಾಗಿ ಕಲಿಯುವುದು ಮಾತ್ರವಲ್ಲ, ಅದನ್ನು ತನ್ನ ದಿನನಿತ್ಯದ ವ್ಯವಹಾರದಲ್ಲಿ ಸಮರ್ಥವಾಗಿ ಬಳಸಲು ವಿದ್ಯಾರ್ಥಿ ಹೇಗೆ ತಯಾರಾಗಿದ್ದಾನೆ ಎಂಬುದು ಕೂಡ

CC-0. Nepal Sanskrit Academy, Kathmandu Collection

ಭಾಷಾಪಠ್ಯದ ಮುಖ್ಯ ಆದ್ಯತೆಯಾಗಬೇಕು. ಅಂಥ ವಿಷಯಗಳ ಬಗ್ಗೆ ಪಠ್ಯ ಬರೆದವರು ಯೋಚಿಸಿದಂತೆ ಕಾಣುವುದಿಲ್ಲ. ಈ ಇಂಗ್ಲೀಷ್ ಪಠ್ಯವನ್ನು ಓದಿದರೆ ಓರ್ವ ಉತ್ತಮ ಓದುಗನಾಗಬಹುದು; ಆದರೆ ಆತ ಇಂಗ್ಲೀಷ್‌ನಲ್ಲಿ ಉತ್ತಮವಾಗಿ ಮಾತಾಡಬಲ್ಲ, ಬರೆಯಬಲ್ಲ ಎಂದು ಹೇಳುವಂತಿಲ್ಲ. ಯಾಕೆಂದರೆ ಮಾತಿನ, ಶ್ರವಣದ, ಬರವಣಿಗೆಯ ಅಭ್ಯಾಸಪ್ರಶ್ನೆಗಳೇ ಯಾವ ಪಠ್ಯದಲ್ಲೂ ಇಲ್ಲ. ನಾವು ಪ್ರಶ್ನೆ ಕೇಳುತ್ತಿದ್ದೇವೆ, ನೀವು ಓದಿದ್ದನ್ನು ನೆನಪಿಸಿಕೊಂಡು ಉತ್ತರ ಬರೆಯಿರಿ ಎಂಬಷ್ಟಕ್ಕೇ ಎಲ್ಲ ಅಭ್ಯಾಸಪ್ರಶ್ನೆಗಳೂ ನಿಂತಿವೆ. ಬೇರೆ ಯಾವ ಚಟುವಟಿಕೆಯ ಸಾಧ್ಯತೆಯನ್ನೂ ಈ ಪಠ್ಯಗಳು ಪರಿಶೀಲಿಸುವುದಿಲ್ಲ.

ಇತಿಹಾಸ/ಸಮಾಜ ವಿಜ್ಞಾನ: ಇತಿಹಾಸ ಪಠ್ಯದಲ್ಲಿ ಯಾವ ವಿಷಯಕ್ಕೆ ಎಷ್ಟು ಪುಟಗಳನ್ನು ಮೀಸಲಿಡಬೇಕು ಎಂಬ ವಿಷಯದಲ್ಲಿ ಯಾವುದೇ ಚರ್ಚೆ ನಡೆದಂತೆ ಕಾಣುವುದಿಲ್ಲ. ಒಬ್ಬರೇ ಲೇಖಕರು ಇಡೀ ಪುಸ್ತಕ ಬರೆದಿದ್ದರೆ, ತನಗೆ ಇಷ್ಟಬಂದ ವಿಷಯವನ್ನು ಲಂಬಿಸಿ, ಇಷ್ಟವಿಲ್ಲದ್ದನ್ನು ಕುಗ್ಗಿಸಿದ್ದಾರೆ ಎನ್ನಬೇಕಾಗುತ್ತದೆ. ಬೇರೆ ಬೇರೆಯವರಿಂದ ಅಧ್ಯಾಯಗಳನ್ನು ಬರೆಸಲಾಗಿದೆ ಎಂದಾದರೆ, ಅವರು ಎಷ್ಟೆಷ್ಟು ಬರೆದುಕೊಟ್ಟಿದ್ದಾರೋ ಅವೆಲ್ಲವನ್ನೂ ಒಟ್ಟುಸೇರಿಸಿ ಕಟ್ಟುಹಾಕಲಾಗಿದೆ ಎಂದು ಭಾವಿಸಬೇಕಾಗುತ್ತದೆ. ಉದಾಹರಣೆಗೆ, 7ನೇ ತರಗತಿಯಲ್ಲಿ, 90 ವರ್ಷಗಳ ಸ್ವಾತಂತ್ರ್ಯ ಸಂಗ್ರಾಮಕ್ಕೆ 39 ಪುಟಗಳನ್ನು ಮೀಸಲಿಡಲಾಗಿದೆ. ಆದರೆ, 144 ವರ್ಷಗಳ ಇತಿಹಾಸವಿರುವ ಮರಾಠರ ಸಾಮ್ರಾಜ್ಯದ ಇತಿಹಾಸಕ್ಕೆ ಕೊಟ್ಟಿರುವುದು 4 ಪುಟಗಳನ್ನು! ಸ್ವಾತಂತ್ರ್ಯ ಸಂಗ್ರಾಮದ ಕತೆಯಾದರೂ ಸರಿ ಇದೆಯೇ? ಅದನ್ನು ರಾಷ್ಟ್ರೀಯತೆಯ ಉದಯ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಗಾಂಧೀಯುಗ ಎಂದು ಮೂರು ಭಾಗ ಮಾಡಿ, ಒಟ್ಟು 30ಕ್ಕೂ ಹೆಚ್ಚು ಘಟನೆಗಳನ್ನು ಅಕ್ಷರಶಃ ತುರುಕಿದ್ದಾರೆ. ಪ್ರತಿ ಪುಟದಲ್ಲೂ ಹತ್ತಾರು ಹೊಸ ಹೆಸರುಗಳು, ಹತ್ತಾರು ಇಸವಿಗಳು! ಇಡೀ ಪುಸ್ತಕವೇ ನೂರಾರು ಘಟನೆಗಳ ವಿವರಗಳು ತುಂಬಿರುವ ಗೊಂಡಾರಣ್ಯ! ಇಲ್ಲಿ ಒಂದು ಘಟನೆಯಿಂದ ಮತ್ತೊಂದಕ್ಕೆ ಹಾರುವಾಗ, ಅವುಗಳ ನಡುವಿನ ಬಂಧ ಏನು? ಯಾವುದು ಯಾವುದನ್ನು ಪ್ರಭಾವಿಸಿತು? ಎಂಬುದೇನೂ ಸ್ಪಷ್ಟವಾಗುವುದಿಲ್ಲ. ಇಡೀ ಪಠ್ಯ ಹಲವು ಘಟನೆಗಳನ್ನು ವರದಿಮಾಡುತ್ತ ಹೋದ ಒಂದು ವಾರ್ಷಿಕವರದಿಯಂತಿದೆ. ಇತಿಹಾಸವೆಂದರೆ ಘಟನೆ, ಇಸವಿ, ಹೆಸರುಗಳ ಸರಮಾಲೆಯೇ?

ವಿಜ್ಞಾನ ಮತ್ತು ಗಣಿತ: ಎರಡರಲ್ಲೂ ಪ್ರಾಯೋಗಿಕ ಪಾಠಕ್ಕೆ ಅವಕಾಶವಿಲ್ಲ. ವ್ಯಾಖ್ಯೆಯಿಂದ ಶುರುವಾಗುವ ಪಾಠಗಳು, ಸ್ಮರಣಶಕ್ತಿಯ ಪರೀಕ್ಷೆಯೊಂದಿಗೆ ಮುಗಿಯುತ್ತವೆ. ಎಲ್ಲೂ ಮಕ್ಕಳ ಕೈಯಲ್ಲೇ ಚಟುವಟಿಕೆ ಮಾಡಿಸಿ, ವಿಷಯವನ್ನು ಅರ್ಥ ಮಾಡಿಸುವ ಪ್ರಯತ್ನ ಕಾಣುವುದಿಲ್ಲ. ವಿಷಯಗಳ ಓವರ್‌ಲೋಡ್

CC-0. Nepal Sanskrit Academy, Kathmandu Collection

ಎದ್ದುಕಾಣುವ ಸಂಗತಿ. ಓದು, ಉರುಹೊಡೆ, ನೆನಪಿಸಿಕೊಂಡು ಬರೆ – ಇವಿಷ್ಟೇ ಗಣಿತ ಮತ್ತು ವಿಜ್ಞಾನ ಪಠ್ಯಗಳ ಉದ್ದೇಶವಾದಂತಿದೆ. ವಿಜ್ಞಾನದಲ್ಲಿ ಸಣ್ಣ ತರಗತಿಯ ವಿದ್ಯಾರ್ಥಿಗಳಿಗೆ ಕ್ಲೋರಿನ್, ಸಲ್ಫರ್ ಡಯಾಕ್ಸೈಡ್‌ನಂಥ ವಿಷಾನಿಲಗಳ ತಯಾರಿ ನಡೆಸುವುದು ಹೇಗೆ ಎಂಬುದನ್ನು ವಿವರಿಸಲಾಗಿದೆ! ವಿದ್ಯಾರ್ಥಿಗಳ ವಯೋಮಾನಕ್ಕೆ ಮೀರಿದ; ಅಧ್ಯಾಪಕರು ತರಗತಿಯಲ್ಲಿ ಅಥವಾ ಪ್ರಯೋಗಶಾಲೆಯಲ್ಲಿ ಮಾಡಿತೋರಿಸಲಾಗದ ಇಂಥ ವಿಷಯಗಳನ್ನು ಕಲಿಸಿ ಪ್ರಯೋಜನ ಏನು?

ಇವಿಷ್ಟು, ಎನ್.ಸಿ.ಇ.ಆರ್.ಟಿ. ಕೊಟ್ಟಿರುವ 80ಕ್ಕೂ ಹೆಚ್ಚು ಪುಟಗಳ ವರದಿಯ ಕೆಲವೇ ಕೆಲವು ಸಾಲುಗಳು ಮಾತ್ರ ಎಂಬುದನ್ನು ಗಮನಿಸಬೇಕು. ತನ್ನ ಟಿಪ್ಪಣಿಗಳಲ್ಲಿ ಎನ್. ಸಿ. ಇ .ಆರ್. ಟಿ., ಕರ್ನಾಟಕ ರಾಜ್ಯ ಸರಕಾರದ ಶಿಕ್ಷಣ ಇಲಾಖೆ ರೂಪಿಸಿದ ಪಠ್ಯಪುಸ್ತಕಗಳು ಹೇಗಿವೆ ಎಂಬುದನ್ನು ವಿಮರ್ಶಿಸುವ ಜೊತೆಜೊತೆಗೇ ಪಠ್ಯಪುಸ್ತಕಗಳು ಹೇಗಿರಬಾರದು ಮತ್ತು ಹೇಗಿರಬೇಕು ಎಂಬ ಮಾತುಗಳನ್ನೂ ಹೇಳಿರುವುದರಿಂದ ಮೇಲಿನ ಸಾಲುಗಳು ಮುಖ್ಯವಾಗುತ್ತವೆ. ಈ ಟಿಪ್ಪಣಿಗಳನ್ನು ಓದಿದ ಮೇಲೆ ನಮ್ಮ ಪ್ರಸ್ತುತ ಪಠ್ಯಗಳ ಬಗ್ಗೆ ಸ್ಥೂಲವಾಗಿ ಹೀಗೆ ಹೇಳಬಹುದು:

(1) ನಮ್ಮ ಪಠ್ಯಗಳಲ್ಲಿ ಪ್ರಾಕ್ಟಿಕಲ್ ಆಗಿರುವ, ಜೀವನಾನುಭವ ಹೆಚ್ಚಿಸುವ ವಿಷಯಗಳಿಗೆ ಪ್ರಾಧಾನ್ಯ ಇಲ್ಲ. ಸ್ಮರಣಶಕ್ತಿಯನ್ನು ಪರೀಕ್ಷಿಸುವುದೇ ಪಠ್ಯದ ಕರ್ತವ್ಯ ಎಂಬ ಭಾವನೆಯೇ ಗಟ್ಟಿಯಾಗಿದೆ.

(2) ಹೆಚ್ಚಿನ ಪಾಠಗಳು ವ್ಯಾಖ್ಯೆ, ಹೇಳಿಕೆ, ಸೂತ್ರ, ಸಾಧನೆ (ಪ್ರೂಫ್), ಪ್ರಶ್ನೆ ಎಂಬ ಸಿದ್ಧಮಾದರಿಯನ್ನೇ ಅನುಸರಿಸುತ್ತವೆ. ವೈವಿಧ್ಯಕ್ಕೆ ಅವಕಾಶವಿಲ್ಲ.

(3) ಮಗುವಿಗೆ ಏನು ಬೇಕು ಎಂಬುದಕ್ಕಿಂತ ಹೆಚ್ಚಾಗಿ ಪಠ್ಯಗಳೆಂದರೆ ಲೇಖಕರ ಜ್ಞಾನಪ್ರದರ್ಶನದ ವೇದಿಕೆಗಳು ಅಷ್ಟೆ. ಆ ಕಾರಣದಿಂದ ಪಠ್ಯವೆಂದರೆ ಮಕ್ಕಳಿಗೆ ಬಲವಂತದ ಮಾಘಸ್ನಾನ.

(4) ನಮ್ಮಲ್ಲಿ ಕೆಲವು ಪೂರ್ವಗ್ರಹಗಳಿವೆ. ಭಾಷಾಪಠ್ಯ ಎಂದರೆ ಅಲ್ಲಿ ಕೆಲವು ಕತೆ/ಕವಿತೆಗಳಿರಬೇಕು. ಇತಿಹಾಸದ ಪಠ್ಯವೆಂದರೆ ಘಟನೆಗಳ, ಇಸವಿಗಳ ಸರಮಾಲೆ. ವಿಜ್ಞಾನಪಠ್ಯದಲ್ಲಿ ಮಕ್ಕಳಿಗೆ ಬೇಕೋ ಬೇಡವೋ ಒಟ್ಟಲ್ಲಿ ಕೆಲವು ಪ್ರಯೋಗಗಳನ್ನು ಕಡ್ಡಾಯವಾಗಿ ವಿವರಿಸಬೇಕು. ಮತ್ತು ಗಣಿತಪಠ್ಯವೆಂದರೆ ಲೆಕ್ಕ ಲೆಕ್ಕ ಲೆಕ್ಕ! ಇವನ್ನೆಲ್ಲ ವಿದ್ಯಾರ್ಥಿ ಯಾಕೆ ಓದಬೇಕು? ಅಧ್ಯಯನದ ಉದ್ದೇಶ/ಆಶಯ ಏನು? ಎಂಬ ಪ್ರಶ್ನೆಯನ್ನು ಪಠ್ಯರಚನಕಾರರು ಎಂದೂ ಹಾಕಿಕೊಂಡಿಲ್ಲ.

ಹೀಗಾಗಲು ಕಾರಣ ಏನು ಎಂಬುದನ್ನು ನಾವು ಯೋಚಿಸಿದ್ದೇವೆಯೇ?

CC-0. Nepal Sanskrit Academy, Kathmandu Collection

ಈ ದುರಂತಕ್ಕೆ ಕಾರಣ ಏನು ಎಂಬುದನ್ನು ಹುಡುಕುತ್ತ ಹೋದರೆ ನಾವು ಸೀದಾ ಬ್ರಿಟಿಷ್ ಆಡಳಿತದ ಮೆಕಾಲೆ ಯುಗಕ್ಕೆ ಹೋಗಿ ನಿಲ್ಲುತ್ತೇವೆ.

ಲಾರ್ಡ್ ಮೆಕಾಲೆ ಬ್ರಿಟನ್ ಸಂಸತ್ತಿಗೆ ತನ್ನ ವರದಿಯನ್ನು ಸಲ್ಲಿಸುವವರೆಗೆ ಬ್ರಿಟಿಷರು ಭಾರತದ ಶಿಕ್ಷಣಪದ್ಧತಿಯಲ್ಲಿ ತಮ್ಮ ಹಸ್ತಕ್ಷೇಪ ಮಾಡಿರಲಿಲ್ಲ. ಅಸಲಿಗೆ, ಭಾರತದಲ್ಲಿ ಶಿಕ್ಷಣಪದ್ಧತಿ ಯಾವ ರೂಪದಲ್ಲಿದೆ ಎಂಬುದರ ಕುರಿತು ಅವರು ಹೆಚ್ಚು ತಲೆಕೆಡಿಸಿಕೊಂಡಿರಲೇ ಇಲ್ಲ. ಮೆಕಾಲೆಗಿಂತ ಹಿಂದೆ ಭಾರತದಲ್ಲಿದ್ದ ಅನೇಕ ಪರಂಗಿ ಅಧಿಕಾರಿಗಳು ಭಾರತದಲ್ಲಿ ಶಿಕ್ಷಣ/ಶಿಕ್ಷಣಪದ್ಧತಿ ಇಲ್ಲ, ಶಾಲೆ-ಕಾಲೇಜುಗಳ ವ್ಯವಸ್ಥೆ ಇಲ್ಲ, ಎಲ್ಲೋ ಅಲ್ಲಿಲ್ಲಿ ಪಂಡಿತರು/ಬ್ರಾಹ್ಮಣರು ಅಕ್ಷರಾಭ್ಯಾಸ ಮಾಡಿದ್ದಾರೆ ಅಷ್ಟೆ – ಎಂಬ ವರದಿಗಳನ್ನು ತಮ್ಮ ಮೇಲಧಿಕಾರಿಗಳಿಗೆ ಕಳಿಸಿದ್ದರು. ಆದರೆ ಭಾರತದಲ್ಲಿ ಗುರುಕುಲ ಮಾದರಿಯಲ್ಲಿ ಶಿಕ್ಷಣ ನಡೆಯುತ್ತಿದೆ ಎಂಬುದನ್ನು ಮೆಕಾಲೆ ಗುರುತಿಸಿದ. ಆತ ತನ್ನ ಶಿಕ್ಷಣನೀತಿಯನ್ನು ತಯಾರಿಸಿ ಬ್ರಿಟನ್ನಿನ ಸಂಸತ್ತಿನ ಎದುರು ಇಡುವ ಕಾಲಕ್ಕೆ ಭಾರತದಲ್ಲಿ ಕನಿಷ್ಠ 15,000ದಷ್ಟು ಮಧ್ಯಮ ಮತ್ತು ದೊಡ್ಡ ಮಟ್ಟದ ಗುರುಕುಲಗಳು ಕಾರ್ಯನಿರ್ವಹಿಸುತ್ತಿದ್ದವು. ಇಲ್ಲಿ "ಗುರುಕುಲ" ಎಂದೊಡನೆ ಕಾಡಿನ ಮಧ್ಯದಲ್ಲಿ ಆಶ್ರಮ ಕಟ್ಟಿಕೊಂಡ ಋಷಿಮುನಿಗಳು ವಿದ್ಯಾರ್ಥಿಗಳಿಗೆ ವೇದೋಪನಿಷತ್ತುಗಳನ್ನು ಹೇಳಿಕೊಡುತ್ತಿದ್ದ ವ್ಯವಸ್ಥೆ ಎಂದು ಭಾವಿಸಬೇಕಿಲ್ಲ. ಕಮ್ಮಾರವಿದ್ಯೆಯನ್ನು ಕಲಿಸುವ ಶಾಲೆಗಳಿದ್ದವು. ಕುಂಭಕಲೆಯನ್ನು ಹೇಳಿಕೊಡುವ ಸಂಸ್ಥೆಗಳಿದ್ದವು. ಶಿಲ್ಪಕಲೆಯಲ್ಲೇ ಪ್ರಾವೀಣ್ಯ ಗಳಿಸುವಂತೆ ಮಾಡುವ ತರಬೇತಿ ಕೇಂದ್ರಗಳಿದ್ದವು. ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರಗಳನ್ನು ಹೇಳಿಕೊಡುವ ಪಾಠಶಾಲೆಗಳಿದ್ದವು. ನಾಟಕಕಲೆಯನ್ನು ಕಲಿಸಿಕೊಡುವ ನಾಟ್ಯತರಬೇತಿಯ ಕೇಂದ್ರಗಳಿದ್ದವು. ವಿದ್ಯಾರ್ಥಿಗಳು ತಮ್ಮ ಅಭಿರುಚಿ, ಪ್ರತಿಭೆಗೆ ಅನುಗುಣವಾಗಿ ಈ ಶಾಲೆಗಳನ್ನು ಸೇರಬಹುದಾಗಿತ್ತು. ಶಾಲೆ ಸೇರಿದ ಪ್ರತಿ ವಿದ್ಯಾರ್ಥಿಗೂ ಒಂದಷ್ಟು ಸಾಮಾನ್ಯ ಪಠ್ಯ ಬೋಧಿಸಿ ನಂತರ ಆಯಾಕ್ಷೇತ್ರದ ವಿಶೇಷ ತರಗತಿಗಳನ್ನು ಪ್ರಾರಂಭಿಸಲಾಗುತ್ತಿತ್ತು. ಇಂಥ ಹತ್ತುಹಲವು ಕಲೆ/ವಿದ್ಯೆ/ಜ್ಞಾನಶಾಖೆಗಳನ್ನು ಒಂದೇ ಕ್ಯಾಂಪಸ್‌ನಲ್ಲಿ ಕಲಿಸುತ್ತಿದ್ದ ಕೊನೆಯ ಉದಾಹರಣೆ ನಳಂದ ವಿಶ್ವವಿದ್ಯಾಲಯ. ಅದನ್ನು ಇಸ್ಲಾಮಿಕ್ ಮೂಲಭೂತವಾದಿಗಳು ಸುಟ್ಟು ಬೂದಿ ಮಾಡಿದ ಮೇಲೆ, ಅಂಥದೊಂದು ಸಂಘಟಿತ ವಿದ್ಯಾಕೇಂದ್ರ ಭಾರತದಲ್ಲಿ ಕಾರ್ಯನಿರ್ವಹಿಸಲಿಲ್ಲ. ಜ್ಞಾನಶಾಖೆಗಳು ಭಾರತಾದ್ಯಂತ ಚದುರಿಹೋದವು. ಬ್ರಿಟಿಷರು "ಭಾರತದಲ್ಲಿ ಶಿಕ್ಷಣಪದ್ಧತಿ ಎಂಬುದೇ ಇಲ್ಲ" ಎಂದು ಹೇಳುವುದಕ್ಕೆ ಶಿಕ್ಷಣದ ಈ ಬಗೆಯ ವಿಕೇಂದ್ರೀಕರಣವೂ ಒಂದು ಕಾರಣ.

ಭಾರತದಲ್ಲಿ ಗುರು-ಶಿಷ್ಯ ಪರಂಪರೆ ಇತ್ತು. ಗುರುವು ತನ್ನ ಶಿಷ್ಯರನ್ನು

CC-0. Nepal Sanskrit Academy, Kathmandu Collection

ವರ್ಷಕ್ಕೆ ಮೂರು ವಿಎಕ್ಸಾಮ್‌ಹಿಗಳಲ್ಲಿ ಪರೀಕ್ಷೆ ಮಾಡಿ ಅಂಕ ಕೊಡುವ ಪದ್ಧತಿ ಇರಲಿಲ್ಲವಾದರೂ, ಪ್ರತಿದಿನವೂ ಶಿಷ್ಯರ ಅಭಿವೃದ್ಧಿಯನ್ನು ಗುರು ಗಮನಿಸುತ್ತಿದ್ದ. ಶಿಷ್ಯ ಮುಂದಿನ ಅಧ್ಯಾಯಕ್ಕೆ, ಮುಂದಿನ ಹಂತಕ್ಕೆ ತಯಾರಾಗಿದ್ದಾನೆ ಎಂಬುದು ಖಚಿತವಾದರಷ್ಟೇ ಗುರು ಮುಂದಿನ ಪಾಠಕ್ಕೆ ಹೋಗುತ್ತಿದ್ದ. ಎಲ್ಲರಿಗೂ ಒಂದೇ ಬಗೆಯ ಪಾಠಕ್ರಮ ಎಂಬುದು ಇರಲಿಲ್ಲ. ಭಾರತದಲ್ಲಿ ಈ ಕ್ರಮ ಹೇಗೆ ನಡೆಯುತ್ತಿತ್ತು ಎಂಬುದನ್ನು ಅರ್ಥ ಮಾಡಿಕೊಳ್ಳಲು ಇಂದಿಗೂ ಗುರು-ಶಿಷ್ಯ ಪರಂಪರೆಯ ಮಾರ್ಗದಲ್ಲೇ ನಡೆಯುವ ಸಂಗೀತ ಶಿಕ್ಷಣವನ್ನು ನೋಡಬಹುದು. ಅದರಲ್ಲೂ ಮುಖ್ಯವಾಗಿ ಹಿಂದೂಸ್ತಾನಿ ಸಂಗೀತದ ಪಾಠ ನಡೆಯುವ ಬಗೆಯನ್ನು ನೋಡಿ. ಶಿಷ್ಯನಿಗೆ ಗುರು ಒಂದು ರಾಗವನ್ನು ಕಲಿಸಬಹುದು. ಅದನ್ನು ಶಿಷ್ಯ ಹೇಗೆ ಅಭ್ಯಾಸ ಮಾಡುತ್ತಾನೆ, ಎಷ್ಟು ಕರಗತ ಮಾಡಿಕೊಳ್ಳುತ್ತಾನೆ ಎಂಬುದರ ಆಧಾರದ ಮೇಲೆ ಗುರು ಮುಂದಿನ ಕ್ರಮ ನಿರ್ಧರಿಸುತ್ತಾನೆ. ಈ ಬಗೆಯ ಶಿಕ್ಷಣ ಪದ್ಧತಿಯನ್ನು ಬ್ರಿಟಿಷರು ಅಸಾಂಪ್ರದಾಯಿಕ ಎಂದು ಕರೆದರು. ಯಾಕೆಂದರೆ ಅವರಲ್ಲಿ ಇದ್ದದ್ದು ಒಂದು ನಿರ್ದಿಷ್ಟ ಕಾಲಾವಧಿಯನ್ನು ಮೊದಲೇ ನಿರ್ಧರಿಸಿಕೊಂಡು, ಆ ಕಾಲಮಿತಿಯಲ್ಲಿ ಶಿಕ್ಷಣ ಕೊಟ್ಟು ವಿದ್ಯಾರ್ಥಿಗಳನ್ನು ತಯಾರು ಮಾಡುವ ಪದ್ಧತಿ. ಅಂದರೆ ಬ್ರಿಟಿಷರ ಶಿಕ್ಷಣ ಕಾಲಕೇಂದ್ರಿತವಾಗಿತ್ತೇ ಹೊರತು ವಿದ್ಯಾರ್ಥಿಕೇಂದ್ರಿತವಾಗಿರಲಿಲ್ಲ. ಒಂದು ನಿರ್ದಿಷ್ಟ ಕಾಲಾವಧಿಯ ಅಂತ್ಯದಲ್ಲಿ ಪರೀಕ್ಷೆಗಳಿರುತ್ತಿದ್ದವು. ಶಿಕ್ಷಣ ಕಾಲಮಿತಿಕೇಂದ್ರಿತ ಆದಾಗ, ಅವಧಿಯ ಕೊನೆಯಲ್ಲಿ ಪರೀಕ್ಷೆ ನಡೆಸಿದರೆ, ವಿದ್ಯಾರ್ಥಿಗಳು ಒಬ್ಬೊಬ್ಬರೂ ಒಂದೊಂದು ಅಂಕ ಪಡೆಯುವುದು ಸಹಜವೇ ತಾನೆ? ಯಾಕೆಂದರೆ ಅದು ಕಾಲಮಿತಿಯೊಳಗೆ ನಡೆಸುವ ಕುದುರೆ ರೇಸಿನಂತೆ. ತಂತಮ್ಮ ಸಾಮರ್ಥ್ಯಕ್ಕನುಗುಣವಾಗಿ ಕುದುರೆಗಳು ರೇಸ್ ಟ್ರ್ಯಾಕ್‌ನ ವಿವಿಧ ದೂರಗಳಲ್ಲಿರುವುದು ಸ್ವಾಭಾವಿಕ. ಹಾಗಾಗಿ, ಪರೀಕ್ಷೆಯ ಜೊತೆ ಉತ್ತೀರ್ಣ, ಅನುತ್ತೀರ್ಣ ಎಂಬ ಪರಿಕಲ್ಪನೆ ಬಂತು. ಉತ್ತೀರ್ಣನಾಗಲು ಬೇಕಾದ ಕನಿಷ್ಠ ಅಂಕಗಳ ಪದ್ಧತಿ ಬಂತು. 35 ಅಂಕ ಸಿಕ್ಕಿತೋ ಆ ವಿದ್ಯಾರ್ಥಿ ಉತ್ತೀರ್ಣ; ಆತ ಮುಂದಿನ ತರಗತಿಗೆ ಹೋಗಿ ಕೂರಬಹುದು ಎಂಬ ಕ್ರಮವನ್ನು ಬ್ರಿಟಿಷರು ಅಳವಡಿಸಿಕೊಂಡಿದ್ದರು. ಉತ್ತೀರ್ಣನಾಗಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಗಳಿಸಿದ ವಿದ್ಯಾರ್ಥಿ, ಉತ್ತೀರ್ಣನಾಗಿ ಮುಂದಿನ ತರಗತಿಗೆ ಹೋಗುತ್ತಿದ್ದ ನಿಜ; ಆದರೆ ಆತ ಗಳಿಸದ ಮಿಕ್ಕ ಅಂಕಗಳ ಕತೆ ಏನು? ಆ ಜ್ಞಾನ ಅವನಿಗೆ ಬೇಡವೇ? ಆತ ಕಲಿಯದೆ ಬಿಟ್ಟ ಸಂಗತಿಗಳನ್ನು ಮುಂದಿನ ಯಾವ ತರಗತಿಯಲ್ಲಾದರೂ ಆತನಿಗೆ ಕಲಿಸಲಾಗುತ್ತದೆಯೆ? ಒಂದು ಪಠ್ಯಕ್ರಮದ ಮೂರನೇ ಒಂದು ಭಾಗ ಕಲಿತು, ಮೂರನೇ ಎರಡು ಭಾಗ ಕಲಿಯದ್ದೇ ಉಳಿದವನು ಕೂಡ ಉತ್ತೀರ್ಣನಾಗಿ ಮುಂದಿನ ತರಗತಿಗೆ

CC-0. Nepal Sanskrit Academy, Kathmandu Collection

ಹೋಗುವುದು ಅವೈಜ್ಞಾನಿಕ ಅಲ್ಲವೆ? ಬ್ರಿಟಿಷ್ ವ್ಯವಸ್ಥೆ ಈ ಸಮಸ್ಯೆಗಳನ್ನೆಲ್ಲ ಪರಿಶೀಲಿಸಲಿಲ್ಲ.

ವಿಸ್ತರಿಸುತ್ತಿದ್ದ ಬ್ರಿಟಿಷ್ ಆಡಳಿತಶಾಹಿಯ ಕೆಲಸಕಾರ್ಯಗಳನ್ನು ನಡೆಸಿಕೊಂಡುಹೋಗಲು ಬ್ರಿಟಿಷರಿಗೆ ಬೇಕಿದ್ದುದು ನೌಕರರು. ತಮ್ಮ ಆಜ್ಞೆಗಳನ್ನು ಅರ್ಥ ಮಾಡಿಕೊಳ್ಳುವಷ್ಟು ಇಂಗ್ಲೀಷ್ ಬರುವ, ಸರಕಾರದ ದಫ್ತರಗಳಲ್ಲಿ ಸಂಖ್ಯೆಗಳನ್ನು ತುಂಬಿಸಲು ಗೊತ್ತಿರುವ, ಸರಕಾರವೆಂಬ ಯಂತ್ರದ ಬಿಡಿಭಾಗಗಳು ಸಮರ್ಪಕವಾಗಿ ಕೆಲಸ ಮಾಡಲು ಒದಗಿಬರುವ ನೌಕರರೆಂಬ ಮಾನವಯಂತ್ರಗಳು. ಇದನ್ನು ಮೆಕಾಲೆ ಅತ್ಯಂತ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿದ್ದ. ಮತ್ತು ತನ್ನ ಪ್ರಸ್ತಾವನೆಯಲ್ಲೂ ಅವನು ಅದನ್ನು ಸ್ಪಷ್ಟ ಶಬ್ದಗಳಲ್ಲಿ ಸೂಚಿಸಿದ. ಬ್ರಿಟನ್ ಸರಕಾರಕ್ಕೆ ಮೆಕಾಲೆ ಏನು ಹೇಳುತ್ತಿದ್ದಾನೆ ಎಂಬುದು ಅರ್ಥವಾಯಿತು. ಆದ್ದರಿಂದಲೇ ಅವನ ಪ್ರಸ್ತಾವನೆ ಯಾವ ಚರ್ವಿತ ಚರ್ವಣ ಚರ್ಚೆಗಳಿಲ್ಲದೆ ಊರ್ಜಿತವಾಯಿತು. ಮೆಕಾಲೆ ಹೇಳಿದ ರೀತಿಯಲ್ಲಿ ಶಿಕ್ಷಣಪದ್ಧತಿಯನ್ನು ಭಾರತದ ಮೇಲೆ ಹೇರಲು ಬ್ರಿಟನ್ ಸರಕಾರ ದೊಡ್ಡ ಬಂಡವಾಳವನ್ನು ಎತ್ತಿಟ್ಟಿತು. ಈ ಹೊಸ ಶಿಕ್ಷಣಕ್ರಾಂತಿಯ ಮೊದಲ ಅಂಗವಾಗಿ ಭಾರತದಲ್ಲಿ ಅದುವರೆಗೆ ಕಾರ್ಯನಿರ್ವಹಿಸುತ್ತಿದ್ದ ಎಲ್ಲ ಬಗೆಯ ಗುರುಕುಲಗಳನ್ನು ಬಲವಂತವಾಗಿ ಮುಚ್ಚಿಸಲಾಯಿತು. ಬ್ರಿಟಿಷ್ ಮಾದರಿಯ ಶಿಕ್ಷಣ ಕೊಡುವ ಬೃಹತ್ ಗಾತ್ರದ ಶಿಕ್ಷಣಸಂಸ್ಥೆಗಳನ್ನು ಕಟ್ಟಲಾಯಿತು. ಅದುವರೆಗೆ ಶಿಕ್ಷಣಮಾಧ್ಯಮವಾಗಿದ್ದ ಸಂಸ್ಕೃತ ಮತ್ತು ಎಲ್ಲ ಸ್ಥಳೀಯ ಭಾಷೆಗಳ ಬದಲಿಗೆ ಬ್ರಿಟಿಷರು ಭಾರತೀಯರ ದಿನನಿತ್ಯದ ಕೆಲಸಕಾರ್ಯಗಳಿಗೆ ಪರಕೀಯವಾಗಿದ್ದ ಇಂಗ್ಲೀಷ್ ಭಾಷೆಯನ್ನು ಆಮದುತಂದರು. ಇಂಗ್ಲೀಷ್‌ನಲ್ಲಿ ವ್ಯವಹರಿಸುವುದು ಆಧುನಿಕತೆಯ, ಸುಸಂಸ್ಕೃತಿಯ ಲಕ್ಷಣ ಎಂಬ ಭ್ರಮೆ ಹಬ್ಬಿಸಲಾಯಿತು. ಇಂಗ್ಲೀಷ್ ಮಾಧ್ಯಮದ ಶಿಕ್ಷಣದ ಮೇಲೆ ಇಂದಿಗೂ ನಮಗಿರುವ ವ್ಯಾಮೋಹ ಕಂಡರೆ ಆ ಕಾಲದಲ್ಲಿ ಅದು ಅದೆಂಥ ರಾಜಮರ್ಯಾದೆ ಪಡೆಯಿತೆಂಬುದನ್ನು ಊಹಿಸಬಹುದು!

ಆಗಲೇ ಹೇಳಿದಂತೆ ಪರಂಗಿಗಳಿಗೆ ಬೇಕಿದ್ದುದು ದೇಶದ ಉದ್ದಗಲದಲ್ಲಿ ಒಂದೇ ರೀತಿಯಲ್ಲಿ ಕಾರ್ಯನಿರ್ವಹಿಸಬಲ್ಲ ಕಾರಕೂನರು. ಒಬ್ಬ ಸರಕಾರೀ ನೌಕರ ಕಾಶ್ಮೀರದಿಂದ ಕನ್ಯಾಕುಮಾರಿಗೆ ವರ್ಗವಾಗಿ ಬಂದರೂ ಆತ ಮಾಡುವ ಕೆಲಸದಲ್ಲಿ ವ್ಯತ್ಯಾಸವಾಗಬಾರದು. ಪ್ರಾಂತ್ಯಗಳ ಭಿನ್ನತೆಯ ಹೊರತಾಗಿಯೂ ನೌಕರ ತನ್ನ ಕೆಲಸವನ್ನು ಎಂದಿನ ದಕ್ಷತೆಯಿಂದಲೇ ನಿರ್ವಹಿಸಲು ಸಾಧ್ಯವಾಗಬೇಕು. ಆ ಕಾರಣದಿಂದ ಬ್ರಿಟಿಷರು ಭಾರತದಲ್ಲಿ ಏಕರೂಪದ ಶಿಕ್ಷಣ ಜಾರಿಗೆ ತಂದರು. ಅದರ ಮೊದಲ ಹಂತವೇ ದೇಶಭಾಷೆಗಳ ಹರಣ,

CC-0. Nepal Sanskrit Academy, Kathmandu Collection

ಇಂಗ್ಲೀಷ್ ಭಾಷೆಯ ವಿಜೃಂಭಣ. ಎರಡನೆಯದಾಗಿ, ಶಾಲೆಗಳಲ್ಲಿ – ಮುಂದಿನ ಕಾರಕೂನಿಕೆಗೆ ಬೇಕಾದಂತೆ – ಸ್ವಲ್ಪ ಭಾಷೆ, ಸ್ವಲ್ಪ ವಿಜ್ಞಾನ, ಸ್ವಲ್ಪ ಇತಿಹಾಸ, ಸ್ವಲ್ಪ ಭೂಗೋಳ, ಸ್ವಲ್ಪ ಗಣಿತ ಎಂದು ಎಲ್ಲವನ್ನೂ ಅಲ್ಪಸ್ವಲ್ಪ ಪ್ರಮಾಣದಲ್ಲಿ ಕಲಿಸುವುದನ್ನು ಶುರುಮಾಡಿದರು. ದೇಶದಲ್ಲಿ ಬ್ರಿಟಿಷ್ ಸರಕಾರದಡಿ ನೌಕರಿ ಮಾಡುವವರ ಬೌದ್ಧಿಕಮಟ್ಟ ಹೆಚ್ಚುಕಡಿಮೆ ಒಂದೇ ರೀತಿಯಲ್ಲಿರಬೇಕು; ಅವರಿಗೆ ಭೂಗೋಳ, ಗಣಿತ, ವಿಜ್ಞಾನ ಮುಂತಾದ ವಿಷಯಗಳ ಒಂದು ಅಪೇಕ್ಷಣೀಯ ಮಟ್ಟದ ಪರಿಚಯ ಇರಬೇಕು; ಆದರೆ ಯಾವುದೇ ವಿಷಯದಲ್ಲಿ ಅವರು ಪರಿಣಿತಿಯ ಮಟ್ಟ ಸಾಧಿಸಬೇಕಿಲ್ಲ ("ಜ್ಯಾಕ್ ಆಫ್ ಆಲ್ ಟ್ರೇಡ್ಸ್, ಮಾಸ್ಟರ್ ಆಫ್ ನನ್") ಎಂಬುದು ಬ್ರಿಟಿಷ್ ಸರಕಾರದ ಆಶಯವಾಗಿತ್ತು.

ಮೆಕಾಲೆ ತನ್ನ ಶಿಕ್ಷಣಪದ್ಧತಿಯನ್ನು ಭಾರತದ ಮೇಲೆ ಹೇರುವ ಸಂದರ್ಭದಲ್ಲಿ ಬ್ರಿಟನ್ ಸರಕಾರಕ್ಕೆ ಒಂದು ಮಾತು ಹೇಳಿದ್ದ. ವಿಈ ದೇಶದಲ್ಲಿ ಒಬ್ಬ ವಿದ್ಯಾರ್ಥಿ ತನ್ನ ಇಡೀ ವಿದ್ಯಾರ್ಥಿಜೀವನದಲ್ಲಿ ಪಡೆಯುವ ಶಿಕ್ಷಣಕ್ಕಿಂತ ಇಂಗ್ಲೆಂಡಿನ ಪ್ರಾಥಮಿಕ ಶಾಲೆಯ ಪಾಠ ಹೆಚ್ಚು ಮೌಲ್ಯವುಳ್ಳದ್ದು.ಹಿ ಅನೇಕ ವರ್ಷಗಳ ನಂತರ ಆ ಮಾತು ನಿಜವಾಗುವಂತೆ ಮೆಕಾಲೆ ಮಾಡಿದ!

ಮೆಕಾಲೆ ನಿರ್ದೇಶಿಸಿದ ಮತ್ತು ಬ್ರಿಟನ್ ಸರಕಾರ ಕೈಗೊಂಡ ಶೈಕ್ಷಣಿಕ ಕ್ರಾಂತಿಯಿಂದ ಸಿಕ್ಕ ಫಲಿತಾಂಶಗಳು ನಮ್ಮ ಕಣ್ಣ ಮುಂದಿವೆ. ಸಂಸ್ಕೃತ ದೇಶದ ಶಿಕ್ಷಣಕ್ಷೇತ್ರದಿಂದ ಮಾಯವಾಗಿದೆ; ಸಂಸ್ಕೃತಕಾಲೇಜುಗಳಲ್ಲಷ್ಟೇ ಕುಟುಕುಜೀವ ಹಿಡಿದು ಉಳಿದಿದೆ. ಸಂಸ್ಕೃತವನ್ನು ದೇಶದ ಶಿಕ್ಷಣ ರಂಗದಿಂದ ದೂರವಿಟ್ಟೊಡನೆ ದೇಶದಲ್ಲಿ ಹಲವು ಶತಮಾನಗಳಿಂದ ಬರೆಯಲ್ಪಟ್ಟ ಸಾವಿರಾರು ಗ್ರಂಥಗಳು ಮತ್ತವುಗಳ ಜ್ಞಾನದಿಂದ ನಾವು ಕೂಡಲೇ ಬೇರ್ಪಟ್ಟೆವು. ಬೇರು ಕತ್ತರಿಸಿದ ಮರಗಳಾದೆವು. ಸ್ವಲ್ಪದರಲ್ಲೇ ಆ ಮರ ಒಣಗಿ ಕೊರಡಾಗುವುದೆಂಬುದು ಮೆಕಾಲೆಗೆ ಬಹಳ ಚೆನ್ನಾಗಿ ಗೊತ್ತಿದ್ದ ಸತ್ಯ. ದುರಂತ, ಹಾಗೇ ಆಯಿತು!

ಇಂದಿನ ನಮ್ಮ ಶಿಕ್ಷಣದಿಂದ ಆಗಿರುವುದೇನು?

(1) ಭಾರತೀಯ ಎಂಬ ಎಲ್ಲದರ ಬಗ್ಗೆ ನಮಗೆ ಅನಾದರ. ಶಿಕ್ಷಣ ಎಂದರೆ ವಿಜ್ಞಾನ, ಗಣಿತ, ಚರಿತ್ರೆ, ಭೂಗೋಳ, ಭಾಷೆ – ಇಷ್ಟೇ ಎಂಬ ಭಾವ. ಇದರಾಚೆಗೆ ಭಾರತೀಯವಾದದ್ದು ಏನೇ ಪಠ್ಯದಲ್ಲಿ ಕಾಣಿಸಿಕೊಂಡರೂ ನಮಗದು ಅಗ್ರಾಹ್ಯ. ಚರಿತ್ರೆಯ ಅಥವಾ ವಿಜ್ಞಾನದ ಪಠ್ಯದಲ್ಲಿ ಎಲ್ಲಾದರೂ ಒಂದು ವೇದಮಂತ್ರ ಕಾಣಿಸಿಕೊಂಡರೆ ರಾಷ್ಟ್ರೀಯಮಟ್ಟದಲ್ಲಿ ಹುಯಿಲೇಳುತ್ತದೆ. ಪಠ್ಯದ ಸೆಕ್ಯುಲರ್‌ತನಕ್ಕೆ ಮೈಲಿಗೆಯಾಯಿತು! ರಾಷ್ಟ್ರೀಯವಾದಿಗಳು ತಮ್ಮ ಧೋರಣೆಗಳನ್ನು ಪಠ್ಯದಲ್ಲಿ ತೂರಿಸಿದ್ದಾರೆ!

CC-0. Nepal Sanskrit Academy, Kathmandu Collection

ಇದು ಕೋಮುವಾದ! ಘೋಷಣೆಗಳು ಮೊಳಗುತ್ತವೆ.

(2) ಪಠ್ಯ ಎಂಬುದು ನಿಜಜೀವನದಿಂದ ಬಹುದೂರದಲ್ಲಿರುವ ಒಂದು ಅವಾಸ್ತವಿಕ ಸಂಗತಿಯಾಗಿಬಿಟ್ಟಿದೆ. ದಿನನಿತ್ಯದ ಬದುಕಿಗೂ ಶಾಲೆಯಲ್ಲಿ ಕಲಿವ/ಉರುಹೊಡೆವ ಪಾಠಗಳಿಗೂ ಬಾದರಾಯಣ ಸಂಬಂಧ ಕೂಡ ಉಳಿದಿಲ್ಲ. ವಿದ್ಯಾರ್ಥಿ ತನ್ನ ಶಾಲಾ-ಕಾಲೇಜು ದಿನಗಳಲ್ಲಿ ಕಲಿತದ್ದರ ಶೇಕಡಾ 10ನ್ನು ಕೂಡ ಬದುಕಿನಲ್ಲಿ ಬಳಸುವ ಸಂದರ್ಭ ಇಲ್ಲ!

(3) ವಿದ್ಯಾರ್ಥಿಗೆ ಎಲ್ಲವೂ ಗೊತ್ತು; ಆದರೆ ಯಾವುದೂ ಸರಿಯಾಗಿ ಗೊತ್ತಿಲ್ಲ. ಭಾರತೀಯ ಪದ್ಧತಿಯಲ್ಲಿ 12 ವರ್ಷಗಳ ವಿದ್ಯಾಭ್ಯಾಸ ಮುಗಿಸಿದಾತ ಕನಿಷ್ಠ ಒಂದು ವಿಷಯದಲ್ಲಿ ಪ್ರಾವೀಣ್ಯ ಸಂಪಾದಿಸಿರುತ್ತಿದ್ದ. ಇಂದು ಆಧುನಿಕ ಶಿಕ್ಷಣದ 12 ವರ್ಷ (ಅರ್ಥಾತ್ ಪಿಯುಸಿ) ಮುಗಿಸಿ ಹೊರಬಂದಾತ ವಿಷಯತಜ್ಞನಾಗಲು ಬೇಕಾದ ಶಿಕ್ಷಣಕ್ಕೆ ಪ್ರವೇಶವನ್ನಷ್ಟೇ ಪಡೆಯಲು ಅರ್ಹನಾಗಿರುತ್ತಾನೆ!

(4) ಶಿಕ್ಷಣದಿಂದ ಪ್ರಾಯೋಗಿಕ ಅನುಭವವನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ಪಠ್ಯವು ಪರೀಕ್ಷಿಸುವುದು ವಿದ್ಯಾರ್ಥಿಯ ಸ್ಮರಣಶಕ್ತಿಯನ್ನು ಮಾತ್ರ, ಅದಕ್ಕೆಂದೇ ಪಠ್ಯಪುಸ್ತಕಗಳನ್ನು ಮಾಹಿತಿಗಳಿಂದ ತುಂಬಿತುಳುಕುವ ನೂರಾರು ಪುಟಗಳ ಡೈರೆಕ್ಟರಿಗಳಂತೆ ರಚಿಸಲಾಗುತ್ತಿದೆ. ಪಠ್ಯ ಎಂದರೆ ವಿದ್ಯಾರ್ಥಿಗೆ ಹೊಸದನ್ನು, ಉಪಯೋಗವಾಗುವಂಥ ಸಂಗತಿಗಳನ್ನು ಕಲಿಸಲು ಸಿಗುವ ಅವಕಾಶ ಎಂಬುದಕ್ಕಿಂತ ಹೆಚ್ಚಾಗಿ ಸ್ವಪಾಂಡಿತ್ಯದ ಪ್ರದರ್ಶನಕ್ಕೆ ಸಿಗುವ ವೇದಿಕೆ ಎಂಬುದೇ ತಜ್ಞರ ಧೋರಣೆ.

(5) ಪಠ್ಯವನ್ನು ಎಷ್ಟು ಸಾಧ್ಯವೋ ಅಷ್ಟು ಶುಷ್ಕವಾಗಿ, ಪಂಡಿತಭಾಷೆಯಲ್ಲಿ ಬರೆಯಬೇಕು ಎಂಬುದು ನಮ್ಮವರ ಇನ್ನೊಂದು ಪೂರ್ವಾಗ್ರಹ! ಉದಾಹರಣಾರ್ಥ ಈ ಕೆಳಗಿನ ಭಾಗ ನೋಡಿ:

ಘನಾಕೃತಿ ಅನುಲೇಪಕ ಅಂಗಾಂಶ ಮೂತ್ರಪಿಂಡದ ನಾಳಗಳಲ್ಲಿ ಮತ್ತು ಲಾಲಾರಸ ಗ್ರಂಥಿಯ ನಾಳಗಳ ಪದರಗಳಲ್ಲಿ ಕಂಡುಬರುತ್ತವೆ. ಅಲ್ಲಿ ಅವು ಯಾಂತ್ರಿಕ ಆಧಾರವನ್ನು ಒದಗಿಸುತ್ತವೆ. ಇವುಗಳಲ್ಲಿ ಕಂಡುಬರುವ ಅನುಲೇಪಕ ಅಂಗಾಂಶದ ಜೀವಕೋಶಗಳು ಹೆಚ್ಚುವರಿಯಾಗಿ ಸ್ರವಿಕೆಯ ಕಾರ್ಯ ನಿರ್ವಹಿಸಲು ಗ್ರಂಥಿಯಾಗಿ ವೈಶಿಷ್ಟ್ಯತೆಯನ್ನು ಪಡೆದಿವೆ. ಇವು ತಮ್ಮ ಹೊರಪದರದಲ್ಲಿ ಕೆಲವು ವಸ್ತುಗಳನ್ನು ಸ್ರವಿಸುತ್ತವೆ. ಕೆಲವೊಮ್ಮೆ ಅನುಲೇಪಕ ಅಂಗಾಂಶಗಳ ಒಂದು ಭಾಗವು ಒಳಮುಖವಾಗಿ ಮಡಚಿಕೊಂಡು ಒಂದು ಬಹುಕೋಶೀಯ ಗ್ರಂಥಿಯನ್ನು ಉಂಟುಮಾಡುತ್ತದೆ. ಇದು ಗ್ರಂಥಿ ಅನುಲೇಪಕ ಅಂಗಾಂಶ.

CC-0. Nepal Sanskrit Academy, Kathmandu Collection

ಇದು ಒಂಬತ್ತನೇ ತರಗತಿಯ ವಿಜ್ಞಾನ ಪಠ್ಯದಲ್ಲಿರುವ "ಅಂಗಾಂಶಗಳು" ಎಂಬ ಅಧ್ಯಾಯದಲ್ಲಿ ಬರುವ ಒಂದು ಭಾಗ. ನಾವು ಮಕ್ಕಳಿಗೆ ಬೋಧಿಸುತ್ತಿರುವ ಇಡೀ ಪಠ್ಯಕ್ರಮವೇ ಇಂಥ ವಾಕ್ಯವೃಂದಗಳಿಂದ ತುಂಬಿಹೋಗಿದೆ. ಪಠ್ಯಗಳಲ್ಲಿ ಹಾಡು, ಚಟುವಟಿಕೆ, ಹಾಸ್ಯ, ನಿತ್ಯಜೀವನದ ವಿವರಗಳು, ಅಡಗೂಲಜ್ಜಿ ಕತೆ, ಒಗಟು, ಪದಬಂಧ ಮುಂತಾದವೆಲ್ಲ ಇರಬಾರದು ಎಂದು ಕಟ್ಟಳೆ ಮಾಡಿದವರು ಯಾರು?

(6) ಭಾರತದ ಜೀವಾಳವೇ ಕಲೆ. ಆದರೆ ನಮ್ಮ ಪಠ್ಯಕ್ರಮದಿಂದ ಕಲೆಯನ್ನು ಸಂಪೂರ್ಣವಾಗಿ ಹೊರಗಿಡಲಾಗಿದೆ. ವಿದ್ಯಾರ್ಥಿಗಳು ಕಲಿಯಲೇಬೇಕೆಂದು ನಾವು ಕಡ್ಡಾಯಗೊಳಿಸಿರುವ ಕನಿಷ್ಠ ಸಾಮಾನ್ಯ ವಿಷಯಗಳಲ್ಲಿ ಕಲೆಗೆ ಸ್ಥಾನವಿಲ್ಲ. ಸಂಗೀತ, ನೃತ್ಯ, ಶಿಲ್ಪ, ವಾಸ್ತು, ಚಿತ್ರ ಮುಂತಾದ ಯಾವ ಕಲೆಯನ್ನೂ ನಮ್ಮ ಮಕ್ಕಳು ಶಿಕ್ಷಣದ ಭಾಗವಾಗಿ ಕಲಿಯುತ್ತಿಲ್ಲ. ಸರಕಾರೀ ಕಚೇರಿಗಳಲ್ಲಿ ಕೆಲಸ ಮಾಡಲು ಕಾರಕೂನರನ್ನು ತಯಾರು ಮಾಡಬೇಕಿದ್ದ ಬ್ರಿಟಿಷ್ ವ್ಯವಸ್ಥೆಯೇನೋ ಕಲೆಯನ್ನು ಶಿಕ್ಷಣದಿಂದ ಹೊರಗಿಟ್ಟಿತು; ಮನುಷ್ಯರನ್ನು ನಿರ್ಮಿಸುವ ಶಿಕ್ಷಣ ಕೊಡಬೇಕಾದ ನಾವು ಇನ್ನೂ ಯಾಕೆ ಕಲೆಯನ್ನು ಅಸ್ಪೃಶ್ಯ ಮಾಡಿದ್ದೇವೆ?

(7) ಬದುಕಿನ ಯಶಸ್ಸಿಗೆ ಬೇಕಾದ, ಮನಸ್ಸಿನ ದೃಢತೆಗೆ ಬೇಕಾದ, ವ್ಯಕ್ತಿತ್ವನಿರ್ಮಾಣಕ್ಕೆ ಅಗತ್ಯವಾದ ಯಾವ ಅಂಶಗಳನ್ನೂ ನಮ್ಮ ಪಠ್ಯಗಳು ಹೇಳಿಕೊಡುವುದಿಲ್ಲ. ದೇಹವನ್ನು ಸದೃಢವಾಗಿರಿಸಿಕೊಳ್ಳುವುದು ಹೇಗೆ, ಅಂದಂದಿನ ಕೆಲಸವನ್ನು ಅಂದಂದೇ ಮಾಡಿಮುಗಿಸುವ ಶ್ರದ್ಧೆ ಮೂಡಿಸಿಕೊಳ್ಳುವುದು ಹೇಗೆ, ಏಕಾಗ್ರತೆ ಸಾಧಿಸುವುದು ಹೇಗೆ ಮುಂತಾದ ಅತ್ಯವಶ್ಯಕ ಜೀವನಶಿಕ್ಷಣವನ್ನು ಪಠ್ಯ ಮುಟ್ಟುವುದೇ ಇಲ್ಲ! ನಮ್ಮ ಪಠ್ಯಕ್ರಮಕ್ಕೆ ಭಾರತೀಯ ಕುಟುಂಬವ್ಯವಸ್ಥೆ, ಭಾರತೀಯ ಹಬ್ಬ-ಹರಿದಿನಗಳು, ಸಂಪ್ರದಾಯಗಳು, ನಂಬಿಕೆಗಳು – ಈ ಯಾವುದರ ಮೇಲೂ ಗೌರವವಿಲ್ಲ. ವಿದೇಶದಿಂದ ಆಮದಾಗದ ಯಾವ ನಂಬಿಕೆಯಿದ್ದರೂ ಅದು ಮೌಢ್ಯ ಎಂಬ ಹಣೆಪಟ್ಟಿ ಹಚ್ಚುತ್ತದದು!

ಆಗಲೇ ಹೇಳಿದಂತೆ ಕಪ್ಪೆಗೆ ತಾನು ಕೆರೆಯಲ್ಲಿಲ್ಲ, ಬಾವಿಯೊಳಗೆ ಬಿದ್ದಿದ್ದೇನೆ ಎಂಬ ತಿಳಿವಳಿಕೆ ಮೂಡುವುದೇ ಶಿಕ್ಷಣದ ಪ್ರಾರಂಭ. ಆ ತಿಳಿವಳಿಕೆ ಹುಟ್ಟಿದ ಮೇಲೆ ಬಾವಿಯಿಂದ ಹೊರಜಿಗಿದು ಕೆರೆಗೋ ಸಾಗರಕ್ಕೋ ಹಾರುವ ದಾರಿ ಕಾಣುತ್ತದೆ; ಹಾರಬಲ್ಲೆ ಎಂಬ ಆತ್ಮವಿಶ್ವಾಸ ಮೂಡುತ್ತದೆ; ಹಾರಲು ಬೇಕಾದ ಚೈತನ್ಯವೂ ಸಂಚಯವಾಗುತ್ತದೆ. ನಾವು ಈಗ ನಮ್ಮ ಶಾಲೆ-ಕಾಲೇಜುಗಳಲ್ಲಿ ಪಡೆಯುತ್ತಿರುವ ಶಿಕ್ಷಣ ಭಾರತೀಯವಾದದ್ದಲ್ಲ; ಪಾಶ್ಚಾತ್ಯ ಜಗತ್ತು ತನ್ನ ಅನುಕೂಲಕ್ಕಾಗಿ ನಮ್ಮ ಮೇಲೆ ಹೇರಿದ್ದ ವ್ಯವಸ್ಥೆಯೊಂದರ ಕೆಟ್ಟ ಮುಂದುವರಿಕೆ ಮತ್ತು ಅನುಕರಣೆ

CC-0. Nepal Sanskrit Academy, Kathmandu Collection

ಅಷ್ಟೆ – ಎಂಬ ತಿಳಿವಳಿಕೆಯೇ ನಮಗೆ ಮೊದಲು ಮೂಡಬೇಕಾದ್ದು. ಇಂದಿನ ಶಿಕ್ಷಣದಿಂದ ಏನಾಗಿದೆ ಎಂಬುದರ ಅರಿವು ಹುಟ್ಟಿದರೆ ಏನಾಗಬೇಕಿದೆ ಎಂಬ ಪರಿಹಾರದ ದಾರಿ ತನ್ನಿಂತಾನೇ ನಮ್ಮೆದುರು ತೆರೆದುಕೊಳ್ಳಬಹುದು.

ಈ ಬರಹದ ಪ್ರಾರಂಭದಲ್ಲಿ ಶಿಕ್ಷಣ ಪದ್ಧತಿಯಲ್ಲಿ ಆಗಬೇಕಾದ ಬದಲಾವಣೆಯ ಮೂರು ಮಾದರಿಗಳನ್ನು ವಿವರಿಸಲಾಗಿದೆ. ಒಂದು – ಭಾರತೀಯ ಎಂಬ ಸಂಗತಿಗಳನ್ನು ಪಠ್ಯದ ನಡನಡುವೆ ಸೇರಿಸುವುದು; ಎರಡು – ಭಾರತೀಯವೆಂಬ ಅಂಶಗಳನ್ನು ಪಾಠಗಳಲ್ಲಿ ವಿಸ್ತೃತವಾಗಿ ತರುವುದು ಮತ್ತು ಮೂರು – ಸಂಪೂರ್ಣ ಭಾರತೀಯ ಎನ್ನಿಸುವ ಪಠ್ಯಕ್ರಮ ರಚಿಸುವುದು. ಈ ಮಾದರಿಗಳ ದಾರಿಯಲ್ಲಿ ನಾವಿನ್ನೂ ಮೊದಲ ಹಂತದಲ್ಲಿದ್ದೇವೆ. ಈ ಪ್ರಥಮ ಹಂತದಿಂದ ಯಾವೊಂದೂ ಪ್ರಯೋಜನವಿಲ್ಲ ಎಂಬುದು ಇದುವರೆಗಿನ ಎಲ್ಲ ಪ್ರಯೋಗಗಳಿಂದ ಸಿದ್ಧವಾಗಿದೆ. ಒಂದು ರೀತಿಯಲ್ಲಿ, ಈ ಇಡೀ ಲೇಖನವೇ ಈ ಮಾದರಿ ಹೇಗೆ ವಿಫಲವಾಗಿದೆ ಎಂಬುದನ್ನು ಬೇರೆ ಬೇರೆ ಉದಾಹರಣೆಗಳ ಮೂಲಕ ವಿವರಿಸುವ ಪ್ರಯತ್ನ ಎನ್ನಬಹುದು. ನಮ್ಮ ಪಠ್ಯದಲ್ಲಿ ಭಾರತೀಯ ಅಂಶಗಳನ್ನು ಬಾಕ್ಸ್ ಐಟಮ್ ಮಾಡಿ ಮಕ್ಕಳಿಗೆ ಉಣಬಡಿಸುವುದರಲ್ಲಿ ಯಾವ ಸಾರ್ಥಕತೆಯೂ ಇಲ್ಲ. ಆದ್ದರಿಂದ ಅದನ್ನು ಕೈಬಿಟ್ಟು ಉಳಿದೆರಡು ಮಾದರಿಗಳನ್ನು ನಾವು ಸದ್ಯಕ್ಕೆ ಕೈಗೆತ್ತಿಕೊಳ್ಳಬೇಕಿದೆ. ನಮ್ಮ ಅಂತಿಮ ಹಂತ ಮತ್ತು ಗುರಿ – ಮೂರನೇ ಮಾದರಿ. ಅಂದರೆ, ಸಂಪೂರ್ಣ ಭಾರತೀಯವಾಗಿರುವ ಶಿಕ್ಷಣಕ್ರಮವನ್ನು ಅಳವಡಿಸಿಕೊಳ್ಳುವುದು. ಅದರರ್ಥ, ನಾವು ಮತ್ತೆ ಗುರುಕುಲ ಪದ್ಧತಿಗೆ ಹಿಂದಿರುಗಿ ಬಿಲ್ವಿದ್ಯೆ, ಗಜಶಾಸ್ತ್ರಗಳನ್ನು ಕಲಿಯುವುದು ಎಂದಲ್ಲ. ಆಧುನಿಕತೆಯಲ್ಲಿ ಭಾರತೀಯತೆ ಮತ್ತು ಭಾರತೀಯತೆಯಲ್ಲಿ ಆಧುನಿಕತೆ ಮಿಳಿತವಾಗಿರುವ ಶಿಕ್ಷಣವನ್ನು ನಮ್ಮದೇ ವಿಧಾನಗಳ ಮೂಲಕ ದಕ್ಕಿಸಿಕೊಳ್ಳುವುದು ಮೂರನೇ ಮಾದರಿಯ ಆಶಯ.

ನಮ್ಮ ಪಠ್ಯಗಳನ್ನು ಇಷ್ಟು ದಶಕಗಳ ಕಾಲ ಎಡಪಂಥೀಯ ಮನಸ್ಥಿತಿಯ ನಿರಾಶಾವಾದಿ ಪಂಡಿತರು ಬರೆದರು. ಅವರ ಮನಸ್ಥಿತಿಗೆ ತಕ್ಕಂತೆ ನಮ್ಮ ಪಾಠಗಳೂ ವಿದೇಶೀ ಚಿಂತನಕ್ರಮದ ಪಡಿಯಚ್ಚಾಗಿದ್ದವು. ನೀರಸವಾಗಿದ್ದವು. ನಿರಾಶೆಯ ಮೂಟೆಯಂತಿದ್ದವು. ಭಾರತವನ್ನೂ ಭಾರತೀಯರನ್ನೂ ನಿರಂತರವಾಗಿ ಹೀಯಾಳಿಸಿ ಮೂದಲಿಸುವಂತಿದ್ದವು. ಭಾರತದಲ್ಲಿ ಏನೇನೂ ಇರಲಿಲ್ಲ; ಇಲ್ಲಿನವರು ಕಗ್ಗತ್ತಲಲ್ಲಿ ಕೂತಿದ್ದರು; ವಿದೇಶೀಯರು ಬಂದು ಬಲ್ಬ್ ಹಚ್ಚಿದರು ಎಂಬುದನ್ನೇ ಅವು ಸತ್ಯವೆಂದು ಇಷ್ಟು ವರ್ಷಗಳ ಕಾಲ ನಮ್ಮವರನ್ನು ನಂಬಿಸಿದವು. ಅಂಥ ನಿರಾಶೆಯ ಸ್ಥಿತಿಯನ್ನು ಪಠ್ಯಕ್ರಮದಿಂದಲೂ ಶಿಕ್ಷಣ ಪದ್ಧತಿಯಿಂದಲೂ ಅಳಿಸಿಹಾಕಿ ಲವಲವಿಕೆಯ ಸಂಗತಿಗಳನ್ನು ಮುಂದಿನ

CC-0. Nepal Sanskrit Academy, Kathmandu Collection

ತಲೆಮಾರಿಗೆ ಕಲಿಸಬೇಕಾಗಿದೆ. ರಕ್ತಹೀನತೆಯಿಂದ ಬಳಲುತ್ತಿರುವಂಥ ಭಾರತೀಯ ಶಿಕ್ಷಣಕ್ರಮಕ್ಕೆ ಭಾರತೀಯತೆಯ ರಕ್ತಪೂರಣ ಮಾಡಬೇಕಾಗಿದೆ. ದಾರಿಯೇನೋ ದೂರವಿದೆ. ಪುಟ್ಟ ಹೆಜ್ಜೆಗಳೊಂದಿಗೆ ಪಯಣ ಪ್ರಾರಂಭವಾಗಬೇಕಿದೆ.

❀ ❀ ❀

CC-0. Nepal Sanskrit Academy, Kathmandu Collection

प्राचीनाधिगमपद्धतिः

✍ डा. बी.जी. भाग्यलक्ष्मीः
प्रशासनिकसदस्या, तुमकूरु विश्वविद्यानिलयः

भारतस्य प्रथमसाहित्यं नाम वेदवाङ्मयम् । वेदाः चत्वारः । ऋग्यजुस्सामाथर्वाः इति । वेदकालतः भारते शिक्षणमासीत् ।

एतद्देशप्रसूतस्य सकाशादग्रजन्मनः ।
स्वं स्वं चरित्रं शिक्षेरन् पृथिव्यां सर्वमानवाः ॥ (म.स्मृ.)

यस्मिन् भारते जातस्य प्रत्येकस्य मानवस्य सच्चारित्रेण इतरदीशीयः सर्वे जनाः भवन्ति। देवपितृऋषिप्रभुतिभिः ऋणैः सह जाताः जनाः ऋषिऋणात् मुक्त्यर्थं प्राचीनकालादेव शिक्षणे प्रवृत्ताः आसन्। वेदकाले शिक्षणस्य अभ्यासः, आध्यात्मिकविचारं तथा नैतिकमोल्यानि आधृत्य जीवनस्य समग्रविषयेषु भवति स्म। व्यक्तेः मनः नश्वरजगतः विमुखीकृत्य शाश्वतसत्ये स्थापयितुं साहाय्यं करोति शिक्षणम् । (भा.शि. इ. पृ.सं.२०)

प्राचीनभारते शिक्षणाय महत्त्वं यच्छन्ति स्म। भारतीयऋषयः शिक्षणं जीवनस्य अनिवार्यमङ्गमिति अवदन्। शिक्षणात् मनुष्यस्य जीवनं परिष्कृतं समुन्नतं सुखदं च भवति। यः शिक्षणं प्राप्नोति सः आत्मनिर्भरः भवति। तथैव परिवारस्य समाजस्य च निर्माणे शिक्षणस्य योगदानं बहु वर्तते। शिक्षायाः उद्देशाः अपि उत्तमाः आसन्। शिक्षा तु अधिशीलम्, अधिचित्तम्, अधिप्रज्ञा इति २४ वर्षाणाम् आसीत्।

अधिगमपद्धतयः

पूर्वं गुरुकुलानि शिक्षणकेन्द्राणि आसन्। तत्रस्थाः आचार्याः एव बोधयन्ति स्म। तपः-स्वाध्यायः प्रवचनम् च इति पाठनाधिगमपद्धतिरासीत्। संवादः, प्रश्नविधिः, प्रयोगः, परिशीलनं इति सामान्यतन्त्राणि आसन् अधिगमे ।

अधिगमे प्रथमं तु श्रवणं मननं निदिध्यासनम् इति त्रीणि सोपानानि भवन्ति स्म। द्वादशवर्षाणि यावत् गुरुसेवया अध्ययनं भवति स्म। गुरुकुलशिक्षणे चरित्रनिर्माणं व्यक्तित्वनिर्माणं च भवति स्म। गुरुकुलानि प्रायः नदीतीरेषु विद्यन्ते स्म। अतः तत्र उत्तमे वातावरणे बोधः प्राकृतिकप्रयोगालयः उत्तमज्ञानभण्डारः प्राप्यते स्म। अध्येता गुरोः नैकट्यं प्राप्य ज्ञानं संपादयति स्म। परस्परसहवासः अनिवार्यमासीत् तदानीन्तनकालस्य शिक्षणे ।

CC-0. Nepal Sanskrit Academy, Kathmandu Collection

विद्या द्विविधा। परा अपरा च। मुण्डकोपनिषदि (१.१.४,५) अङ्गीरसः शौनकं वदति द्वे विद्ये वेदितव्ये इति ह स्म ब्रह्मविदो वदन्ति परा चैवापरा। तत्रापरा ऋग्वेदो यजुर्वेदः शिक्षा कल्पो व्याकरणं निरुक्तं छन्दो ज्योतिषमिति। अथ परा यया तदक्षरमधिगम्यते। अक्षरब्रह्मणः प्रतिपादनं करोति परा विद्या। अपरा विद्या तु जीविका विद्या इति कथ्यते। पूर्वं जिविकाविद्याः आसन् इति छान्दोग्योपनिषदि(७.२.१) उदाहरणं दृश्यते यः देवर्षिनारदः सनत्कुमारम् उपेत्य स्वाधीतानां विद्यानां विषये विवृणोति। यथा-ऋग्वेदं भगऽवोध्येमि यजुर्वेदं सामवेदमाथर्वणं चतुर्थमितिहासपुराणं पञ्चमं वेदानां वेदं पित्र्यं राशिं दैवं निधिं वाकोवाक्यमेकायनं देवविद्यां ब्रह्मविद्यां भूतविद्यां क्षत्रविद्यां नक्षत्रविद्यां सर्पदेवजनविद्यामेतद् भगवोऽध्येमि इति। एवं जिविकाविद्यायाः अपि प्रामुख्यता आसीत् इति ज्ञायते।

उपनिषत्काले शिक्षणस्य पूर्णपरिचयं प्राप्नुमः। तत्र गुरुशिष्यौ अध्ययनात् प्राक् भगवन्तं प्रार्थयेते स्म । तत् कठोपनिषदि एवमस्ति -

सहनाववतु सह नौ भुनक्तु। सहवीर्यं करवावहै ।
तेजस्विनावधीतमस्तु मा विद्विषावहै ॥

शिक्षणे तपः, ब्रह्मचर्यं, श्रद्धा च आसीत्। शिष्यः स्वयम् अन्वेषकः आसीत् गुरोः मार्गदर्शनेन। तथा गुरवः शिष्यान् व्यकसयन् प्राबोधयन् च। तदा शिक्षायां निर्भीतिः दृश्यते स्म। ज्ञानार्थं श्रवणं, मननं, निदिध्यासनम् इति घ-त्रयम्। शिष्यः स्वस्य कृते अपि च गुरोः कृते यशः प्रार्थयते स्म। तैत्तरीयोनिषदि (१.३) सह नौ यशः। सह नौ ब्रह्मवर्चसम् इति शिष्यः प्रार्थयते। एवं गुरुशिष्ययोः संबन्धः उत्तमतया आसीत्।

उपनिषदः अवलोकयामश्चेत् काचित् शिक्षापरम्परा आसीत् इति ज्ञायते। विद्या कथम् अधिगता भवति अथवा ज्ञानप्रदानाय शिक्षाव्यवस्था कथं स्यात् इति तैत्तरीयोपनिषदि शिक्षावल्ल्यामेव पञ्चमहासंहितासु अन्यतमायां संहितमायां दर्शिता अस्ति। अथाधिविद्यम्। आचार्यः पूर्वरूपम्। अन्तेवास्युत्तररूपम्। विद्या सन्धिः। प्रवचनं सन्धानम्। इत्यधिविद्यम्। (१.३.) अत्र विद्यायाः प्राप्तिविषये उच्यते- आचार्यः पूर्वरूपम्, इत्युक्ते सः ज्ञानी। शिष्यः उत्तररूपं नाम आचार्यात् विद्या एतमागच्छेत्। यथा जलं उपरिष्टात् अधः प्रवहति तथा। एतयोर्मध्ये अस्ति विद्या इति सन्धिः। प्रवचनम् अथवा उपदेशः एव सन्धानम्। यः जिज्ञासुः गुरुम् अन्विष्य गच्छति। गुरुः तस्मै स्वज्ञानधारां प्रददाति इति।

पूर्वं गुरुकुलेषु उत्तमशिक्षणमासीत् इति कारणतः, तत्र सरलजीवनम्, उच्चचिन्तनम् इति द्रष्टुं शक्यते स्म। तदा शिक्षणपद्धतौ चत्वारि सोपानानि आसन्।

1. अधीतिः (ज्ञानम्) 2. बोधः (विशेषज्ञानं सामर्थ्यं च)
3. आचरणम् 4. प्रचारणम्। इति

CC-0. Nepal Sanskrit Academy, Kathmandu Collection

प्रवचनम् :- पूर्वम् आचार्यः प्रवचनमाध्यमेनैव बोधयति स्म। प्रवचने शिक्षणपद्धतयः, शिक्षणव्यूहाः, शिक्षणयुक्तयः, शिक्षासूत्राणि, शिक्षणकौशलानि इत्यादीनि अन्तर्भवन्ति। अत्र बह्व्यः शिक्षणपद्धतयः दृश्यन्ते।

- ✦ सूत्रपद्धतिः
- ✦ प्रत्यक्षपद्धतिः
- ✦ प्रश्नोत्तरपद्धतिः
- ✦ व्याख्यापद्धतिः
- ✦ शास्त्रार्थपद्धतिः/वादविवादपद्धतिः
- ✦ प्रयोगपूर्वकाधिगमपद्धतिः
- ✦ कथाकथनप्रविधिः/आख्यायिकाप्रकारः
- ✦ अन्वेषणविधिः

एवं विभिन्नविधिभिरधिगमः आसीत्प्राचीनकाले। तेषां विधीनां विवरणमेवं भवति।

सूत्रपद्धतिः :- सङ्क्षेपेणाथवा अल्पाक्षरैः यदुच्यते सा पद्धतिः सूत्रपद्धतिः। अत्र सूत्ररूपेण विचारबोधनं विद्यते। यथा-छान्दोग्योपनिषदि मूलमन्विच्छ (६.८.४)। अत्र श्वेतकेतुः पितरम् आरुणिं शरीरस्य क्व मूलम् इति पृच्छति। तदा पुत्रम् एवं सूत्ररूपेण अवदत्। तथैव माण्डूक्योपनिषदि एवमस्ति। यथा-नान्तः प्रज्ञं न बहिः प्रज्ञं नोभयतः प्रज्ञं न प्रज्ञानधनं न प्रज्ञं नाप्रज्ञम्। अत्र आत्मा ज्ञातव्यः इति आचार्यस्य बोधनं वर्तते।

अन्वेषणविधिः :-प्राचीनकालस्य शिक्षणस्य अधिगमेषु अन्यतमः विधिः अयम्। अत्र मनुष्यः स्वप्रयासेन ज्ञानं प्राप्तुं शक्नोति। अन्येन प्रदत्तं ज्ञानं शाब्दिकरूपेण ग्रहीतुं शक्नोति, परन्तु तत् आत्मसात् कर्तुं न शक्नोति। शिक्षार्थी यदि स्वयं ज्ञानस्यानुभूतिं प्राप्नोति तर्हि आत्मसात् कर्तुं शक्नुयात्। अध्यापकः छात्राणां मार्गदर्शनं कर्तुं शक्नोति, परन्तु ज्ञानस्य आत्मीकरणं छात्रेण स्वयं करणीयं भवति। एवं जिज्ञासुः एव अन्वेषणद्वारा ज्ञानं प्राप्नुयात् शिक्षकस्य मार्गदर्शनेन इति।

प्रयोगप्रणाली :-अत्र छात्रेण ये विषयाः प्रयोगपूर्वकेण ज्ञायन्ते तान् तथैव ज्ञायते। आहत्य पुस्तकाधिगमस्य अपेक्षया प्रयोगपूर्वकाधिगमः सरलः रोचकः च भवति। गुरुः यदा छात्रं प्रयोगपूर्वकम् अधिगन्तुं प्रेरयति तदा छात्रः संपूर्णतया स्वयं निमग्नो भूत्वा गूढतत्त्वान्यपि सप्रयोगमधिगच्छति। भगवतः सर्वव्यापकत्त्वं दर्शयितुं गुरुः नीरप्रलीनलवणप्रयोगम् अध्यापयति। एतत छान्दोग्योपनिषदि दृश्यते, यत् आरुणिः पुत्रं बोधयति। लवणमेतदुदकेऽवधायाथ मा प्रातरुपसीदथा इति। स ह तथा चकार। होवाच यद्दोषा लवणमुदकेऽवाधा अङ्ग तदाहरेति। तद्धावमृश्य न विवेद। यथा विलीनमेवाङ्गस्यान्तादाचामेति, कथमिति। लवणमिति मध्यादाचामेति, कथमिति। लवणमिति। अन्तादाचामेति, कथमिति।

CC-0. Nepal Sanskrit Academy, Kathmandu Collection

लवणमिति। अभिप्रास्यैतत् अथ मोपसीदथा इति। तद्ध तथा चकार। तच्छश्वत् संवर्तते। इति। एवमेव अग्रे अन्यान्यप्रयोगैः दर्शयति गुरुः। विषयाणां बोधनक्रमः प्रयोगप्रणाली द्वारा भवति स्म।

प्रत्यक्षपद्धतिः :- शिक्षणपद्धतीषु इयं पद्धतिः बहु प्रभावशाली मनोवैज्ञानिकी, विशिष्टापद्धतिः च वर्तते। अत्र प्रत्यक्षप्रदर्शनं प्रयोगपुरस्सरं च बोध्यते आचार्येण। छान्दोग्योपनिषदि (६.१२.१) प्रत्यक्षपद्धतेः विचारः एवमस्ति - न्यग्रोधफलमाहरेतीदं भगव इति। भिन्धीति। भिन्नं भगव इति। किमत्रपश्यसि? इत्यण्व इयेमा धाना इति। आसाम् अङ्गैकां भिन्धीति। भिन्ना भगव इति। किमत्र पश्यसीति। न किञ्चन भगव इति। अत्र उच्यन्ते यत् स्थूलात् सूक्ष्मं प्रति, सरलात् कठिनं प्रति, ज्ञातात् अज्ञातं प्रति इत्यादीनि शिक्षासूत्राणि।

प्रश्नोत्तरपद्धतिः :- उपनिषत्सु इयं पद्धतिः बहुत्रानुसृता। प्रश्नोपनिषत् प्रश्नोत्तरपद्धत्या एवारभ्यते। सूक्ष्मतत्त्वस्य शिक्षणमनेन क्रमेण दीयते। महर्षिं पिप्पलादं केचन जिज्ञासवः उपसर्पन्ति। तान् उद्दिश्य पिप्पलादेनोक्तम्- तान् ह स ऋषिरुवाच। भूय एव तपसा ब्रह्मचर्येण श्रद्धया संवत्सरं संवत्स्यथ, यथाकामं प्रश्नान् पृच्छत, यदि विज्ञास्यामः सर्वं ह वो वक्ष्याम इति। तेषु अन्यतमः कबन्धी कात्यायनः उपेत्य अपृच्छत्, भगवन् कुतो ह वा इमाः प्रजाः प्रजायन्त इति। तस्मै स होवाच प्रजाकामो वै प्रजापतिः स तपोऽतप्यत, स तपस्तप्त्वा स मिथुनमुत्पादयते रयिं च प्राणं चेति, एतौ मे बहुधा प्रजाः करिष्यत इति। अत्र प्रजापतिः इत्युक्तेः परब्रह्मणः सगुणरूपः इति।

वादविवादपद्धतिः :- वादेवादे जायते तत्त्वबोधः इति यत् वचनं श्रूयते तत् तत्त्वनिर्णयाय संवादः, वादः, वादविवादः शास्त्रार्थः अपेक्षितः। केनापि किमपि कथितमिति तदेव प्रमाणं नानुमन्यते। तदर्थं हेतुप्रदनापुरस्सरं प्रमाणमावश्यकम्। इयं पद्धतिरेव शास्त्रार्थपद्धतिः अथवा वादविवादपद्धतिः इति। यथा- जनकस्य सभायां याज्ञवल्क्य-उषस्तचाक्रायणयोः शास्त्रार्थः दृश्यते। (बृ.उ.३.४.१)

व्याख्यापद्धतिः :- विषयस्य विस्तरशः स्पष्टीकरणम् अनया पद्धत्या क्रियते। छान्दोग्योपनिषदि (१.१.२) अस्ति - ओमित्येदक्षरमुद्गीथमुपासीत। ओमिति ह्युद्गायति तस्योपाख्यानम। अत्र उपव्याख्यानं पदेनैव ज्ञायते। एषां भूतानां पृथिवी रसः पृथिव्या आपो रसः। अपामोषधयो रस ओषधीनां पुरुषो रसः पुरुषस्य वाग्रसो वाच ऋग्रस ऋचः साम रसः साम्न उद्गीथो रसः।

कथाकथनविधिः/आख्यायिकाप्रकारः :- उपनिषत्सु कथारूपेण विचारः आरभ्यते। यथा कठोपनिषदि आरम्भे दृश्यते यत् वाजश्रवस-नचिकेतसोः उपाख्यानम्। तथैव केनोपनिषदि उमेन्द्रयोः कथा (२.३)। छान्दोग्योपनिषदि प्राणमहत्ववर्णनपरा रुचिरा

CC-0. Nepal Sanskrit Academy, Kathmandu Collection

